ಅಧ್ಯಾತ್ಮಗ್ರಂಥಾವಳಿ

ಪುಷ್ಪದಂತವಿರಚಿತ

# ಶಿವಮಹಿಮ್ನಃ ಸ್ತೋತ್ರಮ್

(ಪ್ರತಿಪದಾರ್ಥ, ತಾತ್ಪರ್ಯ, ವಿವರಣೆಗಳೊಡನೆ)

ಅನುವಾದಕರು:

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೮೭

ಪ್ರಕಾಶಕರು:

ಅಧ್ಯಾತ್ಮಪ್ರಕಾಶಕಾರ್ಯಾಲಯ:

ಹೊಳೆನರಸೀಪುರ

1974

ಒಂದನೆಯ ಮುದ್ರಣ ೫೦೦ ಪ್ರತಿಗಳು ೧೯೫೩
ತಿದ್ದಿದ ಎರಡನೆಯ ಸಂಸ್ಕರಣ ೨೦೦೦ ಪ್ರತಿಗಳು ೧೯೭

ದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಮುದ್ರಕರು :
ವೈ. ನರಸಪ್ಪ,
ಅಧ್ಯಾತ್ಮಪ್ರಕಾಶ ಮುದ್ರಣಾಲಯ,
ಹೊಳೆನರಸೀಪುರ.

# ಬಿನ್ನಹ

---

## (ಹೊಸ ಮುದ್ರಣಕ್ಕೆ)

ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳವರು ೧೯೫೩ ನೆಯ ವರ್ಷದಲ್ಲಿ ಬರೆದು ಅನುಗ್ರಹಿಸಿದ್ದ ಈ ಗ್ರಂಥವನ್ನು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಮೂಲಕ ಪ್ರಕಟಿಸಿ ಮರಿಅಚ್ಚು (Re-Print) ರೂಪದಲ್ಲಿ ಪ್ರತ್ಯೇಕಗ್ರಂಥವಾಗಿಯೂ ಹೊರತರಲಾಗಿತ್ತು. ಜನಪ್ರಿಯವಾದ ಈ ಗ್ರಂಥದ ಪ್ರತಿಗಳೆಲ್ಲವೂ ಮುಗಿದುಹೋಗಿದ್ದುದರಿಂದ ಈಗ ಮತ್ತೆ ಬೆಳಕಿಗೆ ತರಲಾಗಿದೆ.

ಈ ಸಂಸ್ಕರಣದಲ್ಲಿ ಗ್ರಂಥದ ಆಕಾರವು ಬದಲಾಗಿದೆ. ಅಚ್ಚಿನ ತಪ್ಪುಗಳನ್ನು ತಿದ್ದಿ ಗ್ರಂಥವನ್ನು ಒಮ್ಮೆ ಶೋಧಿಸಿ ಮುದ್ರಣ ಮಾಡಲಾಗಿದೆ. ಈ ಕಾರ್ಯಗಳಲ್ಲಿ ಸಂಸ್ಥೆಯ ಪಂಡಿತರಾಗಿರುವ ಅಧ್ಯಾತ್ಮವಿದ್ಯಾಪ್ರವೀಣ ವೇ॥ ಲಕ್ಷ್ಮೀನರಸಿಂಹಮೂರ್ತಿಗಳು ಸಹಕರಿಸಿರುತ್ತಾರೆ.

ಶ್ರೀಶ್ರೀಗಳವರು ಎಂದಿನಂತೆಯೇ ಈ ಗ್ರಂಥದ ಮುದ್ರಣ, ಪ್ರಕಾಶನ ಪ್ರಚಾರಗಳ ಹಕ್ಕೆಲ್ಲವನ್ನೂ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೇ ಸಮರ್ಪಿಸಿದ್ದಾರೆ.

ವಾಚಕರು ಎಂದಿನಂತೆ ಆದರದಿಂದ ಈ ಗ್ರಂಥವನ್ನು ಬರಮಾಡಿಕೊಳ್ಳುವರೆಂದು ಆಶಿಸಲಾಗಿದೆ.

ಹೊಳೆನರಸೀಪುರ
10-7-74

ಪ್ರಕಾಶಕರು.

# ಪೀಠಿಕೆ

ಶಿವಮಹಿಮ್ನಃಸ್ತೋತ್ರವು ಬಹಳ ಪ್ರಸಿದ್ಧವಾದದ್ದು. ಯಜುರ್ವೇದದ ರುದ್ರಾಧ್ಯಾಯವು ಹೇಗೆ ಸರ್ವಜನಪ್ರಿಯವಾಗಿರುತ್ತದೆಯೋ ಹಾಗೆಯೇ ಶಿವಮಹಿಮ್ನಃಸ್ತೋತ್ರವೂ ಶಿವಭಕ್ತರಿಗೆಲ್ಲ ಅತ್ಯಂತಪ್ರಿಯವಾಗಿರುತ್ತದೆ. ಈ ಸ್ತೋತ್ರವು ಸಣ್ಣದಾಗಿದ್ದು ಭಾಷೆಯು ಸುಂದರವಾಗಿರುವದೂ ಪದ್ಯಗಳು ಹಾಡುವದಕ್ಕೆ ಅನುಕೂಲವಾಗಿರುವಂತೆ ಲಲಿತಪದಗಳಿಂದೊಡಗೂಡಿರುವದೂ ಜನರ ಮನಸ್ಸು ಈ ಸ್ತೋತ್ರದ ಕಡೆಗೆ ಬಹಳವಾಗಿ ಒಲಿದಿರುವದಕ್ಕೆ ಕಾರಣವಾಗಿರುತ್ತದೆ. ಬಹಳ ಜನರು ಇದನ್ನು ಕಂಠಸ್ಥವಾಗಿ ಮಾಡಿಕೊಂಡು ಸಾಯಂಕಾಲದಲ್ಲಿ ಶಿವಕವಚದಂತೆಯೇ ಪಠಿಸುತ್ತಾರೆ; ಅನೇಕರು ಶಿವದೇವಾಲಯಗಳಲ್ಲಿ ಅಭಿಷೇಕವಾಗುವ ಕಾಲದಲ್ಲಿ ಕೂಡ ಇದನ್ನು ಪಠಿಸುತ್ತಾರೆ. ಅರ್ಥಾನುಸಂಧಾನಮಾಡುವವರಿಗಂತೂ ಶಿವಭಕ್ತಿಯು ಉಕ್ಕುತ್ತದೆ. ಸಗುಣನಿರ್ಗುಣಶಿವನ ಅನಂತಮಹಿಮೆಯನ್ನು ಕೊಂಡಾಡುವದರಿಂದ ಇದಕ್ಕೆ "ಶಿವಮಹಿಮ್ನಃಸ್ತೋತ್ರ"ವೆಂಬ ಹೆಸರು ಅನ್ವರ್ಥವಾಗಿರುತ್ತದೆ.

ಇಂದೂರು ನಗರದಿಂದ[1] ಆಗ್ನೇಯಕ್ಕೆ ಸುಮಾರು ಐವತ್ತು ಮೈಲಿಗಳ ದೂರದಲ್ಲಿ ಓಂಕಾರೇಶ್ವರ (ಮಾನ್ಧಾತಾ) ಎಂಬ ತೀರ್ಥವಿದೆ. ಅಲ್ಲಿ ಮಮಲೇಶ್ವರದೇವಾಲಯವೆಂಬ ಹೆಸರಿನ ದೇವಸ್ಥಾನವೂ ಒಂದುಂಟು. ಜ್ಯೋತಿರ್ಲಿಂಗಗಳ ಗಣನೆಯಲ್ಲಿ 'ಓಂಕಾರಮಮಲೇಶ್ವರಮ್' ಎಂದಿರುವ ಶ್ಲೋಕಪಾಠದಲ್ಲಿ 'ಅಮರೇಶ್ವರಮ್' ಎಂದೇ ಇರುತ್ತದೆ; ಆದರೆ ಈಗ ರೂಢಿಯಲ್ಲಿ ಮಮಲೇಶ್ವರ ಎಂದಾಗಿರುತ್ತದೆ. ಇಲ್ಲಿರುವ ಶಿಲಾಶಾಸನಗಳಲ್ಲಿ 'ಅಮರೇಶ್ವರ'ನೆಂಬ ಹೆಸರೇ ಇದೆಯಂತೆ. ನರ್ಮದಾನದಿಗೆ ಉತ್ತರದಲ್ಲಿ ಓಂಕಾರೇಶ್ವರಮಂದಿರವೂ ದಕ್ಷಿಣದಲ್ಲಿ ಮಮಲೇಶ್ವರಮಂದಿರವೂ ಇವೆ. ಈ ಮಮಲೇಶ್ವರ (ಅಥವಾ ಶುದ್ಧರೂಪದಲ್ಲಿ ಅಮರೇಶ್ವರ) ಮಂದಿರವು ಓಂಕಾರೇಶ್ವರಕ್ಕಿಂತಲೂ ಪ್ರಾಚೀನವೆಂದು ತಿಳಿಯಬರುತ್ತದೆ. ಮಹಾರಾಣಿ ಅಹಲ್ಯಾಬಾಯಿಯ ಕಾಲದಿಂದಲೂ ಇಲ್ಲಿ ಲಿಂಗಾರ್ಚನವು ನಡೆಯುತ್ತಿದೆ.

---

1. ಈ ಪೀಠಿಕೆಯಲ್ಲಿ ಕೊಟ್ಟಿರುವ ಐತಿಹ್ಯ ಸಮಾಚಾರಗಳಿಗೆ ಗೋರಖಪುರದಲ್ಲಿ ಪ್ರಕಟವಾಗುತ್ತಿರುವ ಹಿಂದೀ 'ಕಲ್ಯಾಣ'ವೆಂಬ ಮಾಸಪತ್ರಿಕೆಯ ಶಿವಾಂಕದಲ್ಲಿ ಪ್ರೊ॥ ಶ್ರೀರಾಮೇಶ್ವರ ಗೌರೀಶಂಕರ ಓಝಾ ಎಮ್. ಎ., ಅಜಮೇರ-ಇವರ ಲೇಖನವು ಆಧಾರವಾಗಿರುತ್ತದೆ.

ಈ ಮಂದಿರದ ಸಭಾಮಂಟಪ ಮತ್ತು ಗರ್ಭಗೃಹಗಳ ನಡುವೆ ಇರುವ ಒಂದು ಕಗ್ಗತ್ತಲೆಯ ಕೋಣೆಯ ಗೋಡೆಗಳ ಮೇಲೆ ಅನೇಕ ಲೇಖನಗಳಿವೆ: ಅವುಗಳಲ್ಲಿ ಈ ಶಿವಮಹಿಮ್ನಃಸ್ತೋತ್ರವೊಂದು. ಈ ಸ್ತೋತ್ರದಲ್ಲಿ ಮೂವತ್ತೊಂದು ಶ್ಲೋಕಗಳು ಕೊನೆಯಲ್ಲಿ 'ಇತಿ ಶ್ರೀ ಮಹಿಮ್ನಃಸ್ತವಂ ಸಮಾಪ್ತಮಿತಿ' ಎಂದು ಬರೆದಿದೆ. ಇದು ಈಗ ಸುಮಾರು ೯೦೦ ವರ್ಷಗಳ ಹಿಂದೆ ಗೋಡೆಯಲ್ಲಿ ಭಟ್ಟಾರಕ ಗಂಧರ್ವರಾಜನೆಂಬಾತನಿಂದ ಲಿಖಿತವಾದದ್ದು.

ಈ ಶಿಲಾಲೇಖದ ಆಧಾರದಿಂದ ಶಿವಮಹಿಮ್ನಃಸ್ತೋತ್ರದಲ್ಲಿ ಮೊದಲು ೩೧ ಶ್ಲೋಕಗಳು ಮಾತ್ರ ಇದ್ದವೆಂದು ಹೇಳಬಹುದಾಗುತ್ತದೆ. ದೇವಗಿರಿ ಯಲ್ಲಿ ರಾಜನಾಗಿದ್ದ ಕೃಷ್ಣದೇವನ (೧೨೪೭-೬೦) ಕಾಲದಲ್ಲಿ ಜೈನಾ ಚಾರ್ಯಮುನಿರಾಜ ಜಯಚಂದ್ರನ ಶಿಷ್ಯನಾದ ಸೋಮಸುಂದರನೆಂಬಾತನು 'ಶ್ರೀ ಯುಗಾದಿ ದೇವಮಹಿಮ್ನಃಸ್ತವ'ವೆಂಬ ಸ್ತೋತ್ರವನ್ನು ಬರೆದು ಅದರ ಪ್ರತಿಯೊಂದು ಶ್ಲೋಕದ ಕೊನೆಯ ಚರಣದಲ್ಲಿಯೂ ಶಿವಮಹಿಮ್ನದ ಕೊನೆಯ ಚರಣಗಳನ್ನು ಸೇರಿಸಿರುತ್ತಾನೆ; ಇದರಲ್ಲಿಯೂ ಮೂವತ್ತೊಂದು ಶ್ಲೋಕಗಳು ಮಾತ್ರ ಕಂಡುಬರುತ್ತವೆ. ಈ ಸ್ತೋತ್ರವು ಜನಾನುರಾಗಕ್ಕೆ ಪಾತ್ರವಾದ್ದರಿಂದ ಇದಕ್ಕೆ ಅನೇಕರು ಟೀಕೆಗಳನ್ನು ಬರೆದಿರುತ್ತಾರೆ. ಇದುವರೆಗೆ ಅಮರಕಂಠ, ಅಹೋಬಲ, ಉಪದೇವ, ಕೃಷ್ಣನೃಪ, ಕೈವಲ್ಯಾನಂದ, ಗೋಪಾಲಭಟ್ಟ (ಸ್ತುತಿಚಂದ್ರಿಕಾ), ಗೋವಿಂದರಾಮ (ಮಹಿಮ್ನಃಸ್ತವ ಪ್ರಕಾಶಿಕಾ), ಗೋವಿಂದಾನಂದ (ಕೌಮುದೀ), ಜಗದೀಶಪಂಚಾನನ, (ರಹಸ್ಯಪ್ರಕಾಶ), ದೇಚಯಾತ್ಮಾ, ಪರಮಾನಂದಚಕ್ರವರ್ತೀ, ಭಗೀರಥ ಮಿಶ್ರ, ಮಧುಸೂದನಸರಸ್ವತೀ, ರಾಮಜೀವನತರ್ಕವಾಗೀಶ, ರಾಮದೇವ, ರಾಮಾನಂದತೀರ್ಥ, ವಿಶ್ವೇಶ್ವರಸರಸ್ವತೀ, ಬೋಪದೇವ (ಪಂಜಿಕಾ ದ್ವ್ಯರ್ಥೀ), ಶಂಕರ, ಶ್ರೀಕೃಷ್ಣತರ್ಕಾಲಂಕಾರ, ಶ್ರೀಧರಸ್ವಾಮಿ (ಶಿವವಿಷ್ಣು ಪಕ್ಷೋಭಯಾರ್ಥಿಕಾ ಮಹಿಮ್ನಃಸ್ತವಟೀಕಾ), ಹರಗೋವಿಂದ ಶರ್ಮ (ವೈಷ್ಣವೀ)– ಇಷ್ಟು ಟೀಕೆಗಳು ಇರುವದು ತಿಳಿದುಬಂದಿದೆ. ಪ್ರಕೃತ ನಾವು ಪ್ರಕಟಿಸಿರುವದು ನಿರ್ಣಯಸಾಗರದಲ್ಲಿ ಪ್ರಕಟಿತವಾಗಿರುವ ಮಧುಸೂದನೀ ಟೀಕಾಸಮೇತವಾದ ಮಹಿಮ್ನಃಸ್ತೋತ್ರದ ಆಧಾರದಿಂದ. ಮಧುಸೂದನಸರ

ಸ್ತುತಿಗಳು '೩೨ರಿಂದ ೩೯ನೆಯ ಶ್ಲೋಕದವರೆಗಿನ ಗ್ರಂಥವು ಸ್ತೋತ್ರದಲ್ಲಿಯೇ
ಸೇರಿಸಲ್ಪಟ್ಟಿರುವದರಿಂದ ಸುಗಮವೂ ಆಗಿದೆ' ಎಂದು ಬರೆದಿರುತ್ತಾರೆ. ಅವರ
ಕಾಲಕ್ಕೇ ಈ ಶ್ಲೋಕಗಳು ಸ್ತೋತ್ರದಲ್ಲಿ ಅಂತರ್ಗತವೆಂದು ಭಾವಿಸಿದವರೂ
ಹಲವರು ಇದ್ದಿರಬಹುದೆಂದು ಇದರಿಂದ ಊಹಿಸುವದಕ್ಕೆ ಅವಕಾಶವಿದೆ.
ಇಲ್ಲಿಂದ ಮುಂದಕ್ಕೆ ೩೭ರಿಂದ ೪೩ರ ವರೆಗಿನ ಶ್ಲೋಕಗಳನ್ನು ಈಗಿನ ಪಾಠ
ಕ್ರಮವನ್ನು ಅನುಸರಿಸಿ ಸೇರಿಸುತ್ತೇವೆಂದು ಸಂಪಾದಕರಾದ ವಾಸುದೇವ
ಶರ್ಮರು ಬರೆದಿರುತ್ತಾರೆ. ಗ್ರಂಥವು ಪುಷ್ಪದಂತನೆಂಬ ಗಂಧರ್ವರಾಜನಿಂದ
ರಚಿತವಾದದ್ದೆಂಬ ವಿಷಯವು ಈ ಶ್ಲೋಕಗಳಲ್ಲಿ ಮಾತ್ರವೇ ಕಂಡುಬರು
ತ್ತದೆ. ಆದರೆ ನಾವು ಮೇಲೆ ಹೇಳಿರುವಂತೆ ಮೂಲದಲ್ಲಿ ಮೊದಲು ೩೧
ಶ್ಲೋಕಗಳು ಮಾತ್ರ ಇದ್ದವೆಂಬುದಕ್ಕೆ ಆಧಾರವು ಪ್ರಬಲವಾಗಿರುವದರಿಂದ
ನಿಜವಾದ ಗ್ರಂಥಕರ್ತನು ಯಾರು? ಸ್ತೋತ್ರದ ಮಿಕ್ಕ ಶ್ಲೋಕಗಳನ್ನು
ಯಾವಾಗ ಯಾರು ಸೇರಿಸಿದರು?– ಎಂಬುದನ್ನು ತತ್ತ್ವಶೋಧಕರೇ
ನಿರ್ಣಯಿಸಬೇಕಾಗಿರುತ್ತದೆ.

ಇದಂತಿರಲಿ. ಈ ಶ್ಲೋಕಕ್ಕೆ ಮಧುಸೂದನಸರಸ್ವತಿಗಳು ಶಿವನ
ಪರವಾಗಿಯೇ ಅಲ್ಲದೆ ವಿಷ್ಣುವಿನ ಪರವಾಗಿಯೂ ಅರ್ಥವನ್ನು ಬರೆದಿರು
ತ್ತಾರೆ. ವಿಷ್ಣುಪರವಾಗಿ ಬರೆದಿರುವ ಅರ್ಥಗಳು ಅಷ್ಟು ಸರಳವಾಗಿ ಮೂಲ
ಶ್ಲೋಕದ ಅಕ್ಷರಕ್ಕೆ ಹೊಂದುವದಿಲ್ಲವೆಂದು ತೋರಿದ್ದರಿಂದ ನಾವು ಅದನ್ನು
ಇಲ್ಲಿ ಸೇರಿಸಿರುವದಿಲ್ಲ. ಇದರಂತೆಯೇ ಇನ್ನೂ ಕೆಲವರು ವಿಷ್ಣುಭಕ್ತರು
ಪ್ರಯತ್ನಮಾಡಿರುವದು ಸ್ತೋತ್ರದ ಪ್ರಭಾವವು ಶೈವರ ಮೇಲೆಯೇ ಅಲ್ಲದೆ
ವೈಷ್ಣವರ ಮೇಲೂ ಆಗಿದೆ ಎಂಬುದಕ್ಕೆ ಸಾಕ್ಷಿಯಾಗಿರುತ್ತದೆ.

ಇಲ್ಲಿ ನಾವು ಬರೆದಿರುವ ಅರ್ಥವು ಮಧುಸೂದನಸರಸ್ವತಿಗಳ
ವ್ಯಾಖ್ಯಾನವನ್ನೇ ಮೊದಲಿನಿಂದ ಕೊನೆಯವರೆಗೂ ಅನುಸರಿಸಿಲ್ಲ. ವಿವರ
ಣೆಯೂ ಕೆಲಕೆಲವು ಭಾಗದಲ್ಲಿ ಸ್ವತಂತ್ರವೇ ಆಗಿರುತ್ತದೆ. ಈ ಸುಪ್ರಸಿದ್ಧ
ವಾದ ಸ್ತೋತ್ರವು ಕನ್ನಡಿಗರಾದ ಶೈವರಿಗೆ ಅರ್ಥಾನುಸಂಧಾನಪೂರ್ವಕ
ವಾಗಿ ಹೇಳಿಕೊಳ್ಳುವದಕ್ಕೆ ಸ್ವಲ್ಪಮಟ್ಟಿಗಾದರೂ ನೆರವಾದರೆ ನಾವು ಧನ್ಯರು.

ಅಧ್ಯಾತ್ಮಪ್ರಕಾಶಕಾರ್ಯಾಲಯ
ವಿಜಯ ಸಂ॥ ನಿಜವೈಶಾಖ ಶುದ್ಧ ಪಂಚಮಿ } ಅನುವಾದಕರು.

# ಶಿವಮಹಿಮ್ನಃ ಸ್ತೋತ್ರಮ್

**ಮಹಿಮ್ನಃ ಪಾರಂ ತೇ ಪರಮವಿದುಷೋ ಯದ್ಯಸದೃಶೀ
ಸ್ತುತಿರ್ಬ್ರಹ್ಮಾದೀನಾಮಪಿ ತದವಸನ್ನಾಸ್ತ್ವಯಿ ಗಿರಃ ।
ಅಥಾವಾಚ್ಯಃ ಸರ್ವಃ ಸ್ವಮತಿಪರಿಣಾಮಾವಧಿ ಗೃಣನ್
ಮಮಾಪ್ಯೇಷ ಸ್ತೋತ್ರೇ ಹರ ನಿರಪವಾದಃ ಪರಿಕರಃ ॥ ೧ ॥**

[ಪ್ರತಿಪದಾರ್ಥ : ಹರ- ದುಃಖವನ್ನು ಪರಿಹರಿಸುವ ದೇವನೆ, ತೇ- ನಿನ್ನ ಮಹಿಮ್ನಃ- ಮಹಿಮೆಯ, ಪರಂ ಪಾರಮ್- ಆಚೆಯ ದಡವನ್ನು ಅವಿದುಷಃ- ಅರಿಯದವನ ಸ್ತುತಿಃ- ಸ್ತೋತ್ರವು ಅಸದೃಶೀ ಯದಿ- ಅಸಮಾನವಾದರೆ ತತ್- ಆಗ ಬ್ರಹ್ಮಾದೀನಾಂ- ಬ್ರಹ್ಮನೇ ಮೊದಲಾದವರ ಗಿರೋಽಪಿ- ಸ್ತೋತ್ರವಚನಗಳು ಕೂಡ ತ್ವಯಿ- ನಿನ್ನ ವಿಷಯದಲ್ಲಿ, ಅವಸನ್ನಾಃ- ಕುಸಿದುಬೀಳುವವೇ (ಆಗುವವು) ಅಥ- ಹಾಗಲ್ಲದೆ ಸ್ವಮತಿಪರಿಣಾಮಾವಧಿ- ತನ್ನ ಬುದ್ಧಿಯ ಪರಿಣಾಮದವರೆಗೆ ಗೃಣನ್- ಸ್ತೋತ್ರವನ್ನು ಹೇಳುವ- ಸರ್ವಃ- ಪ್ರತಿಯೊಬ್ಬನೂ ಅವಾಚ್ಯಃ ಯದಿ- ನಿಂದ್ಯನಲ್ಲವಾದರೆ ಮಮಾಪಿ- ನನ್ನದೂ ಏಷ ಪರಿಕರಃ- ಈ ಸೊಂಟಕಟ್ಟುವಿಕೆಯು ನಿರಪವಾದಃ- ನಿಂದ್ಯವಲ್ಲ.]

೧. ಎಲೈ ಹರನೆ, ನಿನ್ನ ಮಹಿಮೆಯ ಆಚೆಯ ದಡವನ್ನು ಅರಿಯದವನು ಮಾಡುವ ಸ್ತುತಿಯು ಅನುರೂಪವಲ್ಲವೆಂದಾದರೆ, ನಿನ್ನ ವಿಷಯದಲ್ಲಿ ಬ್ರಹ್ಮಾದಿಗಳ ಸ್ತೋತ್ರವಚನಗಳು ಕೂಡ ಕುಸಿಯುವವು. ಹಾಗಲ್ಲದೆ ತನ್ನ ಬುದ್ಧಿಯು ಹೋಗುವಷ್ಟರವರೆಗೆ ಸ್ತೋತ್ರಮಾಡುವವನು ಯಾವನೂ ದೋಷಿಯಲ್ಲ ಎನ್ನುವದಾದರೆ, ಸ್ತೋತ್ರಕ್ಕಾಗಿ ನಾನು ಸೊಂಟವನ್ನು ಕಟ್ಟಿಕೊಂಡು ನಿಂತಿರುವದೂ ನಿಂದನೀಯವಲ್ಲ.

## ವಿವರಣೆ

ಪುಷ್ಪದಂತನೆಂಬ ಒಬ್ಬ ಗಂಧರ್ವರಾಜನು ಒಬ್ಬಾನೊಬ್ಬ ರಾಜನ ಉದ್ಯಾನವನದಲ್ಲಿದ್ದ ಹೂಗಳನ್ನು ಪ್ರತಿದಿನವೂ ಕೊಯ್ದುಕೊಂಡು ಒಯ್ಯು

ತ್ತಿದ್ದನಂತೆ. ಅವನು ಯಾರೆಂಬುದನ್ನು ಗೊತ್ತುಪಡಿಸಲಾರದೆ ಕೊನೆಗೆ ಅರಸನು ಬಲ್ಲವರ ಉಪದೇಶದಿಂದ ಒಂದು ಉಪಾಯವನ್ನು ಮಾಡಿದನು. ಹೂಗಿಡಗಳಿರುವ ದಾರಿಯಲ್ಲೆಲ್ಲ ಶಿವನಿರ್ಮಾಲ್ಯವನ್ನು ಎರಚಿಸಿದನು. ಅವನ್ನರಿಯದೆ ಎಂದಿನಂತೆ ಆ ಗಂಧರ್ವರಾಜನು ಉದ್ಯಾನವನವನ್ನು ಹೊಗುತ್ತಿದ್ದ ಹಾಗೆಯೇ ಅವನ ಅಂತರ್ಧಾನಶಕ್ತಿಯು ಇಲ್ಲವಾಯಿತು. ಗಂಧರ್ವರಿಗೆ ಸ್ವಾಭಾವಿಕವಾಗಿರುವ ಅಂತರ್ಧಾನಶಕ್ತಿಯನ್ನುಕೂಡ ತಡೆಗಟ್ಟುವ ಸಾಮರ್ಥ್ಯವು ಎತ್ತಣದ್ದಿರಬಹುದು?— ಎಂದು ಮನಸ್ಸಿನಲ್ಲಿ ಚೆನ್ನಾಗಿ ಆಲೋಚಿಸಿದ ಬಳಿಕ ಇದು ಶಿವನಿರ್ಮಾಲ್ಯವನ್ನು ದಾಟಿದ್ದರಿಂದಾದ ದುಷ್ಫಲವು ಎಂದು, ಮನವರಿಕೆಮಾಡಿಕೊಂಡು ಆ ಪುಷ್ಪದಂತನು ಈ ಸ್ತೋತ್ರದಿಂದ ಸರ್ವಕಾಮಗಳನ್ನೂ ಈಡೇರಿಸಿಕೊಡಬಲ್ಲ ಆ ಮಹಾದೇವನನ್ನು ಸ್ತುತಿಸಿದನು ಎಂದು ಕಥೆ. ಉಪಸಂಹಾರದಲ್ಲಿರುವ ಶ್ಲೋಕಗಳಿಂದ ಇದು ವ್ಯಕ್ತವಾಗುತ್ತದೆ. ಇದಂತಿರಲಿ. ಶಿವನ ಮಹಿಮೆಯನ್ನು ಕೊಂಡಾಡುವದರಿಂದಲೂ 'ಮಹಿಮ್ನಃ' ಎಂಬ ಪದದಿಂದ ಪ್ರಾರಂಭವಾಗಿರುವದರಿಂದಲೂ ಈ ಸ್ತೋತ್ರಕ್ಕೆ **'ಶಿವಮಹಿಮ್ನಃ ಸ್ತೋತ್ರ'** (ಶಿವಮಹಿಮೆಯ ಸ್ತೋತ್ರ) ಎಂದೇ ಪ್ರಖ್ಯಾತವಾದ ಹೆಸರು ಬಂದಿರುತ್ತದೆ.

ಮೇಲಿನ ಪದ್ಯದ ಅಭಿಪ್ರಾಯವೇನೆಂದರೆ: ಮಹಾದೇವನಾದ ಪರಶಿವನ ಮಹಿಮೆಯು ಇಂತಿಷ್ಟು ಎಂಬುದನ್ನು ಯಾರಿಂದಲೂ ತಿಳಿಯಲಳವಲ್ಲ. ಏಕೆಂದರೆ ನಾಲ್ಕು ವೇದಗಳನ್ನೂ ಹೊರಕ್ಕೆ ತಂದಿರುವ ಚತುರ್ಮುಖಬ್ರಹ್ಮನೂ ಶಿವನ ಮಹಿಮೆಯ ಪಾರವನ್ನು ಕಂಡಿರುವದಿಲ್ಲ. ಆದ್ದರಿಂದ ಆತನು ಹೊಗಳಿದರೂ ಆ ಸ್ತೋತ್ರವೂ ನ್ಯೂನತೆಯಿಂದ ಕೂಡಿಯೇ ಇರುತ್ತದೆ. ಹೀಗಿರುವದರಿಂದ ಅನಂತಗುಣಗಳಿಂದೊಡಗೂಡಿರುವ ಆ ಶಿವನನ್ನು ನೀನೇನು ಸ್ತೋತ್ರಮಾಡುವೆ? ಅನನುರೂಪವಾದ ಸ್ತೋತ್ರವನ್ನು ಮಾಡಿದರೆ ನೀನು ನಗೆಗೀಡಾಗುವದಿಲ್ಲವೆ?— ಎಂದು ಯಾರೂ ಆಕ್ಷೇಪಿಸುವದಕ್ಕೆ:

ಆದ್ದರಿಂದ ಪ್ರತಿಯೊಬ್ಬನೂ ಅವನವನ ಬುದ್ಧಿಗೆ ಸಿಲುಕಿದಷ್ಟು ಸ್ತೋತ್ರಮಾಡಿದರೆ ಅದೇನೂ ತಪ್ಪಲ್ಲ; ಇಷ್ಟೇ ಅಲ್ಲ, ಅದರಿಂದ ಅವನು

ಕೃತಕೃತ್ಯನೂ ಆಗುವನು. ಆದ್ದರಿಂದ ನಾನು ಆ ದೇವದೇವನನ್ನು ಸ್ತೋತ್ರಮಾಡಿ ಧನ್ಯನಾಗಬೇಕೆಂದು ಹೊರಟಿರುತ್ತೇನೆ. ಅದರಿಂದ ನನ್ನ ಸರ್ವಪಾಪಗಳನ್ನೂ ಸರ್ವದುಃಖಗಳನ್ನೂ ಆ ದೇವನು ಪರಿಹರಿಸುತ್ತಾನೆ ಎಂದು ಅಭಿಪ್ರಾಯ.

**ಅತೀತಃ ಪನ್ಥಾನಂ ತವ ಚ ಮಹಿಮಾ ವಾಙ್ಮನಸಯೋ-**
**ರತದ್ವ್ಯಾವೃತ್ತ್ಯಾ ಯಂ ಚಕಿತಮಭಿಧತ್ತೇ ಶ್ರುತಿರಪಿ।**
**ಸ ಕಸ್ಯ ಸ್ತೋತವ್ಯಃ ಕತಿವಿಧಗುಣಃ ಕಸ್ಯ ವಿಷಯಃ**
**ಪದೇ ತ್ವರ್ವಾಚೀನೇ ಪತತಿ ನ ಮನಃ ಕಸ್ಯ ನ ವಚಃ ॥ ೨ ॥**

[ಪ್ರತಿಪದಾರ್ಥ: ತವ- ನಿನ್ನ ಮಹಿಮಾ- ಮಹಿಮೆಯು ವಾಙ್ಮನಸಯೋಃ- ವಾಕ್ಕು ಮತ್ತು ಮನಸ್ಸು- ಇವುಗಳ ಪನ್ಥಾನಂ- ಹಾದಿಯನ್ನು ಅತೀತಃ- ದಾಟಿರುವದೇ (ಆಗಿದೆ). ಯಂ- ಯಾವ (ಮಹಿಮೆಯನ್ನು) ಶ್ರುತಿರಪಿ- ಶ್ರುತಿಯು ಕೂಡ ಅತದ್ವ್ಯಾವೃತ್ತ್ಯಾ- ಅದಲ್ಲದ್ದನ್ನು ಅಲ್ಲಗಳೆಯುವದರಿಂದ ಚಕಿತಮ್- ಅಂಜಿಕೆಯಿಂದ ಕೂಡಿ ಅಭಿಧತ್ತೇ- ಹೇಳುತ್ತಿದೆ. ಸಃ- ಆ (ಮಹಿಮೆಯು) ಕಸ್ಯ- ಯಾವನಿಗೆ ಸ್ತೋತವ್ಯಃ- ಹೊಗಳಲು ಶಕ್ಯವು? ಕತಿವಿಧಗುಣಃ- ಎಷ್ಟು ಬಗೆಯ ಗುಣಗಳುಳ್ಳದ್ದು? ಕಸ್ಯ- ಯಾವದಕ್ಕೆ ವಿಷಯಃ- ಗೋಚರವಾಗತಕ್ಕದ್ದು? ಕಸ್ಯ- ಯಾವನ ಮನಃ- ಮನಸ್ಸು ಕಸ್ಯ- ಯಾವನ ವಚಃ- ಮಾತು ಅರ್ವಾಚೀನೇ- ಈಚಿನ ಪದೇ ತು- ಸ್ಥಾನದಲ್ಲಿಯಾದರೆ ನ ಪತತಿ- ಬೀಳುವದಿಲ್ಲ?]

೨. ಎಲೈ ಹರನೆ, ನಿನ್ನ ಮಹಿಮೆಯು ವಾಙ್ಮನಸ್ಸುಗಳನ ದಾಟಿರುವದೇ ಆಗಿದೆ. ಶ್ರುತಿಯುಕೂಡ ಆ ನಿನ್ನ ಮಹಿಮೆಯನ್ನು ಅಂಜಿಕೆಯಿಂದ ಅದಲ್ಲದ್ದನ್ನು ಅಲ್ಲವೆನ್ನುವದರಿಂದಲೇ ತಿಳಿಸಿಕೊಡುತ್ತಿದೆ. ಹೀಗಿರುವಲ್ಲಿ ಅದನ್ನು ಯಾರಿಗೆತಾನೆ ಹೊಗಳಲಳವಾದೀತು? ಅದರ ಗುಣಗಳು ಎಷ್ಟು ಬಗೆ ಯಾವದಕ್ಕೆ ವಿಷಯವು? ಹೀಗಿರುವದರಿಂದ ಯಾವನ ಮನಸ್ಸು ತಾನೆ ಈಚೆಗೇ ಬೀಳದು? ಯಾವನ ವಾಕ್ಕು ತಾನೆ ಈಚೆಗೇ ಬೀಳದು?

## ವಿವರಣೆ

ಪರಮೇಶ್ವರನ ಮಹಿಮೆಯು ನಿರ್ವಿಶೇಷವೆಂದೂ ಸವಿಶೇಷವೆಂದೂ ಎರಡು ಬಗೆಯದಾಗಿರುವದು. ನಿರ್ವಿಶೇಷವಾದ ಮಹಿಮೆಯು ಆತನ ಸ್ವರೂಪವೇ ಆಗಿರುತ್ತದೆ. ಅದನ್ನು ಇಂಥದ್ದೆಂದು ಕರೆದಮಾತ್ರದಿಂದ ಅದಕ್ಕೆ ಕಲಂಕವನ್ನು ಹತ್ತಿಸಿದಂತೆ ಆಗುತ್ತದೆಯಾದ್ದರಿಂದ ಶ್ರುತಿಯು ಆ ಮಹಾದೇವನು ಏತರಲ್ಲಿ ನಿಂತಿರುತ್ತಾನೆ? ಎಂಬ ಪ್ರಶ್ನೆಗೆ 'ತನ್ನ ಮಹಿಮೆಯಲ್ಲಿಯೇ ನೆಲೆನಿಂತಿರುತ್ತಾನೆ, ಅಥವಾ ಯಾವ ಮಹಿಮೆಯಲ್ಲಿಯೂ ನಿಂತಿರುವದೇ ಇಲ್ಲ'—ಎಂದು ಹೇಳಿರುತ್ತದೆ. ಶಿವನು ಬೇರೆ, ಆತನ ಮಹಿಮೆಯು ಬೇರೆ; ಆತನು ಆ ಮಹಿಮೆಯಲ್ಲಿ ನಿಂತಿರುತ್ತಾನೆ– ಎಂಬ ವಿಶೇಷವನ್ನು ಯಾರಾದರೂ ಮಂದಮತಿಗಳು ಕಲ್ಪಿಸಿಕೊಂಡಾರೆಂದು ಅದು ಹೀಗೆ ಹೇಳುತ್ತದೆ.

ನಿರ್ವಿಶೇಷವಾದ ಆತನ ಸ್ವರೂಪವನ್ನು ಹೇಗೆ ತಿಳಿಸುವದು? ಅಥವಾ ಹೇಗೆ ತಿಳಿಯುವದು? -ಎಂದರೆ ಆ ಸ್ವರೂಪವು ತಿಳಿವಿಗೆ ವಿಷಯವಲ್ಲ, ತಿಳಿಸುವ ವಾಕ್ಕಿಗೂ ವಿಷಯವಲ್ಲ; ವಾಕ್ಕೇ ಮುಂತಾದ ಇಂದ್ರಿಯಗಳೂ ಮನಸ್ಸೂ ನಮಗೆ ಆ ಸ್ವರೂಪವು ಗೋಚರವಲ್ಲವೆಂದು ಸುಮ್ಮನಾಗಿರುವವು. ಅಥವಾ ಅದನ್ನು ತಿಳಿಯುವದಕ್ಕೆಹೋದರೆ ಅವೂ ಆ ನಿರ್ವಿಶೇಷಸ್ವರೂಪವನ್ನೇ ಪಡೆದು ಶಾಂತವಾಗುವವು. ಆದ್ದರಿಂದ ಶ್ರುತಿಯು ಶಿವತತ್ತ್ವವನ್ನು ಹೀಗೆ- ಹಾಗೆ ಎಂದು ವರ್ಣಿಸಿದರೆ ಎಲ್ಲಿ ಅಪಚಾರವಾದೀತೋ ಎಂಬ ಅಂಜಿಕೆಯಿಂದ ಅದನ್ನು ಹೀಗಲ್ಲ, ಹೀಗಲ್ಲ– ಎಂದೇ ವರ್ಣಿಸುತ್ತಿರುವದು. ಯಾವ ಯಾವ ರೂಪದಿಂದ ಕಲ್ಪಿಸಿಕೊಂಡರೂ ಅದೆಲ್ಲ ಶಿವನಿಗಿಂತ ಹೆಚ್ಚಾದ ರೂಪವೇ ಆಗುತ್ತದೆ ಎಂದು ಶ್ರುತಿಯ ಅಭಿಪ್ರಾಯ. ಹೀಗಿರುವಲ್ಲಿ ಯಾವನು ತಾನೆ ಆ ಸ್ವರೂಪವನ್ನು ಸ್ತೋತ್ರಮಾಡಿಯಾನು?

ಈಶ್ವರನನ್ನು ಸ್ತೋತ್ರಮಾಡಲುಪಕ್ರಮಿಸಿ ಸ್ತೋತ್ರಮಾಡುವದಕ್ಕಾಗುವದಿಲ್ಲ ಎಂಬುದು ವ್ಯಾಹತೋಕ್ತಿಯಲ್ಲವೆ, ಪೂರ್ವಾಪರವಿರುದ್ಧವಲ್ಲವೆ?– ಎಂದು ನೀವು ಕೇಳಬಹುದು. ಆದರೆ ಇಲ್ಲಿ ಗಂಧರ್ವರಾಜನಾದ ಪುಷ್ಪದಂತನ ಅಭಿಪ್ರಾಯವು ಬೇರೊಂದಿದೆ. ಪರಮಾತ್ಮನಾದ ಶಿವನನ್ನು

ಪೊಗಳುವದಕ್ಕಾಗುವದಿಲ್ಲ, ಚಿಂತಿಸುವದಕ್ಕೂ ಆಗುವದಿಲ್ಲ; ಆವನು ಎಲ್ಲರಿಗೂ– ಎಲ್ಲರ ವಾಙ್ಮನಸ್ಸುಗಳಿಗೂ ಕೂಡ ಆತ್ಮನೇ. ಅದ್ದರಿಂದ ನಿತ್ಯಶುದ್ಧಬುದ್ಧಮುಕ್ತಸ್ವಭಾವದವನೂ ಸ್ವಯಂಪ್ರಕಾಶನೂ ಸ್ವತಃಸಿದ್ಧನೂ ಆಗಿದ್ದಾನೆ ಎಂದು ನಿರ್ಗುಣರೂಪವನ್ನು ಯಥಾಸ್ಥಿತವಾಗಿ ತಿಳಿಸುವ ಸ್ತೋತ್ರವನ್ನು ಆತನು ಇಲ್ಲಿ ಮಾಡಿರುತ್ತಾನೆ.

ಇನ್ನು ಶಿವನ ವಿಶೇಷಮಹಿಮೆಯೊಂದಿದೆ. ಅದನ್ನು ಪೊಗಳುವದಕ್ಕೆ ಬರುತ್ತದೆ. ಏಕೆಂದರೆ ಆದರಲ್ಲಿ ಪ್ರಪಂಚದ ನಾಮರೂಪಗಳೆಲ್ಲ ಆತನ ವಿಭೂತಿವಿಶೇಷಗಳೇ ಆಗಿರುವದರಿಂದ ಅವುಗಳಮೂಲಕವಾಗಿ ಆತನನ್ನು ಪೊಗಳಬಹುದು. ಆದರೆ ಈ ಸಗುಣರೂಪವಾದರೂ ಯಾರಿಗೆತಾನೆ ಸಂಪೂರ್ಣವಾಗಿ ಪೊಗಳಲು ಶಕ್ಯವಾದೀತು? ಯಾರಿಂದಲೂ ಆಗದು. ಏಕೆಂದರೆ ಶಿವನ ಗುಣಗಳು ಇಂತಿಷ್ಟು ವಿಧವೆಂದು ಗೊತ್ತುಪಡಿಸುವದೇ ಯಾರಿಂದಲೂ ಆಗುವಂತಿಲ್ಲ; ಇನ್ನು ಅವು ಇಂತಿಷ್ಟು ಎಂದು ಎಣಿಸುವದು ಆದೀತೆ? ಇದಲ್ಲದೆ ಸಂಸಾರದೋಷಗಳಿಂದ ದಗ್ಧವಾಗಿರುವ ಜೀವರುಗಳ ವಾಙ್ಮನಸ್ಸುಗಳು ಆತನ ಈ ಸಗುಣರೂಪವನ್ನು ಯಥಾವತ್ತಾಗಿ ಸಂಪೂರ್ಣವಾಗಿ ಎಂದಿಗೂ ಹಿಡಿಯಲಾರವು. ಆದರೂ ನನ್ನ ಯೋಗ್ಯತೆಯಿದ್ದಷ್ಟೇ ಈ ರೂಪವನ್ನು ಸ್ತೋತ್ರ ಮಾಡುವೆನು ಎಂದು ಭಾವ.

**ಮಧುಸ್ಫೀತಾ ವಾಚಃ ಪರಮಮಮೃತಂ ನಿರ್ಮಿತವತ–**
**ಸ್ತವ ಬ್ರಹ್ಮನ್ ಕಿಂ ವಾಗಪಿ ಸುರಗುರೋರ್ವಿಸ್ಮಯಪದಮ್ ।**
**ಮಮ ತ್ವೇತಾಂ ವಾಣೀಂ ಗುಣಕಥನಪುಣ್ಯೇನ ಭವತಃ**
**ಪುನಾಮೀತ್ಯರ್ಥೇಽಸ್ಮಿನ್ ಪುರಮಥನ ಬುದ್ಧಿರ್ವ್ಯವಸಿತಾ ॥ ೩ ॥**

[ಪ್ರತಿಪದಾರ್ಥ : ಬ್ರಹ್ಮನ್— ಸರ್ವಮಹತ್ತರನೆ, ಮಧುಸ್ಫೀತಾಃ— ಮಾಧುರ್ಯದಿಂದ ತುಂಬಿರುವ ಪರಮಮ್– ಹೆಚ್ಚಿನ ಅಮೃತಮ್– ಅಮೃತವಾಗಿರುವ ವಾಚಃ— ವೇದವಾಕ್ಯಗಳನ್ನು ನಿರ್ಮಿತವತಃ— ನಿರ್ಮಿಸಿರುವ ತವ— ನಿನಗೆ ಸುರಗುರೋಃ– ದೇವತೆಗಳಲ್ಲಿ ಶ್ರೇಷ್ಠನಾದ ಬ್ರಹ್ಮನ ವಾಗಪಿ– ವಾಕ್ಕಾದರೂ ವಿಸ್ಮಯಪದಂ ಕಿಮ್- ವಿಸ್ಮಯುಕ್ತವೆಂದಾದೀತೇನು ? ಪುರಮಥನ– ತ್ರಿಪುರಗಳನ್ನು ಮಥಿಸಿದಾತನೆ, ಏತಾಂ ತು- ಮಮ ವಾಣೀಮ್– ನನ್ನ ಈ ಮಾತನ್ನು ಭವತಃ– ನಿನ್ನ ಗುಣಕಥನಪುಣ್ಯೇನ- ಗುಣಗಳನ್ನು ಹೇಳುವ ಪುಣ್ಯದಿಂದ ಪುನಾಮಿ- ಪವಿತ್ರಗೊಳಿಸಿ

ಕರೋತ್ಯೇವ ಇತ್ಯಸ್ಮಿನ್ ಅರ್ಥೇ– ಎಂಬೀ ವಿಷಯದಲ್ಲಿ ಬುದ್ಧಿಃ– ಬುದ್ಧಿಯು ವ್ಯವಸಿತಾ– ನಿಶ್ಚಯಿಸಲ್ಪಟ್ಟಿದೆ.]

೩. ಸರ್ವಮಹತ್ತರನಾದ ಪರಮೇಶ್ವರನೆ, ಮಾಧುರ್ಯವು ತುಂಬಿರುವ ಪರಮಾಮೃತವಾದ ವೇದವಾಕ್ಯಗಳನ್ನು ನಿರ್ಮಿಸಿರುವ ನಿನಗೆ ದೇವತೆಗಳ ಹಿರಿಯನಾದ ಬ್ರಹ್ಮದೇವನ ವಾಕ್ಕಾದರೂ ವಿಸ್ಮಯಕ್ಕೆಡೆಯಾದೀತೇನು ? ಆದರೆ ಎಲೈ ತ್ರಿಪುರಾಂತಕನೆ, ಈ ನನ್ನ ವಾಣಿಯನ್ನು ನಿನ್ನ ಗುಣಗಳನ್ನು ಹೇಳುವದರಿಂದಾಗುವ ಪುಣ್ಯದಿಂದ ಪವಿತ್ರಗೊಳಿಸಿಕೊಳ್ಳೋಣವೆಂದು ಮಾತ್ರ ಈ ವಿಷಯದಲ್ಲಿ ಬುದ್ಧಿಯನ್ನು ನಿಶ್ಚಯಿಸಿಕೊಂಡಿರುವೆನು.

## ವಿವರಣೆ

ಪರಮೇಶ್ವರನಿಗಿಂತ ಮತ್ತೆ ಯಾರೂ ಹೆಚ್ಚಿನವರಿಲ್ಲವಾದ್ದರಿಂದ ಆವನಿಗೆ ಬ್ರಹ್ಮವೆಂಬ ಹೆಸರು ಅನ್ವರ್ಥವಾಗಿರುತ್ತದೆ. ಮತ್ತು ಯಾವದೊಂದು ದೋಷವೂ ಇಲ್ಲದೆ ಮಿಗಿಲಿಲ್ಲದ ಜ್ಞಾನಾನಂದಾದಿಶಕ್ತಿಯೂ ಮಹಿಮೆಯೂ ಇರುವದರಿಂದ ಸಗುಣರೂಪದಿಂದಲೂ ಪರಮೇಶ್ವರನು ಬ್ರಹ್ಮವೆನಿಸಿರುತ್ತಾನೆ. ಆದ್ದರಿಂದ ಕವಿಯು ಇಲ್ಲಿ ಶಿವನನ್ನು 'ಬ್ರಹ್ಮನ್' ಎಂದು ಸಂಬೋಧಿಸಿರುತ್ತಾನೆ.

ಪರಮೇಶ್ವರನು ಅತ್ಯಂತಮಧುರವಾದ ವೇದಗಳನ್ನು ಜೀವರುಗಳ ಅನುಗ್ರಹಾರ್ಥವಾಗಿ ಸೃಜಿಸಿರುತ್ತಾನೆಂಬುದಕ್ಕೆ "ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದಃ" (ಬೃ. ೨–೪–೧೦) ಮುಂತಾದ ಶ್ರುತಿಯೂ "ಅಷ್ಟಾದಶಾನಾಮೇತಾಸಾಂ ವಿದ್ಯಾನಾಂ ಭಿನ್ನವರ್ತ್ಮನಾಮ್ | ಆದಿಕರ್ತಾ ಕವಿಃ ಸಾಕ್ಷಾಚ್ಛೂಲಪಾಣಿರಿತಿ ಶ್ರುತಿಃ"|| ಎಂಬ ಪುರಾಣವಚನವೂ ಪ್ರಮಾಣವು. ಈ ಪರಮಾರ್ಥಸ್ವರೂಪನಾಗಿರುವ ಶಿವನ ಉಸಿರೇ ಈ ಋಗ್ವೇದಾದಿಗಳು ಎಂಬುದು ಶ್ರುತಿಯ ಅರ್ಥ. ವೇದಗಳು ನಾಲ್ಕು, ಶೀಕ್ಷಾದಿಯಾದ ಆರು ವೇದಾಂಗಗಳು; ಪುರಾಣ, ನ್ಯಾಯ, ಮೀಮಾಂಸ,

ಧರ್ಮಶಾಸ್ತ್ರಗಳು, ಆಯುರ್ವೇದ, ಧನುರ್ವೇದ, ಗಾಂಧರ್ವ, ಅರ್ಥಶಾಸ್ತ್ರ ಎಂಬ ಎಂಟು– ಹೀಗೆ ಹದಿನೆಂಟು ವಿದ್ಯಾಸ್ಥಾನಗಳಿಗೆ ಸೃಷ್ಟಿಯ ಆದಿಯಲ್ಲಿ ಕರ್ತೃವಾಗಿರುವ ಕವಿಯು ಸಾಕ್ಷಾತ್ಪರಮೇಶ್ವರನಾದ ಶೂಲಪಾಣಿಯೇ ಎಂಬುವು ಪುರಾಣವಚನದ ಅರ್ಥವು. ವೇದವು ನಿತ್ಯವೇ ಆಗಿದ್ದರೂ ಪ್ರಲಯಕಾಲದಲ್ಲಿ ಪರಮೇಶ್ವರನಲ್ಲಿ ಅವು ಲೀನವಾಗಿರುತ್ತವೆ ; ಅವನ್ನು ಮತ್ತೆ ಮತ್ತೆ ಹಿಂದಿನ ವರ್ಣಾನುಪೂರ್ವಿಯನ್ನು ಬಿಡದೆ ಜೀವರುಗಳು ಕರ್ಮೋಪಾಸನೆಗಳನ್ನು ಮಾಡಿ ಉದ್ಧಾರವಾಗಲಿ ಎಂಬ ಹಿತೇಚ್ಛೆಯಿಂದ ಪರಮಕಾರುಣಿಕನಾದ ಶಿವನು ಮತ್ತೆ ರಚಿಸುತ್ತಾನಾದ್ದರಿಂದ ವೇದಗಳನ್ನು ಆತನು ನಿರ್ಮಿಸಿರುತ್ತಾನೆಂದು ಸ್ತೋತ್ರದಲ್ಲಿ ಹೇಳಿರುವದು ವಿರುದ್ಧವಲ್ಲ. ವೇದದಲ್ಲಿ ಜೀವರುಗಳಿಗೆ ಹಿತತಮವಾಗಿರುವ ಪುರುಷಾರ್ಥಗಳೆಲ್ಲವೂ ಅಡಗಿರುವದರಿಂದ ಅವು ಮಧುವಿನಿಂದ ತುಂಬಿವೆಯೆಂದೂ ಪರಮಪುರುಷಾರ್ಥವಾದ ಅಮೃತತ್ವವೆಂಬ ಮೋಕ್ಷಕ್ಕೆ ಸಾಧನವಾಗಿರುವ ಜ್ಞಾನವನ್ನು ತಿಳಿಸುವದರಿಂದ ಪರಮಾಮೃತವೆಂದೂ ಅವನ್ನು ಹೊಗಳಿರುವದು ಉಚಿತವೇ ಆಗಿರುತ್ತದೆ.

ಇಂಥ ವೇದವನ್ನು ನಿರ್ಮಿಸಿರುವ ಶಿವನನ್ನು ಎಂಥ ಕವಿಯು ರಚಿಸಿದ ಸ್ತೋತ್ರವಾದರೂ ಬೆರಗುಮಾಡೀತೇನು? ಆ ಮಹಾದೇವನು ಹಿಂದಿನ ಆನುಪೂರ್ವಿಯನ್ನೇ ಅನುಸರಿಸಿ ಮತ್ತೆ ಅದೇ ವೇದಗಳನ್ನೇ ರಚಿಸುತ್ತಾನೆಂಬುದು ನಿಜ; ಆದರೆ ವೇದದ ಅರ್ಥವೆಲ್ಲವನ್ನೂ ತೀರ ಕೊನೆಯವರೆಗೂ ಅರಿತುಕೊಂಡೇ ಲೋಕಕ್ಕೆ ಹಿತವಾಗಲೆಂಬ ಸದಿಚ್ಛೆಯಿಂದಲೇ ಅವನ್ನು ರಚಿಸಿರುವ ಮಹಾಕವಿಯವನು. ಬ್ರಹ್ಮವೇ, ಪರಮಾತ್ಮನೇ, ಪರಮಪರಮಕವಿಯು– ಎಂದು ಶ್ರುತಿಯು ಸಾರುತ್ತಿದೆ. ತನ್ನ ನಿತ್ಯಜ್ಞಾನದಿಂದ ಸಮಸ್ತವಸ್ತುಗಳನ್ನೂ ಬೆಳಗುತ್ತಿರುವ ಆ ಮಹಾಕವಿಗೆ ಯಾವ ಕವಿಯ ವಚನವೂ ಆಶ್ಚರ್ಯಕಾರಕವಲ್ಲ. ಆತನು ಚತುರ್ಮುಖಬ್ರಹ್ಮನನ್ನು ಸೃಜಿಸಿದ ಬಳಿಕ ಅವನಿಗೆ ಸೃಷ್ಟಿಯ ಕೌಶಲವು ಉಂಟಾಗುವದಕ್ಕಾಗಿ ವೇದಗಳನ್ನು ಅವನ ಮನಸ್ಸಿನಲ್ಲಿ ಹೊಳೆಯುವಂತೆ ಅನುಗ್ರಹಿಸುತ್ತಾನೆ. ಹೀಗಿರುವದರಿಂದ ಬ್ರಹ್ಮನೇ ಸ್ತೋತ್ರವನ್ನು ಮಾಡಿದರೂ ಆತನು ಬೆರಗಾಗುವಂತಿಲ್ಲ.

ಅದ್ದರಿಂದ ಪುಷ್ಪದಂತನು ಹೇಳುತ್ತಾನೇನೆಂದರೆ "ನಾನು ಈ ಸ್ತೋತ್ರವನ್ನು ಮಾಡಿರುವದು ನಿನ್ನನ್ನು ವಿಸ್ಮಯಗೊಳಿಸುವದಕ್ಕೆಂದು ಸ್ವಪ್ನದಲ್ಲಿಯೂ ಎಣಿಸಿಲ್ಲ, ಮತ್ತೇನೆಂದರೆ ನಿನ್ನ ಗುಣಗಳನ್ನು ಜೀವರು ಎಷ್ಟು ಕಥನಮಾಡುವರೋ ಅಷ್ಟರಮಟ್ಟಿಗೆ ಅವರಿಗೆ ಪುಣ್ಯವು ಲಭಿಸುವದು. ಅವರಿಗೆ ಅಪಚಾರದ ಮಾತುಗಳನ್ನು ಆಡಿದ ಪಾಪದಿಂದ ಕಲುಷಿತವಾಗಿದ್ದ ಅವರ ನಾಲಗೆಯು ಆ ಪುಣ್ಯದಿಂದ ಪರಿಶುದ್ಧವಾಗುವದು. ಆದ್ದರಿಂದ ನಾನು ಸ್ತೋತ್ರಮಾಡಬೇಕೆಂದು ನಿಶ್ಚಯಿಸಿರುವದು ನನಗೆ ಕವಿತಾಚತುರ್ಯವು ಇರುವದೆಂಬ ಹೆಮ್ಮೆಯಿಂದೇನೂ ಅಲ್ಲ; ನಿನ್ನ ಗುಣಗಳನ್ನು ಕೊಂಡಾಡಿ ನನ್ನ ವಾಣಿಯನ್ನು ಪಾವನಗೊಳಿಸುವ ಉದ್ದೇಶದಿಂದಲೇ."

**ತವೈಶ್ವರ್ಯಂ ಯತ್ ತಜ್ಜಗದುದಯರಕ್ಷಾಪ್ರಲಯಕೃತ್**
**ತ್ರಯೀವಸ್ತು ವ್ಯಸ್ತಂ ತಿಸೃಷು ಗುಣಭಿನ್ನಾಸು ತನುಷು ।**
**ಅಭವ್ಯಾನಾಮಸ್ಮಿನ್ ವರದ ರಮಣೀಯಾಮರಮಣೀಂ**
**ವಿಹಂತುಂ ವ್ಯಾಕ್ರೋಶೀಂ ವಿದಧತ ಇಹೈಕೇ ಜಡಧಿಯಃ ॥ ೪ ॥**

[**ಪ್ರತಿಪದಾರ್ಥ :** ವರದ— ವರದಾತೃವೆ, ಜಗದುದಯರಕ್ಷಾಪ್ರಲಯಕೃತ್— ಜಗತ್ತಿನ ಸೃಷ್ಟಿಸ್ಥಿತಿಪ್ರಲಯಗಳನ್ನು ಮಾಡುವ, ತ್ರಯೀವಸ್ತು— ವೇದತ್ರಯಕ್ಕೂ (ಪ್ರತಿಪಾದ್ಯ)ವಿಷಯವಾಗಿರುವ, ಗುಣಭಿನ್ನಾಸು- ಗುಣಗಳಿಂದ ಬೇರೆಬೇರೆಯಾಗಿರುವ ತಿಸೃಷು- ಮೂರು ತನುಷು- ಮೂರ್ತಿಗಳಲ್ಲಿ ವ್ಯಸ್ತಮ್. ಬಿಡಿಬಿಡಿಯಾಗಿರುವ ತವ- ನಿನ್ನ ಐಶ್ವರ್ಯಮ್- ಈಶ್ವರತ್ವವು ಯತ್- ಯಾವದುಂಟೋ ತತ್- ಅದನ್ನು ವಿಹಂತುಮ್— ನಾಶಗೊಳಿಸುವದಕ್ಕೆ ಅಸ್ಮಿನ್— ಈ (ಲೋಕ)ದಲ್ಲಿ ಅಭವ್ಯಾನಾಮ್— ಆಗಾದ (ಕಲ್ಯಾಣ)ವಿಲ್ಲದವರಿಗೆ ರಮಣೀಯಾಮ್— ಮನೋಹರವಾಗಿರುವ ಅರಮಣೀಮ್— ಮನೋಹರವಲ್ಲದ ವ್ಯಾಕ್ರೋಶೀಮ್— ನಿಂದೆಯನ್ನು ಇಹ— ಇಲ್ಲಿ ಏಕೇ— ಕೆಲವರು ಜಡಧಿಯಃ- ಮಂದಬುದ್ಧಿಗಳು ವಿದಧತೇ- ಮಾಡುತ್ತಿರುತ್ತಾರೆ.]

೪. ಎಲೈ ಇಷ್ಟಾರ್ಥಪ್ರದನೆ, ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುವದಾಗಿಯೂ ಮೂರು ವೇದಗಳಿಗೂ ತಾತ್ಪರ್ಯ ವಿಷಯವಾಗಿಯೂ ಸತ್ತ್ವರಜಸ್ತಮೋಗುಣಗಳಿಂದ ಬೇರೆಬೇರೆಯಾಗಿರುವ ಮೂರು ಮೂರ್ತಿಗಳಲ್ಲಿಯೂ ಬೇರೆಬೇರೆಯಾಗಿ

ತೋರಿಕೊಳ್ಳುತ್ತಿರುವ ಆ ನಿನ್ನ ಈಶ್ವರತ್ವವಿದೆಯಲ್ಲ, ಅದನ್ನು ನಿರಾಕರಿಸುವದಕ್ಕಾಗಿ ಈ ತ್ರಿಲೋಕದಲ್ಲಿ ಯಾವ ಕಲ್ಯಾಣವೂ ಆಗುವದಕ್ಕೆಡೆಯಿಲ್ಲದ ಪಾಪಿಗಳಿಗೆ ಮಾತ್ರ ರಮಣೀಯವಾಗಿ ತೋರುವ, ನಿಜವಾಗಿ ಸ್ವಲ್ಪವೂ ಮನೋಹರವಲ್ಲದ ಕೂಗಾಟ ವನ್ನು ಈ ವಿಷಯದಲ್ಲಿ ಕೆಲವರು ಎಬ್ಬಿಸುತ್ತಿರುವರು.

## ವಿವರಣೆ

ಚಾರ್ವಾಕರು, ಬೌದ್ಧರು, ಕರ್ಮಮೀಮಾಂಸಕರು, ಸಾಂಖ್ಯರು-ಮೊದಲಾದ ವಾದಿಗಳು ಈ ಜಗತ್ತಿಗೆ ಈಶ್ವರನೇ ಇಲ್ಲವೆನ್ನುತ್ತಾರಲ್ಲ! ಹೀಗಿರುವಲ್ಲಿ ಯಾರ ಸ್ತೋತ್ರವನ್ನು ಮಾಡುತ್ತೀಯೆ?- ಎಂದು ಯಾರಾದರೂ ಶಂಕಿಸಬಹುದು. ಅದಕ್ಕೆ ಉತ್ತರವನ್ನು ಈ ಶ್ಲೋಕದಲ್ಲಿ ಹೇಳಿರುತ್ತದೆ.

ಈಶ್ವರನೊಬ್ಬನಿಲ್ಲದಿದ್ದರೆ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಲಯ-ಇವುಗಳು ಹೇಗೆ ಆಗಬೇಕು? ಜಗತ್ತಿನಲ್ಲಿರುವ ಚೇತನರ ಬಂಧಮೋಕ್ಷಗಳು ಹೇಗೆ ಸಿದ್ಧಿಸಬೇಕು? ಪ್ರತಿಕ್ಷಣವೂ ಮಾರ್ಪಡುತ್ತಿರುವ ಈ ಜಗತ್ತು ನಾಶವಾಗಲೇಬೇಕಷ್ಟೆ; ಆದ್ದರಿಂದ ಇದಕ್ಕೆ ಜನ್ಮವೂ ಸಿದ್ಧವಾಗುತ್ತದೆ. ಹೀಗೆ ಜಗತ್ತು ಹೊರತೋರಿಕೊಳ್ಳುವದು, ಸ್ವಲ್ಪಕಾಲದವರೆಗೆ ವ್ಯವಸ್ಥಿತವಾಗಿದ್ದುಕೊಂಡಿರುವದು, ಕೊನೆಗೆ ನಾಶವಾಗುವದು, ಮತ್ತೆ ಹೀಗೆಯೇ ಸೃಷ್ಟ್ಯಾದಿಗಳು ಆಗುತ್ತಿರುವದಕ್ಕೆ ಸರ್ವಸ್ವತಂತ್ರನಾದ ಒಬ್ಬ ಈಶ್ವರನು ಇರಲೇಬೇಕೆಂಬ ಸಂಭಾವನಾಯುಕ್ತಿಯುಂಟು. ಇಷ್ಟೇ ಅಲ್ಲ. ಶ್ರುತಿಯಲ್ಲಿ ಇದನ್ನು ಹೇಳಿಯೂ ಇದೆ. ಯಾವದರಿಂದ ಈ ಭೂತಗಳುಂಟಾಗುವವೋ ಯಾವದರಿಂದ ಹುಟ್ಟಿದವು ಬಾಳುತ್ತಿರುವವೋ ಕೊನೆಗೆ ಯಾವದನ್ನು ಕುರಿತು ಹೋಗಿ ಅದನ್ನೇ ಸೇರಿಕೊಳ್ಳುವವೋ ಅದೇ ಬ್ರಹ್ಮವು- ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಆ ಬ್ರಹ್ಮದ ಸ್ವರೂಪವು ಸುಖದುಃಖಗಳನ್ನು ಮೀರಿದ ಆನಂದಸ್ವರೂಪವಾಗಿರುವದರಿಂದ ಶಿವವೂ ಶಾಂತವೂ ಆಗಿರುವದೆಂದು ಶಾಸ್ತ್ರದಲ್ಲಿ ತಿಳಿಸಿದೆ. ಇದರ ಜೊತೆಗೆ ಸತ್ತ್ವಗುಣದಿಂದ ವಿಷ್ಣುವೂ

ರಜೋಗುಣದಿಂದ ಬ್ರಹ್ಮನೂ ತಮೋಗುಣದಿಂದ ರುದ್ರನೂ ಆಗಿ ಜಗತ್ತನ್ನು ಪರಮೇಶ್ವರನು ಪಾಲಿಸುವದು, ಸೃಷ್ಟಿಮಾಡುವದು, ಸಂಹಾರಗೊಳಿಸುವದು– ಈ ಮೂರನ್ನೂ ಮಾಡುತ್ತಾನೆಂದು ಪುರಾಣಗಳು ಹೇಳುತ್ತಿರುವವು.

ಹೀಗೆ ಶಾಸ್ತ್ರಯುಕ್ತಿಗಳಿಂದ ತಿಳಿಯಬರುತ್ತಿರುವ, ಬಲ್ಲವರ ಅನುಭವಕ್ಕೆ ಗೋಚರವಾಗುವ, ಈ ಪರಮೈಶ್ವರ್ಯವನ್ನು ಕೆಲವರು ಇಲ್ಲವೆನ್ನುತ್ತಿರುವದೇಕೆ? ಎಂದರೆ ಆಸುರಸಂಪತ್ತಿಯ ಬಾಹುಲ್ಯದಿಂದ ಅವರ ಯುಕ್ತಿಗಳು ಅವರ ಪಾಲಿಗೇ ರಮಣೀಯವಾಗಿ ತೋರುತ್ತಿರುವವು. ಅವರು 'ನಾನೇ ಈಶ್ವರನು, ನಾನೇ ಭೋಗಿಯು; ಕಾಮದಿಂದಲೇ ಜಗತ್ತು ಹುಟ್ಟಿರುವದು. ಈ ಲೋಕದಲ್ಲಿ ಇರುವಷ್ಟುಕಾಲ ಸುಖವಾಗಿದ್ದರೆ ಆಯಿತು, ಜಗತ್ತಿಗೆ ಸೃಷ್ಟ್ಯಾದಿಕಾರಣನಾದ ಈಶ್ವರನೊಬ್ಬನಿದ್ದಾನೆಂದು ಏತಕ್ಕೆ ನಂಬಬೇಕು?'— ಎಂದು ಮುಂತಾಗಿ ತರ್ಕವನ್ನು ಮಾಡಿ ಕೂಗಾಟವನ್ನು ಎಬ್ಬಿಸುವರು. ಅಂಥವರಿಗೆ ಈಶ್ವರನ ಅನುಗ್ರಹವು ಎಂದಿಗೂ ಆಗಲಾರದು. ಈಶ್ವರನ ಕಡೆಗೆ ತಿರುಗದೆ ಇರುವದರಿಂದಲೇ ಜೀವನಲ್ಲಿ ಸ್ವಭಾವದಿಂದ ಇದ್ದುಕೊಂಡೇ ಇರುವ ಜ್ಞಾನಕ್ರಿಯಾಶಕ್ತಿಗಳಿಗೆ ಅಡ್ಡಿಯಾಗಿರುತ್ತದೆ; ಆದರಿಂದಲೇ ಅವರಿಗೆ ಪಾಪದ ವಾಸನೆಯು ಬೆಳೆಯುತ್ತಿರುತ್ತದೆ. ಅನಾದ್ಯವಿದ್ಯೆಯಿಂದ ಸಂಕಟಪಡುತ್ತಿರುವವರಿಗೆ ತನ್ನ ಕಡೆಗೆ ತಿರುಗದೆ ಇರುವವರೆಗೂ ಐಶ್ವರ್ಯಶಕ್ತಿಯು ತಿರೋಹಿತವಾಗಿ ಸಂಸಾರಬಂಧವು ಇರಬೇಕೆಂಬುದು ಈಶ್ವರನ ಸಂಕಲ್ಪವು; ಅವನ ಕಡೆಗೆ ತಿರುಗಿ 'ತನನ್ನು ಶರಣುಹೊಕ್ಕವರಿಗೆ ಅದು ಹೊರತೋರಿಕೊಂಡು ಆ ಬಂಧದಿಂದ ಬಿಡುಗಡೆಯಾಗಬೇಕೆಂಬುದೂ ಆತನ ಸಂಕಲ್ಪವು. ಆದ್ದರಿಂದ ಸೃಷ್ಟಿಸ್ಥಿತಿಪ್ರಲಯತಿರೋಧಾನಾನುಗ್ರಹಗಳೆಂಬ ಪಂಚಕೃತ್ಯಗಳುಳ್ಳ ಪರಮೇಶ್ವರನು ಇಲ್ಲವೆನ್ನುವದು ಪಾಪವಾಸನೆಯಿಂದಾಗಿರುವ ಅರಮಣೀಯವಾದ ತರ್ಕದ ಫಲವೇ ಸರಿ. ಆದರೆ ದೈವಸಂಪತ್ತಿನಿಂದ ಕೂಡಿದ ಮಹಾತ್ಮರಿಗೆ ಶಾಸ್ತ್ರದಿಂದಲೂ ಯುಕ್ತಿಯಿಂದಲೂ ಕಾಲಾನುಕಾಲಕ್ಕೆ ಪರಮೇಶ್ವರನ ಅಸ್ತಿತ್ವದಲ್ಲಿ ಅವಶ್ಯವಾಗಿ ಶ್ರದ್ಧೆಯುಂಟಾಗುತ್ತದೆ. ಆಗ ಅವರು ಪರಮೇಶ್ವರನ ಆರಾಧನೆಯಿಂದ ಅವನ ಅನುಗ್ರಹಕ್ಕೆ ಪಾತ್ರರಾಗುತ್ತಾರೆ ಎಂಬುದು ಶ್ಲೋಕಾಭಿಪ್ರಾಯವು.

**ಕಿಮೀಹಃ ಕಿಂಕಾಯಃ ಸ ಖಲು ಕಿಮುಪಾಯಸ್ತ್ರಿಭುವನಂ**
**ಕಿಮಾಧಾರೋ ಧಾತಾ ಸೃಜತಿ ಕಿಮುಪಾದಾನ ಇತಿ ಚ।**
**ಅತರ್ಕ್ಯೈಶ್ವರ್ಯೇ ತ್ವಯ್ಯನವಸರದುಃಸ್ಥೋ ಹತಧಿಯಃ**
**ಕುತರ್ಕೋಽಯಂ ಕಾಂಶ್ಚಿನ್ಮುಖರಯತಿ ಮೋಹಾಯ ಜಗತಃ ॥ ೫ ॥**

[ಪ್ರತಿಪದಾರ್ಥ :— ಸ ಖಲು ಧಾತಾ– ಆ ಪರಮೇಶ್ವರನಾದರೋ, ಕಿಮೀಹಃ– ಯಾವ ಕ್ರಿಯೆಯುಳ್ಳವನಾಗಿ ಕಿಂಕಾಯಃ- ಯಾವ ಶರೀರವುಳ್ಳವನಾಗಿ ಕಿಮುಪಾಯಃ- ಯಾವ ಸಾಧನವುಳ್ಳವನಾಗಿ, ಕಿಮಾಧಾರಃ— ಯಾವ ಆಶ್ರಯವುಳ್ಳವನಾಗಿ ಕಿಮುಪಾದಾನಃ– ಯಾವ ಉಪಾದಾನ(ಕಾರಣ)ವುಳ್ಳವನಾಗಿ ತ್ರಿಭುವನಂ– ಮೂರು ಲೋಕಗಳ (ಪ್ರಪಂಚವನ್ನು) ಸೃಜತಿ- ಉಂಟುಮಾಡುತ್ತಾನೆ ಇತಿ ಚ- ಇದೇ ಮುಂತಾದ ಪ್ರಕಾರದಿಂದಲೂ ಅತರ್ಕ್ಯೈಶ್ವರ್ಯೇ- ತರ್ಕಿಸುವದಕ್ಕಾಗದ ಐಶ್ವರ್ಯವುಳ್ಳ ತ್ವಯಿ- ನಿನ್ನ (ವಿಷಯ)ದಲ್ಲಿ ಅನವಸರದುಃಸ್ಥಃ- ಅವಕಾಶವಿಲ್ಲದೆ ನಿಲುಗಡೆಯಿಲ್ಲದಿರುವ ಅಯಂ ಕುತರ್ಕಃ- ಈ ಕೆಟ್ಟತರ್ಕವು ಜಗತಃ- ಜಗತ್ತಿನ ಮೋಹಾಯ- ಭ್ರಾಂತಿಗಾಗಿ ಕಾಂಶ್ಚಿತ್ ಕೆಲವರು ಹತಧಿಯಃ- ಕೆಟ್ಟಬುದ್ಧಿಯ (ಜನ)ರನ್ನು ಮುಖರಯತಿ- ವಾಚಾಲರನ್ನಾಗಿ ಮಾಡುತ್ತಿರುವದು.]

೫. ಆ ಪರಮೇಶ್ವರನು ಯಾವ ವ್ಯಾಪಾರದಿಂದ ಎಂಥ ಶರೀರವುಳ್ಳವನಾಗಿ, ಯಾವ ಸಾಧನಗಳನ್ನು ತಾನೆ ಉಪಯೋಗಿಸಿಕೊಂಡು, ಏನನ್ನು ಆಶ್ರಯಿಸಿ, ಯಾವ ಉಪಾದಾನಕಾರಣವಸ್ತುವಿನಿಂದ ಈ ಜಗತ್ತನ್ನು ಸೃಜಿಸುತ್ತಾನೆ? (ಯಾವದೊಂದೂ ಇಲ್ಲವಲ್ಲ) !— ಹೀಗೆಂದು ಮುಂತಾಗಿ ತರ್ಕಿಸುವದಕ್ಕೆ ತಕ್ಕದ್ದಲ್ಲದ ಪರಮೈಶ್ವರ್ಯವುಳ್ಳ ನಿನ್ನ ವಿಷಯದಲ್ಲಿಯೂ ನಿರವಕಾಶವಾದ ನಿಲುಗಡೆಯಿಲ್ಲದ ತರ್ಕವು ಕೆಲವರು ದುಷ್ಟಬುದ್ಧಿಯ ಜನರನ್ನು ಹರಟೆಗೆ ನಿಲ್ಲಿಸುತ್ತಿರುವದು.

## ವಿವರಣೆ

ಹಿಂದಿನ ಶ್ಲೋಕದಲ್ಲಿ- ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುತ್ತಾ ಬ್ರಹ್ಮವಿಷ್ಣುರುದ್ರಾತ್ಮಕವಾಗಿರುವ ಮೂರು ಮೂರ್ತಿಗಳಿಂದ ಭಕ್ತರಿಗೆ ಉಪಾಸ್ಯನಾಗಿರುವ, ವೇದಪ್ರತಿಪಾದ್ಯನಾಗಿರುವ, ಶಿವನೇ ಇಲ್ಲವೆನ್ನುವವರ

ಮತವನ್ನು ಪರಾಮರ್ಶಿಸಿ ಅದು ಪಾಪದ ಫಲವೆಂದು ತಿಳಿಸಲಾಗಿತ್ತು. ಈ ಶ್ಲೋಕದಲ್ಲಿ ಅಂಥವರು ಉಪಯೋಗಿಸುವ ಕುತರ್ಕವನ್ನು ಪರಾಮರ್ಶಿಸಿರುತ್ತದೆ.

ಪರಮೇಶ್ವರನು ತರ್ಕಕ್ಕೆ ಗೋಚರನಲ್ಲ; ಶಾಸ್ತ್ರೈಕಗಮ್ಯನು. ಆವನ ಈಶ್ವರತ್ವವು ತರ್ಕಕ್ಕೆ ಸಿಕ್ಕುವದಲ್ಲವಾದರೂ ಅದು ಇಲ್ಲವೆಂಬುದು ಸರಿಯಲ್ಲ; ಅದನ್ನು ತರ್ಕಕ್ಕೆ ಸಿಲುಕಿಸಿಕೊಂಡು ಪರೀಕ್ಷಿಸುವದೂ ಸರಿಯಲ್ಲ. ಲೋಕದಲ್ಲಿಯೇ ಕೆಲವು ಪದಾರ್ಥಗಳ ಸ್ವಭಾವವು ಇಂಥದ್ದೆಂದು ಹೇಳುವದಕ್ಕೆ ಬರುವದಿಲ್ಲ; ಅವುಗಳ ಧರ್ಮಗಳನ್ನು ತರ್ಕದಿಂದ ತಿಳಿಯುವದಕ್ಕೆ ಆಗುವಂತಿರುವದಿಲ್ಲ. ಹೀಗಿರುವಲ್ಲಿ ಅಚಿಂತ್ಯೈಶ್ವರ್ಯನಾದ ಪರಮೇಶ್ವರನ ಸ್ವಭಾವವನ್ನು ತರ್ಕದಿಂದ ಗೊತ್ತುಪಡಿಸುವದಕ್ಕೆ ಹೋಗುವದು ಎಂಥ ಮೂಢತನವು! ಪರಮೇಶ್ವರನ ಮಹಿಮೆಯನ್ನು ಮಹಾಪ್ರಭಾವವುಳ್ಳ ದೇವತೆಗಳಾಗಲಿ ಸರ್ವಜ್ಞಕಲ್ಪರಾದ ಋಷಿಗಳಾಗಲಿ ಗೊತ್ತುಪಡಿಸುವದಕ್ಕೆ ಆಗುವದಿಲ್ಲ; ಹೀಗಿರುವಲ್ಲಿ ಆತನು ಜಗತ್ಕಾರಣನೊ, ಅಲ್ಲವೊ ?– ಎಂಬುದನ್ನು ಹುಲುಮಾನವನು ತನ್ನ ಅಲ್ಪಮತಿಯ ತರ್ಕದಿಂದ ಗೊತ್ತುಪಡಿಸುವದು ಎಂಥ ಅವಿವೇಕವು!

ಆದರೂ ದೋಷಯುಕ್ತವಾದ ಅಂತಃಕರಣವುಳ್ಳ ಕೆಲವರು ಶುಷ್ಕ ತರ್ಕವನ್ನುಪಯೋಗಿಸಿ ಪರಮೇಶ್ವರನ ಐಶ್ವರ್ಯವನ್ನು ಅಲ್ಲಗಳೆಯುವದಕ್ಕೆ ಪ್ರಯತ್ನಿಸುತ್ತಾರೆ. ಅವರು ಪ್ರಮಾಣವಿಲ್ಲದ ತರ್ಕವನ್ನುಪಯೋಗಿಸುವದರಿಂದ ಅವರದು ಕುತರ್ಕವೆನಿಸುವದು. ಅವರ ತರ್ಕದ ಸರಣಿಯು ಹೇಗಿರುವದೆಂದರೆ: ಪರಮೇಶ್ವರನು ಸೃಷ್ಟಿಮಾಡುವದಕ್ಕೆ ಆವನಿಗೆ ಒಂದಾನೊಂದು ವ್ಯಾಪಾರವಿರಬೇಕಷ್ಟೆ; ಆದರೆ ಅವನು ನಿಷ್ಕ್ರಿಯನೆಂದು ವೇದಗಳು ಹೇಳುತ್ತಿವೆ. ಅವನಿಗೆ ಶರೀರವಿಲ್ಲ, ಕರಣವೂ ಇಲ್ಲ. ಸೃಷ್ಟಿಯಾದಬಳಿಕವಲ್ಲವೆ, ಶರೀರೇಂದ್ರಿಯಗಳು ತಲೆದೋರುವದು? ಶರೀರಕರಣಗಳಿಲ್ಲದವನಿಗೆ ವ್ಯಾಪಾರವೆಲ್ಲಿಂದ ಬರುತ್ತದೆ? ಯಾವ ಕೆಲಸವೂ ಇಲ್ಲದೆ ಅತ್ಯಂತಗುರುತರವಾದ ಪ್ರಪಂಚಸೃಷ್ಟಿಯು ಹೇಗೆತಾನೆ ಆದೀತು? ಸಾಮಾನ್ಯವಾದ ವಸ್ತುವನ್ನು ಮಾಡುವದಕ್ಕೂ ಏನಾದರೂ ವ್ಯಾಪಾರವಿರಬೇಕಲ್ಲವೆ?

ಕುಂಬಾರನು ಸುಮ್ಮನೆ ಕುಳಿತಿದ್ದರೆ ಮಡಕೆಯು ತಾನೇ ಆಗುವದನ್ನು ನಾವು ಎಲ್ಲಿಯೂ ನೋಡಿಲ್ಲವಲ್ಲ! ಇದಲ್ಲದೆ ಯಾವನು ಯಾವದನ್ನು ಮಾಡುತ್ತಾನೋ ಅವನಿಗೆ ಅದರ ಜ್ಞಾನವು ಮೊದಲೇ ಇರಬೇಕಲ್ಲವೆ? ಹಾಗಾದರೆ ಸರ್ವಜಗತ್ತನ್ನೂ ಮಾಡುವ ಪರಮೇಶ್ವರನಿಗೆ ಸರ್ವಜ್ಞತ್ವವೇ ಇರಬೇಕಾಗುವದು. ಆದರೆ ಶರೀರವೂ ಇಲ್ಲದೆ ಇಂದ್ರಿಯಗಳೂ ಇಲ್ಲದೆ ಯಾವ ಜ್ಞಾನವು ತಾನೆ ಉಂಟಾದೀತು? ಇನ್ನು ಕುಂಬಾರನು ಮಡಕೆಯನ್ನು ಮಾಡುವದಕ್ಕೆ ತಿಳಿದಿದ್ದರೆ ಸಾಲದು; ಕ್ರಿಯೆಯನ್ನು ಮಾಡುವದಕ್ಕೆ ಸಮರ್ಥನಾಗಿದ್ದರೆ ಅಷ್ಟೂ ಸಾಲದು. ಅವನಿಗೆ ತಿಗುರಿ, ಕೋಲು- ಮುಂತಾದ ಕೆಲವು ಸಾಧನದ್ರವ್ಯಗಳೂ ಬೇಕಾಗುವವು. ಈಶ್ವರನಿಗೆ ಸೃಷ್ಟಿಯ ಪೂರ್ವದಲ್ಲಿ ಯಾವ ಸಾಧನಗಳುತಾನೆ ಇರುವವು? ಕೈಕಾಲುಗಳಿಲ್ಲದ ಕುಂಬಾರನು ದಂಡಚಕ್ರಾದಿಗಳಿಲ್ಲದೆ ಗಡಿಗೆಯನ್ನು ಮಾಡಬಲ್ಲನೆಂಬುದರಂತೆಯೇ ಈಶ್ವರನು ದೇಹೇಂದ್ರಿಯಗಳಾಗಲಿ ಸಾಧನಗಳಾಗಲಿ ಇಲ್ಲದೆ ಸೃಷ್ಟಿಮಾಡುವನೆಂಬುದು ಅಸಂಭಾವಿತವೆನ್ನಬೇಕಲ್ಲವೆ? ಇದು ಹಾಗಿರಲಿ, ಎಲ್ಲಾ ಸಾಮಗ್ರಿಗಳೂ ಇದ್ದರೂ ಎಂಥ ದಕ್ಷನಾದ ಕುಂಬಾರನೂ ಬರಿಯ ಆಕಾಶದಿಂದ ಮಡಕೆಕುಡಿಕೆಗಳನ್ನು ಮಾಡಲಾರನು; ಅವನಿಗೆ ಮಣ್ಣೆಂಬ ಉಪಾದಾನಕಾರಣವು ಬೇಕು. ಆದರೆ ಈಶ್ವರನಿಗೆ ಜಗತ್ತನ್ನು ನಿರ್ಮಿಸುವದಕ್ಕೆ ಯಾವ ಉಪಾದಾನವೂ ಇಲ್ಲವಲ್ಲ! ಕುಂಬಾರನು ಗಡಿಗೆಯನ್ನು ಮಾಡುವದಕ್ಕೆ ಹೊರಟಾಗ ತಾನು ನಿಲ್ಲುವದಕ್ಕೂ ತನ್ನ ತಿಗುರಿಯನ್ನು ಇಡುವದಕ್ಕೂ ನೆಲವೆಂಬ ಆಧಾರವನ್ನು ಬಯಸಿಯೇ ಮಾಡುತ್ತಾನೆಂಬುದು ಪ್ರಸಿದ್ಧವು. ಆದರೆ ಈಶ್ವರನು ಜಗತ್ತನ್ನು ಸೃಷ್ಟಿಸುವದಕ್ಕೆ ಮುಂಚೆ ಯಾವ ಆಧಾರದಲ್ಲಿ ನಿಂತುಕೊಂಡು ಸೃಷ್ಟಿಯನ್ನು ಮಾಡಿಯಾನು? ಆಕಾಶವುಕೂಡ ಆಗ ಇರುವದಿಲ್ಲವಲ್ಲ! ಇದೆಲ್ಲ ಇರಲಿ, ಈಶ್ವರನಿಗೆ ಈ ಸೃಷ್ಟಿಯಿಂದ ಆಗಬೇಕಾದ ಪ್ರಯೋಜನವಾದರೂ ಏನು? ಯಾವ ಪ್ರಯೋಜನವೂ ಇಲ್ಲದೆಇರುವಲ್ಲಿ ಸಾಮಾನ್ಯಕ್ರಿಯೆಯನ್ನು ಕೂಡ ಎಂಥ ದಡ್ಡನೂ ಮಾಡುವದಿಲ್ಲ. ಹೀಗಿರುವಲ್ಲಿ ಜಗತ್ಸೃಷ್ಟಿಯೆಂಬ ಮಹಾಕಾರ್ಯವನ್ನು ಏನೂ ಪ್ರಯೋಜನವಿಲ್ಲದೆ ಮಾಡುವನೆ?- ಹೀಗೆಲ್ಲ ತಾರ್ಕಿಕರು ಈಶ್ವರಸೃಷ್ಟಿಯನ್ನು ಕುತರ್ಕದಿಂದ ಅಪಲಾಪಮಾಡುವದಕ್ಕೆ

ಪ್ರಯುಕ್ತಿಸುತ್ತಾರೆ. ಇದರಿಂದ ಸಾಮಾನ್ಯಜನರಿಗೆ ಭ್ರಾಂತಿಯುಂಟಾಗುವದೊಂದೇ ಫಲವು.

ಆದರೆ ಈಶ್ವರನು ಅನುಮಾನಪ್ರಮಾಣಕ್ಕೆ ಗೋಚರನೇ ಅಲ್ಲ. ಎಲ್ಲೆಲ್ಲಿ ಹೊಗೆಯಿರುವದೋ ಅಲ್ಲಲ್ಲಿ ಬೆಂಕಿಯಿರುವದು- ಎಂದು ವ್ಯಾಪ್ಯವ್ಯಾಪಕಭಾವಸಂಬಂಧವಿರುವಲ್ಲಿ ವ್ಯಾಪ್ಯವಾದ ಹೊಗೆಯಿಂದ ವ್ಯಾಪಕವಾದ ಬೆಂಕಿಯನ್ನು ಊಹಿಸುವಂತೆ ಒಂದಾನೊಂದು ವ್ಯಾಪ್ಯಲಿಂಗದ ಜ್ಞಾನದಿಂದ ವ್ಯಾಪಕವಾದ ಲಿಂಗಿಯನ್ನು ಊಹಿಸುವದು ಅನುಮಾನವೆನಿಸುವದು. ಆದರೆ ಈಶ್ವರನಲ್ಲಿ ಶಬ್ದಸ್ಪರ್ಶಾದಿಗಳಿಲ್ಲದ್ದರಿಂದ ಅವನು ಪ್ರತ್ಯಕ್ಷಗೋಚರನೂ ಅಲ್ಲ; ಅವನನ್ನು ಗುರುತಿಸುವ ಯಾವ ಲಿಂಗವೂ ಇಲ್ಲದ್ದರಿಂದ ಅನುಮಾನಗೋಚರನೂ ಅಲ್ಲ. ಅನುಮಾನಕ್ಕೆ ವಿಷಯನಲ್ಲದವನನ್ನು ಅನುಮಾನದಿಂದ ಕಂಡುಹಿಡಿಯುವದಕ್ಕೆ ಹೋಗುವದು, ಪಾಯಸದ ಸವಿಯನ್ನು ಸೌಟಿನಿಂದ ತಿಳಿಯುವದಕ್ಕೆ ಮಾಡುವ ಪ್ರಯತ್ನವಲ್ಲದೆ ಮತ್ತೇನು? ಆದ್ದರಿಂದ ಹೀಗೆ ಪ್ರಮಾಣದ ಆಧಾರವಿಲ್ಲದೆ ಮಾಡುವದರಿಂದ ಇವರು ಮಾಡುವ ತರ್ಕವನ್ನು ಕುತರ್ಕವೆನ್ನದೆ ಮತ್ತೇನೆಂದು ಕರೆಯುವದಕ್ಕೆ ಆದೀತು?

ಕುತರ್ಕಕ್ಕೆ ಅನುಗ್ರಾಹ್ಯಪ್ರಮಾಣವಿರುವದಿಲ್ಲವೆಂಬುದೊಂದೇ ದೋಷವಲ್ಲ. ಅದಕ್ಕೆ ನಿಲುಗಡೆಯಿರುವದಿಲ್ಲವೆಂಬುದು ಮತ್ತೊಂದು ದೋಷವು. ಹೇಗೆಂದರೆ ಜಗತ್ತಿಗೆ ಕಾರಣವೇ ಇಲ್ಲವೆಂದು ಕೆಲವರು; ಕಾರಣವಿದ್ದರೂ ಅಚೇತನವೇ ಕಾರಣವೆಂದು ಕೆಲವರು. ಅಚೇತನಕಾರಣವು ಪ್ರಧಾನವೆಂದು, ಅಣುಗಳೆಂದು- ಹೀಗೆಲ್ಲ ವಿವಾದಮಾಡುವವರು ಕೆಲವರು. ಚೇತನವೇ ಕಾರಣವೆಂದು ಕೆಲವರು. ಚೇತನರಾದ ಜೀವರುಗಳೆಲ್ಲ ಸೇರಿ ತಮ್ಮ ಧರ್ಮಾಧರ್ಮಗಳಿಂದ ಇದನ್ನುಂಟುಮಾಡಿರಬಹುದೆಂದು ಕೆಲವರು. ಜೀವರುಗಳಿಗಿಂತ ಬೇರೆಯಾಗಿರುವ ನಿಮಿತ್ತಕಾರಣನಾದ ಈಶ್ವರನೊಬ್ಬನು ಇದ್ದಿರಬೇಕೆಂದು ಕೆಲವರು— ಹೀಗೆಲ್ಲ ಒಬ್ಬರಿಗೆ ವಿರುದ್ಧವಾಗಿ ಒಬ್ಬರು ತರ್ಕಿಸುತ್ತಾ ಎಲ್ಲಿಯೂ ನಿಲುಗಡೆಯಿಲ್ಲದೆ ತರ್ಕಿಸುತ್ತಿರುವದು ಕುತಾರ್ಕಿಕರ ಒಂದು ಸ್ವಭಾವವು. ಹೀಗೆ ಯಾವದೊಂದು ವಿಷಯ

ಪಲ್ಲಿಯೂ ಒಂದು ತೀರ್ಮಾನಕ್ಕೆ ಬಾರದೆ ಇರುವ ಈ ಕುತರ್ಕದ ಪಾಪಕ್ಕೆ ಗಂಟಲನ್ನು ಒಣಗಿಸಿಕೊಳ್ಳುವದೊಂದಲ್ಲದೆ ಮತ್ತೆಯಾವ ಪ್ರಯೋಜನ ವಿದ್ದೀತು?

ನಿಜವಾಗಿ ನೋಡಿದರೆ ಪರಮೇಶ್ವರನು ವೇದಮಾತ್ರಸಮಧಿಗಮ್ಯ ನಾಗಿರುತ್ತಾನೆ. ಆ ವೇದವುಕೂಡ ಹಿಂದೆ (೨ರಲ್ಲಿ) ತಿಳಿಸಿರುವಂತೆ ಅತದ್ವ್ಯಾವೃತ್ತಿಯಿಂದ- ಪರಮೇಶ್ವರನಲ್ಲದ ಧರ್ಮಗಳನ್ನು ಅಲ್ಲಗಳೆಯುವದರಿಂದಲೇ- ಅವನ ಸ್ವರೂಪವನ್ನು 'ನೇತಿ ನೇತಿ' ಎಂದುಮುಂತಾಗಿ ತಿಳಿಸುತ್ತಿರುತ್ತದೆ. ಆ ಪರಮೇಶ್ವರನು ಸ್ವಭಾವತಃ ಚೈತನ್ಯಸ್ವರೂಪನೇ ಆಗಿರುವದರಿಂದ ಅವನ ಸರ್ವಜ್ಞತ್ವಕ್ಕೆ ಯಾವ ಶರೀರೇಂದ್ರಿಯಗಳೂ ಬೇಕಿರುವದಿಲ್ಲ. ಆದ್ದರಿಂದ ಆ ಪರಮೇಶ್ವರನು ಜಗತ್ತನ್ನು ಸೃಷ್ಟಿಸಿರುತ್ತಾನೆಂದು ಹೇಳಿರುವದು ವೇದಸಮ್ಮತವೂ ಅನುಭವಾನುಸಾರಿಯೂ ಆಗಿರುತ್ತದೆ. ಆದ್ದರಿಂದ ಅವಿವೇಕಿಗಳ ಕುತರ್ಕದ ಹರಟೆಯನ್ನು ಆಸ್ತಿಕರು ಎಂದಿಗೂ ನಂಬಲಾರರು ಎಂಬುದು ಅಭಿಪ್ರಾಯವು.

**ಅಜನ್ಮಾನೋ ಲೋಕಾಃ ಕಿಮವಯವವನ್ತೋಽಪಿ ಜಗತಾ-**
**ಮಧಿಷ್ಠಾತಾರಂ ಕಿಂ ಭವವಿಧಿರನಾದೃತ್ಯ ಭವತಿ ।**
**ಅನೀಶೋ ವಾ ಕುರ್ಯಾದ್ ಭುವನಜನನೇ ಕಃ ಪರಿಕರಂ**
**ಯತೋ ಮನ್ದಾಸ್ತ್ವಾಂ ಪ್ರತ್ಯಮರವರ ಸಂಶೇರತ ಇಮೇ ॥ ೬ ॥**

[ ಪ್ರತಿಪದಾರ್ಥ : ಅಮರವರ- ದೇವೋತ್ತಮನೆ, ಲೋಕಾಃ- ಲೋಕಗಳು ಅವಯವವನ್ತೋಽಪಿ- ಅವಯವಗಳುಳ್ಳವಾದರೂ ಅಜನ್ಮಾನಃ ಕಿಮ್- ಜನ್ಮವಿಲ್ಲದವು ಗಳೇನು ? ಜಗತಾಮ್- ಜಗತ್ತುಗಳಿಗೆ ಭವವಿಧಿಃ- ಹುಟ್ಟುವ ವಿಧಾನವು ಅಧಿಷ್ಠಾತಾರಂ- ಮೇಲಿದ್ದು ಆಳುವನೊಬ್ಬನನ್ನು ಅನಾದೃತ್ಯ- ಸ್ವೀಕರಿಸದೆಯೇ ಭವತಿ ಕಿಮ್- ಆಗುತ್ತದೆಯೇನು ? ಅನೀಶೋ- ಅಥವಾ ಅಸಮರ್ಥನಾದವನು ಕೋ ವಾ- ಯಾವನುತಾನೆ ಭುವನಜನನೇ- ಜಗತ್ತಿನ ಜನ್ಮದಲ್ಲಿ ಪರಿಕರಂ- ಸೊಂಟಕಟ್ಟುವಿಕೆಯನ್ನು ಕುರ್ಯಾತ್- ಮಾಡಿಯಾನು ? ಯತಃ- ಯಾವಕಾರಣದಿಂದ ಇಮೇ ಮನ್ದಾಃ- ಈ ಮೂಢರು ತ್ವಾಂ ಪ್ರತಿ- ನಿನ್ನನ್ನು ಕುರಿತು ಸಂಶೇರತೇ- ಸಂದೇಹಗೊಳ್ಳುತ್ತಿರುವರೊ ! ]

೬. ಎಲೈ ದೇವೋತ್ತಮನಾದ ಮಹೇಶ್ವರನೆ, ಸಾವಯವವಾಗಿದ್ದರೂ ಲೋಕಗಳು ಹುಟ್ಟುವವಲ್ಲವೆನ್ನಬಹುದೆ ? ಜಗತ್ತುಗಳ ಉತ್ಪತ್ತಿಯಾದರೂ ಅಧಿಷ್ಠಾತೃವೊಬ್ಬನಿಲ್ಲದೆಯೇ ಆದೀತೇನು ? ಈಶ್ವರನಲ್ಲದವನು ಯಾವನುತಾನೆ ಅದನ್ನು ಮಾಡುವದಕ್ಕೆ ಸೊಂಟವನ್ನು ಕಟ್ಟಿಕೊಂಡಾನು ? (ಅಥವಾ ಈಶ್ವರನಲ್ಲದವನು ಅದನ್ನು ಮಾಡಲಾಪನೇನು ? ಈಶ್ವರನಿಗೆ ಈ ಜಗತ್ತನ್ನು ಸೃಜಿಸುವದಕ್ಕೆ ಯಾವ ಪ್ರಯತ್ನವುತಾನೆ ಬೇಕಾದೀತು ?)[1] ಹೀಗಿದ್ದರೂ ನಿನ್ನನ್ನು ಕುರಿತು ಈ ಮೂಢರು ಸಂಶಯಪಡುತ್ತಿರುವರಲ್ಲ !

## ವಿವರಣೆ

ಹಿಂದಿನ ಶ್ಲೋಕದಲ್ಲಿ ವೇದವೇದ್ಯನಾದ ಪರಮೇಶ್ವರನು ಜಗತ್ಕಾರಣನೆಂಬ ವಿಷಯಕ್ಕೆ ತರ್ಕವನ್ನು ಉಪಯೋಗಿಸುವದು ತಪ್ಪೆಂದು ಹೇಳಲಾಗಿದೆಯಷ್ಟೆ. ಅಲ್ಲಿ ತರ್ಕವನ್ನು ಉಪಯೋಗಿಸಬಹುದೆಂದು ಒಪ್ಪಿದರೂ ಈ ತಾರ್ಕಿಕರ ತರ್ಕಕ್ಕೆ ಪ್ರತಿತರ್ಕವೂ ಇದೆಯಾದ್ದರಿಂದ ಅವರದು ಕುತರ್ಕವೇ ಎಂಬುದನ್ನು ಇಲ್ಲಿ ತಿಳಿಸಿಕೊಡಲಾಗಿದೆ.

ಲೋಕದಲ್ಲಿ ಯಾವದು ಸಾವಯವವೋ ಅದು ಕಾರ್ಯವು ; ಉದಾಹರಣೆಗೆ ಮಡಕೆಯು ಸಾವಯುವವಾಗಿರುವದರಿಂದ ಅದು ಕಾರ್ಯವಾಗಿರುತ್ತದೆ. ಈ ಲೋಕಗಳೆಲ್ಲವೂ ಅವಯವವುಳ್ಳವುಗಳಾಗಿರುವದರಿಂದ ಇವಕ್ಕೆ ಕಾರಣವೊಂದಿರಬೇಕೆಂದು ಏರ್ಪಡುತ್ತದೆ. ಆದರೆ ಅವು ಕಾರಣದಿಂದಾಗಿರಬೇಕೆಂದು ಆದರೂ ಈಶ್ವರನೇಕೆ ಬೇಕು ?– ಎಂದು ಕುತರ್ಕವನ್ನು ಎಬ್ಬಿಸುವದಕ್ಕೆ ಆಗುವದಿಲ್ಲ. ಏಕೆಂದರೆ ಮಣ್ಣು ತನಗೆತಾನೆ ಮಡಕೆಯಾಗುವದನ್ನು ಯಾರೂ ನೋಡಿಲ್ಲ, ಬಂಗಾರವು ತನಗೆತಾನೆ ಒಡವೆಯಾಗುವದನ್ನು ಯಾರೂ ಕಂಡಿಲ್ಲ. ಆದ್ದರಿಂದ ಮಣ್ಣೆಂಬ ಕಾರಣವಿದ್ದರೂ

---

1. ಅನೀಶೋ ವಾ ಕುರ್ಯಾತ್ ಭುವನಜನನೇ ಕಃ ಪರಿಕರಃ ?– ಎಂಬ ಪಾಠಕ್ಕೆ ಇದು ಅರ್ಥ.

ಮಡಕೆಗೆ ಕುಂಬಾರನೆಂಬ ಚೇತನಕಾರಣವೂ ಹೇಗೆ ಬೇರೆಯಾಗಿ ಬೇಕೋ, ಬಂಗಾರವೆಂಬ ಕಾರಣವಿದ್ದರೂ ಒಡವೆಗೆ ಅಕ್ಕಸಾಲಿ ಎಂಬ ಚೇತನ ಕಾರಣವೂ ಹೇಗೆ ಬೇಕೋ ಹಾಗೆ ಲೋಕಗಳಿಗೆ ಉಪಾದಾನಕಾರಣವೊಂದಲ್ಲದೆ ಚೇತನವಾದ ಅಧಿಷ್ಠಾತೃಕಾರಣವೂ ಬೇಕೆಂದು ಏರ್ಪಡುತ್ತದೆ. ಇನ್ನೊಂದು ವಿಚಾರ. ಕೈಯಿಲ್ಲವ ಕುಂಬಾರನು ಮಡಕೆಯನ್ನು ಮಾಡಲಾರನು. ಬುದ್ಧಿಯಿಲ್ಲದ ಅಕ್ಕಸಾಲೆಯು ಒಡವೆಯನ್ನು ಮಾಡಲಾರನು : ಅಲ್ಲವೆ? ಹೀಗೆಯೇ ಜ್ಞಾನವಾಗಲಿ ಶಕ್ತಿಯಾಗಲಿ ಇಲ್ಲದ ಅನೀಶ್ವರನು, ಅಸಮರ್ಥನು ಯಾವನುತಾನೆ, 'ಪ್ರಪಂಚವನ್ನು ಮಾಡುವದಕ್ಕೆ ಆದೀತು ? ಆದ್ದರಿಂದ ತರ್ಕದೃಷ್ಟಿಯಿಂದ ನೋಡಿದರೂ ಈ ಪ್ರಪಂಚವನ್ನು ಸರ್ವಜ್ಞನೂ ಸರ್ವಶಕ್ತನೂ ಆದ ಪರಮೇಶ್ವರನೇ ಮಾಡಿರಬೇಕೆಂದು ಏರ್ಪಡುತ್ತದೆ.

ಆದರೆ ಈ ಪ್ರಪಂಚವೆಂಬುದು ತರ್ಕಕ್ಕೆ ಗೋಚರವಾಗುವ ವಿಷಯವಲ್ಲ. ಇದನ್ನು ಯಾರು ಹೇಗೆ ಮಾಡಿರಬೇಕು ?– ಎಂಬುದನ್ನು ಪ್ರಭಾವಶಾಲಿಗಳಾದ ದೇವತೆಗಳಾಗಲಿ ಋಷಿಗಳಾಗಲಿ ಕಂಡುಹಿಡಿಯಲಾರರು. ಕೇವಲ ಶ್ರುತಿಯಿಂದಲೇ ತಿಳಿಯಬರುವ ಪರಮಾತ್ಮನನ್ನು ತರ್ಕದಿಂದ ತಿಳಿಯಬೇಕೆಂದು ಹೊರಟ ಮಂದಬುದ್ಧಿಯವರಿಗೆ ಇಂಥ ಸಂಶಯಗಳುಂಟಾಗುವದು ಸ್ವಾಭಾವಿಕವೇ ಆಗಿದೆ. ಶ್ರುತಿ ಹೇಳುತ್ತಿರುವದೇನೆಂದರೆ : "ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ । ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ॥" (ಆತನಿಗೆ ಶರೀರವಿಲ್ಲ, ಕರಣವೂ ಇಲ್ಲ ; ಅವನಿಗೆ ಸಮಾನರಾದವರಾಗಲಿ ಅವನಿಗಿಂತ ಹೆಚ್ಚಿನವರಾಗಲಿ ಯಾರೊಬ್ಬರೂ ಕಂಡುಬಂದಿರುವದಿಲ್ಲ. ಆತನ ಪರಶಕ್ತಿಯು ವಿಚಿತ್ರವಾಗಿರುತ್ತದೆ. ಆತನಿಗೆ ಜ್ಞಾನವೂ ಬಲವೂ ಕ್ರಿಯೆಯೂ ಸ್ವಾಭಾವಿಕವಾಗಿರುತ್ತದೆ.) ಅಜ್ಞಾನಿಗಳಾದ ಸಂಸಾರಿಗಳಿಗೆ ಶರೀರವೂ ಇಂದ್ರಿಯಗಳೂ ಇರುವಾಗ ಒಂದಿಷ್ಟು ಶಕ್ತಿಯೂ ಒಂದಿಷ್ಟು ಜ್ಞಾನವೂ ತೋರಿಕೊಳ್ಳುತ್ತಿರುತ್ತದೆ. ಆದರೆ ಪರಮೇಶ್ವರನಿಗೂ ಜಗತ್ತನ್ನು ಸೃಷ್ಟಿಮಾಡುವದಕ್ಕೆ ಹಾಗೆಯೇ ಶರೀರೇಂದ್ರಿಯಗಳು ಇದ್ದರೇ ಕ್ರಿಯಾ ಜ್ಞಾನಶಕ್ತಿಗಳುಂಟಾಗಬಹುದೆಂಬುದು ಕುತರ್ಕವಲ್ಲದೆ

ಮತ್ತೇನು? ಈ ಜಗತ್ತನ್ನು ಮಾಡುವದು ನಮ್ಮಂಥವರಿಗೆ ಬಹಳ ದೊಡ್ಡ ಕೆಲಸವಾಗಿರಬಹುದು; ಆದರೆ ಸರ್ವಶಕ್ತನಾದ ಮಹೇಶ್ವರನಿಗೆ ಇದೊಂದು ಲೀಲೆಯೇ ಆಗಿರುತ್ತದೆ. ಆದ್ದರಿಂದ ಜೀವರುಗಳಿಗೆ ಅನುಗ್ರಹವನ್ನು ಮಾಡುವದೊಂದನ್ನು ಬಿಟ್ಟರೆ ಮತ್ತೆ ಯಾವ ಪ್ರಯೋಜನವೂ ಈ ಜಗತ್ಸೃಷ್ಟಿಯಿಂದ ಆತನಿಗೆ ಆಗಬೇಕಾದದ್ದು ಇಲ್ಲ. ಆದ್ದರಿಂದ ದುಷ್ಕೃತದ ಫಲವಾಗಿ ನಾಸ್ತಿಕರು ಮಾಡುತ್ತಿರುವ ಕುತರ್ಕಕ್ಕೆ ಮರುಳಾಗದೆ ಈಶ್ವರನೇ ಜಗತ್ಕರ್ತೃವೆಂದು ನಂಬಿ ಆತನನ್ನು ಭಜಿಸಬೇಕು- ಎಂಬುದು ಶ್ಲೋಕದ ತಾತ್ಪರ್ಯವು.

**ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ**
**ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ ।**
**ರುಚೀನಾಂ ವೈಚಿತ್ರ್ಯಾದೃಜುಕುಟಿಲನಾನಾಪಥಜುಷಾಂ**
**ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ** ॥ ೭ ॥

[ಪ್ರತಿಪದಾರ್ಥ :— ತ್ರಯೀ– ವೇದತ್ರಯವು ಸಾಂಖ್ಯಮ್– (ಕಪಿಲರ) ಸಾಂಖ್ಯವು ಯೋಗಃ- (ಪಾತಂಜಲ) ಯೋಗವು ಪಶುಪತಿಮತಮ್- ಪಾಶುಪತಮತವು ವೈಷ್ಣವಮ್– ಭಾಗವತಮತವು ಇತಿ– ಈ ಪ್ರಕಾರವಾಗಿ ಪ್ರಸ್ಥಾನೇ– ಹೊರಟಿರುವ ಮಾರ್ಗವು ಪ್ರಭಿನ್ನೇ- ಬೇರೆಬೇರೆಯಾಗಿರುವಲ್ಲಿ ಇದಮ್- ಇದು ಪರಮ್- ಹೆಚ್ಚಿನದು ಅದಃ ಪಥ್ಯಂ ಚ- ಅದು ಮತ್ತೂ ಹಿತಕರವಾದದ್ದು ಇತಿ- ಹೀಗೆಂದು ರುಚೀನಾಂ- ಇಚ್ಛೆಗಳ ವೈಚಿತ್ರ್ಯಾತ್- ವಿಚಿತ್ರಭಾವದಿಂದ ಋಜುಕುಟಿಲನಾನಾಪಥಜುಷಾಮ್- ನೇರಾದ ಡೊಂಕಾದ ಬಗೆಬಗೆಯ ಹಾದಿಗಳನ್ನು ಸೇವಿಸುತ್ತಿರುವ ನೃಣಾಮ್— ಜನರಿಗೆ ತ್ವಮೇಕಃ— ನೀನೊಬ್ಬನೇ ಪಯಸಾಮ್— ನೀರು (ನದಿ)ಗಳಿಗೆ ಅರ್ಣವ ಇವ– ಸಮುದ್ರದಂತೆ ಗಮ್ಯಃ- ಪ್ರಾಪ್ಯನು ಅಸಿ- ಆಗಿರುತ್ತೀಯೆ.]

೭. ವೈದಿಕಮತವು, ಸಾಂಖ್ಯ, ಯೋಗ, ಪಾಶುಪತ ಮತ, ವೈಷ್ಣವಮತ- ಎಂದೀ ಪರಿಯಲ್ಲಿ ಶಾಸ್ತ್ರಪ್ರಸ್ಥಾನವು ಬೇರೆ ಬೇರೆಯಾಗಿರುವಲ್ಲಿ ಇದು ಹೆಚ್ಚಿನ ಮತವು, ಅದೇ ಹೆಚ್ಚಿನ ಮತವು, ಇದೇ ಹಿತಕರವಾದದ್ದು, ಅದೇ ಹಿತಕರವಾದದ್ದು– ಎಂದು ಒಬ್ಬೊಬ್ಬರು ಒಂದೊಂದು ಮಾರ್ಗವನ್ನು ಅನುಸರಿಸಿರುತ್ತಾರೆ. ಆ ಮಾರ್ಗಗಳಲ್ಲಿ ಕೆಲವು ನೇರಾದ ಮಾರ್ಗಗಳು,

ಮತ್ತೆ ಕೆಲವು ವಕ್ರಮಾರ್ಗಗಳು. ಆದರೆ ಈ ಎಲ್ಲರಿಗೂ ನದಿಗಳಿಗೆ ಸಮುದ್ರದಂತೆ ನೀನೊಬ್ಬನೇ ಗತಿಯು.

## ವಿವರಣೆ

ತಾರ್ಕಿಕರ ಮತವು ಬಗೆಬಗೆಯಾಗಿದ್ದು ಆ ಮತಗಳು ಒಂದಕ್ಕೊಂದು ವಿರುದ್ಧವಾಗಿರುವಂತೆಯೇ ಈಶ್ವರವಾದಿಗಳ ಮತಗಳೂ ಪರಸ್ಪರವಿರುದ್ಧ ವಾಗಿಯೇ ಇವೆಯಲ್ಲ! ಇವುಗಳಲ್ಲಿ ಯಾವದನ್ನು ನಿಜವೆಂದು ನಂಬೋಣ?- ಎಂದು ಕೆಲವರಿಗೆ ಸಂಶಯವುಂಟಾಗಬಹುದು. ಆದ್ದರಿಂದ ಈ ಸಂಶಯ ನಿವಾರಣೆಗೆಂದು ಈ ಶ್ಲೋಕವು ಹೊರಟಿರುತ್ತದೆ.

ಈಶ್ವರವಾದಿಗಳ ಮತಗಳು ಭಿನ್ನಭಿನ್ನಮಾರ್ಗಗಳಾಗಿ ಒಡೆದುಕೊಂಡಿ ರುವದು ನಿಜ. ಆದರೆ ಆ ಮತಗಳಲ್ಲಿ ಒಳಭೇದಗಳು ಎಷ್ಟೇ ಹೆಚ್ಚಾಗಿದ್ದರೂ ಕೊನೆಯಲ್ಲಿ ಮುಟ್ಟಬೇಕಾದ ಪರಮೇಶ್ವರನ ವಿಷಯದಲ್ಲಿ ಎಲ್ಲಾ ಮತ ದವರೂ ಒಂದೇ ಅಭಿಪ್ರಾಯದವರಾಗಿರುತ್ತಾರೆ. ಇವರ ಮತಗಳಲ್ಲಿ ತಾರ್ಕಿಕರಂತೆ ಸಿದ್ಧಾಂತಸಾಧನಗಳೆಲ್ಲವೂ ಬೇರೆಬೇರೆಯೇ ಆಗಿದ್ದು ಕೊನೆಗೂ ವಿರೋಧವೇ ಉಳಿದುಕೊಂಡಿರುವದಿಲ್ಲ. ಅದು ಹೇಗೆಂದರೆ:-

**ತ್ರಯೀ**ಮಾರ್ಗವೆಂದರೆ ವೇದಸಮ್ಮತವಾದ ಮಾರ್ಗವು. ಶ್ರುತಿ ಸ್ಮೃತಿಪುರಾಣಗಳನ್ನು ಪ್ರಮಾಣವೆಂದು ಹಿಡಿದಿರುವವರ ಅಭಿಪ್ರಾಯದಲ್ಲಿ ವೇದದಲ್ಲಿ ಕರ್ಮಕಾಂಡವೂ ಜ್ಞಾನಕಾಂಡವೂ ಇರುತ್ತವೆ. ವೇದೋಕ್ತ ಕರ್ಮಗಳನ್ನೂ ಸ್ಮೃತ್ಯಾದಿಗಳಲ್ಲಿ ಹೇಳಿರುವ ವರ್ಣಾಶ್ರಮಧರ್ಮಗಳನ್ನೂ ಯಥಾಶಕ್ತಿಯಾಗಿ ಮಾಡಿ ಪರಮೇಶ್ವರನ ಆರಾಧನೆಗೆಂದು ಉಪಯೋಗಿಸಿ ದರೆ ಚಿತ್ತಶುದ್ಧಿಯಾಗುವದೆಂತಲೂ ಆ ಪರಮೇಶ್ವರನ ಉಪಾಸನೆಯಿಂದ ಆತನ ಅನುಗ್ರಹವಾಗಿ ಈಶ್ವರಸಾಯುಜ್ಯವೇ ದೊರೆಯುವದೆಂತಲೂ ವೈದಿಕ ಮತದವರ ಅಭಿಪ್ರಾಯವಿರುವದು. ವೈದಿಕರಲ್ಲಿ ಒಳವಿವಾದಗಳಿದ್ದರೂ ಈಶ್ವರನೇ ಪರಮಗತಿ ಎಂಬ ವಿಷಯಕ್ಕೆ ಅವರಲ್ಲಿ ಯಾವ ವಿಮತವೂ ಇರುವದಿಲ್ಲ.

**ಸಾಂಖ್ಯಯೋಗಗಳು** ಕಪಿಲ, ಪತಂಜಲಿ ಎಂಬ ಋಷಿಗಳಿಂದ ದೃಷ್ಟವಾಗಿರುತ್ತವೆ. ಸಾಂಖ್ಯರು ತತ್ತ್ವಗಳನ್ನು ವಿಚಾರಮಾಡಿ ಪುರುಷ, ಪ್ರಕೃತಿ-ಎಂಬ ವಿವೇಕವನ್ನು ಮಾಡಿಕೊಡುತ್ತಾರೆ. ಪುರುಷನಿಗೆ ಪ್ರಕೃತಿಯ ಗುಣಗಳ ಸಂಬಂಧದಿಂದ ಬಂಧವೂ ಅವರ ವಿವೇಕದಿಂದ ಕೈವಲ್ಯವೂ ಆಗುವದೆಂಬುದು ಸಾಂಖ್ಯರ ಮತವು. ಪ್ರಕೃತಿಯ ಸಂಬಂಧವನ್ನು ತಪ್ಪಿಸಿಕೊಳ್ಳುವದಕ್ಕೆ ಚಿತ್ತಸಮಾಧಿಯನ್ನು ಪಡೆಯುವದೇ ಉಪಾಯವೆಂಬುದು ಯೋಗಿಗಳ ಅಭಿಪ್ರಾಯವು. ಯೋಗಿಗಳು ಸೇಶ್ವರಸಾಂಖ್ಯರಾಗಿರುವದರಿಂದ ಸಾಂಖ್ಯರ ವಿಚಾರವೂ ಪರಂಪರೆಯಿಂದ ಈಶ್ವರನನ್ನು ಪಡೆಯುವದಕ್ಕೆ ಒಂದು ವಕ್ರಮಾರ್ಗವೇ ಆಗಿರುತ್ತದೆ.

**ಪಾಶುಪತಮತದವರು** ಹೇಳುವದೇನೆಂದರೆ ಕಾರ್ಯ, ಕಾರಣ, ಯೋಗ, ವಿಧಿ, ದುಃಖಾಂತ- ಎಂಬ ಐದು ಪದಾರ್ಥಗಳನ್ನು ಪಶುಪತಿಯಾದ ಈಶ್ವರನು ಪಶುಗಳನ್ನು ಪಾಶಗಳಿಂದ ಬಿಡುಗಡೆಮಾಡುವದಕ್ಕಾಗಿ ಉಪದೇಶಿಸಿರುತ್ತಾನೆ. ಕಾರ್ಯವೆಂದರೆ ಪ್ರಧಾನದ ಕಾರ್ಯವಾದ ಮಹದಾದಿಗಳು ; ಕಾರಣವೆಂದರೆ ಈಶ್ವರನು ; ಯೋಗವೆಂದರೆ ಓಂಕಾರಾದಿಗಳ ಧ್ಯಾನವೇ ಮುಂತಾದದ್ದನ್ನು ಮಾಡುವದು ; ವಿಧಿಯೆಂದರೆ ತ್ರಿಕಾಲಸ್ನಾನವೇ ಮುಂತಾದ ಆಚಾರವು ; ದುಃಖಾಂತವೆಂದರೆ ಮೋಕ್ಷವು. ಈ ಮತದಲ್ಲಿಯೂ ಜೀವರುಗಳು ಸಂಸಾರದಿಂದ ಬಿಡುಗಡೆಯಾಗುವದಕ್ಕೂ ಪರಗತಿಯನ್ನು ಪಡೆಯುವದಕ್ಕೂ ಪರಮೇಶ್ವರನೇ ಕಾರಣನಾಗಿರುತ್ತಾನೆ.

**ವೈಷ್ಣವಮತವೆಂದರೆ** ಭಾಗವತಸಂಪ್ರದಾಯದವರ ಮತವು. ಅವರು ಹೇಳುವದೇನೆಂದರೆ ವಾಸುದೇವಭಗವಂತನು ನಿರಂಜನಜ್ಞಾನಸ್ವರೂಪನಾಗಿರುವ ಅದ್ವಿತೀಯ ಪರಮಾರ್ಥತತ್ತ್ವವು. ಆತನು ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣ- ಎಂಬ ಚತುರ್ವ್ಯೂಹಗಳಾಗಿ ವಿಂಗಡಿಸಿಕೊಂಡು ತೋರುತ್ತಿರುವನು. ಆ ಪರಮೇಶ್ವರನನ್ನು ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ, ಯೋಗ- ಎಂಬ ಅನುಷ್ಠಾನಪ್ರಕಾರಗಳಿಂದ ಯಾವಜ್ಜೀವವೂ ಪೂಜಿಸಿದಾತನು ಸಕಲಕ್ಲೇಶಗಳನ್ನೂ ಕಳೆದು

ಕೊಂಡು ಆ ಭಗವಂತನನ್ನೇ ಸೇರಿಕೊಳ್ಳುತ್ತಾನೆ. ಇವರ ಮತದಲ್ಲಿಯೂ ಪರಮೇಶ್ವರನೇ ಜೀವರಿಗೆ ಕೊನೆಯ ಗತಿ ಎಂಬುದು ಸ್ಪಷ್ಟವಾಗಿರುತ್ತದೆ.

ಹೀಗೆಯೇ ಇನ್ನೂ ಅನೇಕ ಪ್ರಸ್ಥಾನಭೇದಗಳುಂಟು. ಅವುಗಳಲ್ಲಿ ಕೆಲವು ವೇದವಿರುದ್ಧವಾದ ಸಾಧನಗಳನ್ನೂ ಸಿದ್ಧಾಂತಗಳನ್ನೂ ಉಪದೇಶಿಸುತ್ತಿರುವದರಿಂದ ವಕ್ರಪ್ರಸ್ಥಾನಗಳಾಗಿರುತ್ತವೆ; ಮತ್ತೆ ಕೆಲವು ವೇದವನ್ನು ಸ್ವಲ್ಪವೂ ಬಿಡದೆ ಅದಕ್ಕನುಗುಣವಾಗಿಯೇ ಬೋಧಿಸುತ್ತಿರುವದರಿಂದ ಋಜುಪ್ರಸ್ಥಾನಗಳಾಗಿರುತ್ತವೆ. ಹೇಗೆಯೇ ಆಗಲಿ, ಗಂಗೆ, ಯಮುನೆ, ಬ್ರಹ್ಮಪುತ್ರ, ಸಿಂಧು, ನರ್ಮದೆ, ಕೃಷ್ಣೆ, ಗೋದಾವರಿ, ಕಾವೇರಿ, ತಾಮ್ರಪರ್ಣಿ- ಮುಂತಾದ ನದಿಗಳು ಬೇರೆಬೇರೆಯ ಕಡೆಗೆ ಬೇರೆಬೇರೆಯ ರೀತಿಯಿಂದ ಹರಿದುಬಂದರೂ ಕೊನೆಗೆ ಸಮುದ್ರವನ್ನೇ ಸೇರಿ ಒಂದಾಗಿಬಿಡುವಂತೆ ಜನರು ಯಾವ ಮತವನ್ನು ಅವಲಂಬಿಸಲಿ, ಕೊನೆಗೆ ಪರಮೇಶ್ವರನನ್ನೇ ಸೇರಬೇಕಾಗಿರುತ್ತವೆ ಎಂಬುದು ಸಿದ್ಧಾಂತವು. ಆದ್ದರಿಂದ ಭಿನ್ನಭಿನ್ನಕಾಲದ, ಭಿನ್ನಭಿನ್ನರುಚಿಯುಳ್ಳ, ಭಿನ್ನಭಿನ್ನಯೋಗ್ಯತೆಯುಳ್ಳ ಜನರಿಗಾಗಿ ಆಯಾ ಆಚಾರ್ಯರು ತೋರಿಸಿಕೊಟ್ಟಿರುವ ಮಾರ್ಗಗಳು ಪರಸ್ಪರವಿರುದ್ಧವಾಗಿ ಕಂಡರೂ ಗುರಿಯಲ್ಲಿ ಒಂದೇ ಆಗಿರುತ್ತವೆ-ಎಂದು ಅಭಿಪ್ರಾಯ

**ಮಹೋಕ್ಷಃ ಖಟ್ವಾಙ್ಗಂ ಪರಶುರಜಿನಂ ಭಸ್ಮ ಫಣಿನಃ**
**ಕಪಾಲಂ ಚೇತೀಯತ್ತವ ವರದ ತನ್ತ್ರೋಪಕರಣಮ್ ।**
**ಸುರಾಸ್ತಾಂ ತಾಮೃದ್ಧಿಂ ದಧತಿ ತು ಭವದ್ಭ್ರೂಪ್ರಣಿಹಿತಾಂ**
**ನ ಹಿ ಸ್ವಾತ್ಮಾರಾಮಂ ವಿಷಯಮೃಗತೃಷ್ಣಾ ಭ್ರಮಯತಿ ॥೮॥**

[ಪ್ರತಿಪದಾರ್ಥ : ವರದ— ಇಷ್ಟಾರ್ಥದಾಯಕನೆ, ಮಹೋಕ್ಷಃ— ದೊಡ್ಡ (ಮುದಿ) ಎತ್ತು ಖಟ್ವಾಙ್ಗಮ್— ಮಂಚದ ಕಾಲು ಪರಶುಃ— ಗಂಡುಗೊಡಲಿ ಅಜಿನಮ್- ಚರ್ಮ, ಭಸ್ಮ— ಬೂದಿ ಫಣಿನಃ— ಹಾವುಗಳು ಕಪಾಲಂ ಚ— ಮತ್ತು ತಲೆಯಬುರುಡೆ ಇತಿ- ಹೀಗೆಂದು ಇಯತ್- ಇಷ್ಟು ತವ— ನಿನ್ನ ತನ್ತ್ರೋಪಕರಣಮ್— ಕುಟುಂಬಪೋಷಣೆಯ ಉಪಕರಣವು. ಕಿಂ ತು- ಆದರೆ ಸುರಾಃ- ದೇವತೆಗಳು ತಾಂ ತಾಮ್ ಋದ್ಧಿಮ್— ಆಯಾ ಋದ್ಧಿಯನ್ನು ಭವದ್ಭ್ರೂಪ್ರಣಿಹಿತಾಮ್— ನಿನ್ನ ಹುಬ್ಬಿನಿಂದ ಇಡಲ್ಪಟ್ಟದ್ದನ್ನೇ ದಧತಿ— ಧರಿಸುತ್ತಿದಾರೆ. ಸ್ವಾತ್ಮಾರಾಮಮ್— ತನ್ನ

ತ್ಮನಲ್ಲಿ ರಮಿಸುತ್ತಿರುವವನಿಗೆ ವಿಷಯಮೃಗತೃಷ್ಣಾ- ವಿಷಯಗಳೆಂಬ ಬಿಸಿಲು ಕುದುರೆಯು ನ ಹಿ ಭ್ರಮಯತಿ- ಭ್ರಾಂತಿಗೊಳಿಸಲಾರವಷ್ಟೆ.]

೮. ಎಲೈ ಇಷ್ಟಾರ್ಥದಾಯಕನೆ, ಒಂದು ಮುದಿ ಎತ್ತು, ಖಟ್ವಾಂಗವೆಂಬ ಆಯುಧವು, ಗಂಡುಗೊಡಲಿ, ಗಜಚರ್ಮ, ವಿಭೂತಿ, ಸರ್ಪಗಳು, ಕಪಾಲವು- ಇವಿಷ್ಟೇ ನಿನ್ನ ಕುಟುಂಬ ಪೋಷಣೆಯ ಸಾಮಗ್ರಿಯು. ಆದರೂ ಇಂದ್ರಾದಿದೇವತೆಗಳು ನಿನ್ನ ಹುಬ್ಬನ್ನು ಹಾರಿಸಿದಮಾತ್ರದಿಂದ ಬಗೆಬಗೆಯ ಐಶ್ವರ್ಯವನ್ನು ಪಡೆದುಕೊಳ್ಳುತ್ತಿರುವರು ! ಆನಂದಸ್ವರೂಪನಾಗಿರುವ ಆತ್ಮನಲ್ಲಿಯೇ ರತನಾಗಿರುವವನನ್ನು ಶಬ್ದಸ್ಪರ್ಶಾದಿವಿಷಯಗಳು ಮರಳುಗೊಳಿಸಲಾರವಷ್ಟೆ ?

## ವಿವರಣೆ

ಹೊರಗಿನ ವೇಷದಿಂದ ನೋಡಿದರೆ ಈಶ್ವರನು ಕಡುಬಡವನು. ಏಕೆಂದರೆ ಅವನಿಗೆ ವಾಹನವಾಗಿರುವದು ಒಂದು ಮುದಿ ಎತ್ತು, ಆಯುಧವೆಂಬುದು ಒಂದು ಮಂಚದ ಕಾಲು, ಒಂದು ಗಂಡುಗೊಡಲಿ ; ಹೊದಿಕೆಗೆ ಆನೆಯ ಚರ್ಮ, ಮೈಗೆ ಬಳಿಮಕೊಂಡಿರುವದು ಬೂದಿ ; ಒಡವೆಗಳೆಂದರೆ ಹಾವುಗಳು, ಕೈಯಲ್ಲಿ ಹಿಡಿದಿರುವ ಭಿಕ್ಷಾಪಾತ್ರೆಯು ಕಪಾಲವು. ಆದರೆ 'ಉಪಾಸನೆಯಿಂದ ತುಷ್ಟನಾದರೂ ಇಂಥ ಬಡವನೇನು ಕೊಟ್ಟಾನು ?' ಎನ್ನುವದಕ್ಕಿಲ್ಲ ; ಏಕೆಂದರೆ ಇಂದ್ರ, ವಿಷ್ಣು – ಮುಂತಾದವರಿಗೆ ಬಂದಿರುವ ಐಶ್ವರ್ಯವೆಲ್ಲವೂ ಆತನ ಹುಬ್ಬಿನಹಾರಿಸುವಿಕೆಯಿಂದ. ಆತನ ಕಡೆಗಣ್ಣಿನ ನೋಟವೇ ಅವರಿಗೆ ಅಂಥ ಹೆಚ್ಚಿನ ಐಶ್ವರ್ಯದ ಸಿದ್ಧಿಯನ್ನುಂಟುಮಾಡಿ ಕೊಡುತ್ತಿರುವದು ! ಹಾಗಾದರೆ ತಾನೇಕೆ ಬೇಕಾದ ಉಪಕರಣಗಳನ್ನು ಉಪಯೋಗಿಸಿಕೊಳ್ಳದಿರುವನು ?- ಎಂದರೆ, ಉಪಕರಣಗಳು ನಿಜವಾಗಿ ಆನಂದದಾಯಕವಲ್ಲವೆಂಬುದನ್ನು ಚೆನ್ನಾಗಿ ತಿಳಿದಿರುವದರಿಂದ. ಸಾಮಾನ್ಯ ಜೀವರೂ ಸ್ವಾತ್ಮಾರಾಮರಾದಾಗ ಸ್ವಾರಾಜ್ಯವನ್ನು ಪಡೆದುಕೊಳ್ಳುವರೆಂದು

ಶ್ರುತಿಯು ಹೇಳುತ್ತಿದೆ. ಹೀಗಿರುವಲ್ಲಿ ನಿತ್ಯಮುಕ್ತನಾದ ಪರಮೇಶ್ವರನು ಹೊರಗಿನ ಭೋಗಸಾಮಗ್ರಿಗಳಿಗೆ ಬೆರಗಾಗಲಾರನೆಂದು ಹೇಳುವದೇನಿದೆ?

ಇಲ್ಲಿ ಹೇಳಿರುವ ಮುದಿಯೆತ್ತು- ಮುಂತಾದವುಗಳು ಹೊರನೋಟಕ್ಕೆ ಬಡತನದ ಗುರುತಾಗಿ ತೋರಬಹುದಾದರೂ ನಿಜವಾಗಿ ತತ್ತ್ವವನ್ನು ಬಲ್ಲವರಿಗೆ ಅವುಗಳೂ ಅಖಂಡವಾದ ಪರಮೈಶ್ವರ್ಯವನ್ನೇ ಸೂಚಿಸುವವು. ಹೇಗೆಂದರೆ, ಮುದಿ ಎತ್ತೆಂಬುದು ಧರ್ಮಸ್ವರೂಪನಾದ ನಂದಿಯು. ಧರ್ಮವು ಅನಾದಿಕಾಲದಿಂದಲೂ ಜಗತ್ತನ್ನೆಲ್ಲ ಧರಿಸಿರುವದರಿಂದ ಅದನ್ನು ಮುದಿಎತ್ತೆಂದು ವರ್ಣಿಸಿದೆ. ಪುರುಷ, ಪ್ರಧಾನ, ಮಹತ್ತು, ಅಹಂಕಾರ, ತನ್ಮಾತ್ರೆಗಳು, ಇಂದ್ರಿಯಗಳು, ಭೂತಗಳು- ಇವೆಲ್ಲವೂ ಇಲ್ಲಿ ವರ್ಣಿಸಿರುವ ವೇಷಗಳಿಂದ ಗುಪ್ತರಾಗಿ ಪರಮೇಶ್ವರನನ್ನು ಸೇವಿಸುತ್ತಿರುವರೆಂದು ಆಗಮಜ್ಞರು ಹೇಳುತ್ತಾರೆ. ಆದ್ದರಿಂದ ಜಗತ್ಕುಟುಂಬಿಯಾದ ಆ ಪರಮೇಶ್ವರನಿಗೆ ತತ್ತ್ವಗಳೇ ಉಪಕರಣವು ಎಂಬುದನ್ನು ನಿಂದಾಸ್ತುತಿಯ ರೂಪದಲ್ಲಿ ಇಲ್ಲಿ ಹೇಳಿದೆ- ಎಂದು ತಿಳಿಯಬೇಕು.

**ಧ್ರುವಂ ಕಶ್ಚಿತ್ಸರ್ವಂ ಸಕಲಮಪರಸ್ತ್ವಧ್ರುವಮಿದಂ**
**ಪರೋ ಧ್ರೌವ್ಯಾಧ್ರೌವ್ಯೇ ಜಗತಿ ಗದತಿ ವ್ಯಸ್ತವಿಷಯೇ।**
**ಸಮಸ್ತೇಽಪ್ಯೇತಸ್ಮಿನ್ ಪುರಮಥನ ತೈರ್ವಿಸ್ಮಿತ ಇವ**
**ಸ್ತುವನ್ ಜಿಹ್ರೇಮಿ ತ್ವಾಂ ನ ಖಲು ನನು ಧೃಷ್ಟಾ ಮುಖರತಾ॥೯॥**

[ಪ್ರತಿಪದಾರ್ಥ: ಪುರಮಥನ- ತ್ರಿಪುರಗಳನ್ನು ನಾಶಗೊಳಿಸಿದವನೆ, ಜಗತಿ- ಪ್ರಪಂಚದಲ್ಲಿ ಕಶ್ಚಿತ್- ಒಬ್ಬನು ಇದಂ ಸರ್ವಂ- ಇದೆಲ್ಲವನ್ನೂ ಧ್ರುವಮ್- ನಿತ್ಯವೆಂದೂ ಅಪರಸ್ತು- ಮತ್ತೊಬ್ಬನಾದರೋ ಸಕಲಮ್- ಎಲ್ಲವೂ ಅಧ್ರುವಮ್- ಅನಿತ್ಯವೆಂದೂ ಪರಃ- ಇನ್ನೊಬ್ಬನು ವ್ಯಸ್ತವಿಷಯೇ- ವ್ಯಸ್ತವಿಷಯದಲ್ಲಿಯೂ ಏತಸ್ಮಿನ್ ಸಮಸ್ತೇಽಪಿ- ಈ ಸಮಸ್ತ ವಿಷಯದಲ್ಲಿಯೂ ಧ್ರೌವ್ಯಾಧ್ರೌವ್ಯೇ- ನಿತ್ಯತ್ವಾನಿತ್ಯತ್ವಗಳನ್ನು ಗದತಿ- ಹೇಳುತ್ತಿದ್ದಾನೆ. ತೈಃ- ಅವುಗಳಿಂದ ವಿಸ್ಮಿತ ಇವ- ಬೆರಗಾದವನಂತೆ ತ್ವಾಮ್- ನಿನ್ನನ್ನು ಸ್ತುವನ್- ಹೊಗಳುವವನಾಗಿ ನ ಜಿಹ್ರೇಮಿ- ನಾನು ನಾಚಿಕೆಪಡುತ್ತಿಲ್ಲ ಖಲು- ನಿಶ್ಚಿತವಾಗಿ ಮುಖರತಾ- ವಾಚಾಲತ್ವವು ಧೃಷ್ಟಾ ನನು- ದಿಟ್ಟವಲ್ಲವೆ?]

೯. ಈ ಜಗತ್ತೆಲ್ಲವೂ ನಿತ್ಯವೆಂದು ಒಬ್ಬನು, ಎಲ್ಲವೂ ಅನಿತ್ಯವೆಂದು ಮತ್ತೊಬ್ಬನು ಹೀಗೆ- ವಿರುದ್ಧವಾಗಿ ಹೇಳುತ್ತಿದ್ದಾನೆ. ಇನ್ನೂ ಒಬ್ಬ ತಾರ್ಕಿಕನು ಇದೆಲ್ಲವೂ ವ್ಯಸ್ತವಿಷಯದಲ್ಲಿ ಅನಿತ್ಯವೆಂದೂ ಸಮಸ್ತವಿಷಯದಲ್ಲಿ ನಿತ್ಯವೆಂದೂ ಹೇಳುತ್ತಿದ್ದಾನೆ. ಈ ವಾದಗಳಿಂದ ಬೆರಗಾದವನಂತೆ ನಿನ್ನನ್ನು ಸ್ತುತಿಸುತ್ತಿದ್ದರೂ ನನಗೆ ನಾಚಿಕೆಯಿಲ್ಲವಲ್ಲ! ಆಹಾ! ವಾಚಾಲನಾದವನಿಗೆ ಎಷ್ಟು ದಿಟ್ಟತನವು!

## ವಿವರಣೆ

ಜಗತ್ತೆಲ್ಲವೂ ನಿತ್ಯವು, ಇದಕ್ಕೆ ಎಂದಿಗೂ ನಾಶವಿಲ್ಲ— ಎಂದು ಸಾಂಖ್ಯಾದಿಗಳ ಮತವು. ಅವರ ಅಭಿಪ್ರಾಯವೇನೆಂದರೆ ಇರುವದು ನಾಶವಾಗಲಾರದು, ಇಲ್ಲದ್ದು ಉಂಟಾಗಲಾರದು. ಆದ್ದರಿಂದ ಜಗತ್ತು ಪ್ರಲಯವಾಗುವದೆಂದರೂ ತ್ರಿಗುಣಾತ್ಮಕವಾದ ಪ್ರಧಾನರೂಪದಲ್ಲಿ ಅವ್ಯಕ್ತವಾಗಿದ್ದುಕೊಂಡಿರುವದೇ; ಅದು ಸೃಷ್ಟವಾಗುವದೆಂದರೂ ಮಹತ್ತು, ಅಹಂಕಾರ, ತನ್ಮಾತ್ರೆಗಳು ಮುಂತಾದ ರೂಪದಿಂದ ತೋರಿಕೊಳ್ಳುತ್ತಿರುವದೇ. ಹೀಗಿರುವಲ್ಲಿ ಈಶ್ವರನು ಜಗತ್ತನ್ನು ಸೃಜಿಸುತ್ತಾನೆಂದರೇನು? ಇಲ್ಲದ್ದನ್ನುಂಟುಮಾಡುವದಕ್ಕೆ ಈಶ್ವರನಿಗಾದರೂ ಎಲ್ಲಿಂದ ಶಕ್ತಿ ಬಂದೀತು? ಇಷ್ಟೇ ಅಲ್ಲ. ನಿತ್ಯವಾದ ಪ್ರಧಾನವು ಸಾವಯವವಾಗಿರುವದರಿಂದ ಅದು ಪರಿಣಾಮವಾಗಿ ರೂಪಾಂತರವನ್ನು ಹೊಂದುತ್ತದೆ ಎಂಬುದು ಯುಕ್ತಿಯುಕ್ತವಾಗಿರುತ್ತದೆ; ಆದರೆ ಪರಮೇಶ್ವರನು ಜಗತ್ಕಾರಣನೆಂದರೆ, ಅವನೇ ಉಪಾದಾನಕಾರಣವೆಂದರೆ, ಈಶ್ವರನೂ ಪರಿಣಮಿಸುವ ಕಾರಣವೆಂದು ಒಪ್ಪಬೇಕಾಗುವದು. ಆದ್ದರಿಂದ ಈಶ್ವರಕಾರಣವಾದವು ಸರ್ವಥಾ ಸರಿಯಲ್ಲ; ಒಂದು ವೇಳೆ ಈಶ್ವರನೂ ಕಾರಣನೆಂದು ಒಪ್ಪಿದರೂ ಅವ್ಯಕ್ತವಾಗಿರುವ ಜಗತ್ತನ್ನು ವ್ಯಕ್ತರೂಪಕ್ಕೆ ತರುವದೇ ಅವನ ಕೆಲಸವೆಂದು ಒಪ್ಪಬೇಕು. ಕುಂಬಾರನು ಇರುವ ಮಣ್ಣನ್ನೇ ಮಡಕೆಯಾಗಿ ಮಾಡಿಯಾನೇ ಹೊರತು ಮಣ್ಣಿನಲ್ಲಿಲ್ಲದ

ಬಟ್ಟೆಯನ್ನಾಗಿ ಅದನ್ನು ಮಾರ್ಪಡಿಸಲಾರನು. ಹೀಗೆಂದು ಸತ್ಕಾರ್ಯ ವಾದಿಗಳಾದ ಸಾಂಖ್ಯರೇ ಮೊದಲಾದವರು ಈಶ್ವರನಾದ ನಿನಗೆ ಶಕ್ತಿ ಸಂಕೋಚವನ್ನು ಮಾಡುವದಕ್ಕೆ ಪ್ರಯತ್ನಿಸುತ್ತಿರುತ್ತಾರೆ.

ಇನ್ನು ಬೇರೆಯ ತಾರ್ಕಿಕರಾದ ಬೌದ್ಧರೇ ಮೊದಲಾದವರು ಹೇಳುವ ದೇನೆಂದರೆ: ಎಲ್ಲವೂ ಅನಿತ್ಯವೇ, ಯಾವದು ಇದೆಯೋ ಅದು ಯಾವದಾದ ರೊಂದು ಅರ್ಥಕ್ರಿಯೆಯನ್ನು ಮಾಡುವದರಿಂದ ಇದೆ ಎನ್ನಿಸಿಕೊಂಡಿರುತ್ತದೆ. ಉದಾಹರಣೆಗೆ ಸುಡುವದೆಂಬ ಅರ್ಥಕ್ರಿಯೆಯನ್ನು ಮಾಡುತ್ತಿರುವದರಿಂದ ಬೆಂಕಿಯು ಇದೆ ಎನಿಸಿಕೊಂಡಿರುತ್ತದೆ; ತೋಯಿಸುವದೆಂಬ ಅರ್ಥಕ್ರಿಯೆ ಯನ್ನು ಮಾಡುವದರಿಂದಲೇ ನೀರು ಇದೆ ಎನಿಸಿಕೊಂಡಿರುತ್ತದೆ; ಒಣಗಿಸುವ ದೆಂಬ ಅರ್ಥಕ್ರಿಯೆಯನ್ನು ಮಾಡುತ್ತಿರುವದರಿಂದಲೇ ಗಾಳಿಯು ಇದೆ ಎನ್ನಿಸಿ ಕೊಂಡಿರುತ್ತದೆ. ಆದರೆ ಹೀಗೆ ಅರ್ಥಕ್ರಿಯೆಯನ್ನು ಮಾಡುವದಕ್ಕೆ ಮೊದಲು ತಾನಿದ್ದ ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಬರಲೇಬೇಕಾಗುವದ ರಿಂದ ಪ್ರತಿಯೊಂದು ವಸ್ತುವೂ ಕ್ಷಣಿಕವೇ, ಅನಿತ್ಯವೇ ಎಂದು ಏರ್ಪಡು ತ್ತದೆ. ಈಶ್ವರನೊಬ್ಬನಿದ್ದರೆ ಅವನು ತಾನೆ ಅನಿತ್ಯವಸ್ತುವನ್ನು ನಿತ್ಯವಾಗಿ ಮಾಡಲಾರನು; ಇಲ್ಲದ ವಸ್ತು ಸೃಷ್ಟವಾಗುವದೂ ಇದ್ದದ್ದು ನಾಶವಾಗು ವದೂ ಸ್ವಭಾವವಾಗಿರುತ್ತದೆ. ಅದೇ ಇದು ಎಂಬ ಜ್ಞಾನವೋ- ಎಂದರೆ ಹೋಲಿಕೆಯಿಂದಾದ ಭ್ರಾಂತಿಯು. ಇಷ್ಟೇ ಅಲ್ಲ ಈಶ್ವರನೊಬ್ಬನಿದಾನೆ ಎಂದರೆ ಅವನೂ ಅರ್ಥಕ್ರಿಯೆಯನ್ನು ಮಾಡಬೇಕಾಗುವದರಿಂದ ಕ್ಷಣಿಕನೇ ಆಗುತ್ತಾನೆ. ಯಾವದೊಂದೂ ವಿಜ್ಞಾನಕ್ಕಿಂತ ಬೇರೆಯಿರುವದಿಲ್ಲ; ವಿಜ್ಞಾನವೂ ಕ್ಷಣಿಕವೇ ಆಗಿರುತ್ತದೆ. ಆದ್ದರಿಂದ ಎಲ್ಲವೂ ಅನಿತ್ಯವೆಂಬುದೇ ಸರಿ ಎಂಬುದು ಅವರ ಅಭಿಪ್ರಾಯ. ಹೀಗೆ ಅನಿತ್ಯವಾದಿಯು ಈಶ್ವರನ ಶಕ್ತಿಯನ್ನು ಸಂಕುಚಿತವಾಗಿ ಮಾಡುವದಲ್ಲದೆ ಈಶ್ವರನನ್ನೇ ಇಲ್ಲವಾಗಿಸು ವವನಾಗಿರುತ್ತಾನೆ.

ಮತ್ತೆ ಬೇರೆಯ ತಾರ್ಕಿಕರಾದ ವೈಶೇಷಿಕರೇ ಮೊದಲಾದವರೆನ್ನುವ ದೇನೆಂದರೆ: ಈ ಜಗತ್ತು ಸತ್ಯವೆಂದಾಗಲಿ ಅನಿತ್ಯವೆಂದಾಗಲಿ ಸಾರ್ವತ್ರಿಕ ವಾಗಿ ಹೇಳುವದಕ್ಕೆ ಆಗಲಾರದು. ಏಕೆಂದರೆ ಅವರ ಅಭಿಪ್ರಾಯದಲ್ಲಿ

ಕಾರ್ಯದ್ರವ್ಯಗಳು ಮೊದಲು ಇಲ್ಲದೆ ಇದ್ದು ಹೊಸದಾಗಿ ಹುಟ್ಟಿ ಕಾಲಾಂತರದಲ್ಲಿ ನಾಶವಾಗುವದು ಅನುಭವದಲ್ಲಿದೆ. ಕಾಲ, ಆಕಾಶ, ಆತ್ಮ, ಮನಸ್ಸು– ಇವುಗಳು ಹುಟ್ಟಿರುವವೆಂದು ಕಲ್ಪಿಸುವದಕ್ಕೆ ಬರುವದಿಲ್ಲ. ಕಾರ್ಯದ್ರವ್ಯವು ಹುಟ್ಟುವದಕ್ಕೆ ಕಾರಣವು ಬೇಕೇಬೇಕಾಗುವದರಿಂದಲೂ ಎಲ್ಲವೂ ಅನಿತ್ಯವೆಂದರೆ ಅನವಸ್ಥೆಯು ಬಂದೊದಗುವದರಿಂದಲೂ ಪೃಥಿವ್ಯಾದಿಗಳಿಗೆ ಮೂಲಕಾರಣವಾಗಿರುವ ಪರಮಾಣುಗಳು ನಿತ್ಯವೆಂದೇ ಒಪ್ಪಬೇಕಾಗುತ್ತದೆ. ಹೀಗೆ ಕೆಲವು ವಸ್ತುಗಳು ನಿತ್ಯ, ಮತ್ತೆ ಕೆಲವು ಅನಿತ್ಯಗಳು. ಹೀಗಿರುವದರಿಂದ ನಿತ್ಯವಾಗಿರುವ ವಸ್ತುಗಳನ್ನು ನಾಶಪಡಿಸುವದಾಗಲಿ, ಅನಿತ್ಯವಾಗಿರುವ ವಸ್ತುಗಳನ್ನು ನಿತ್ಯವಾಗಿ ಇರಿಸುವದಾಗಲಿ ಈಶ್ವರನಿಂದಲೂ ಆಗಲಾರದು. ಕಾಲಾದಿಗಳಂತೆ ಈಶ್ವರನೂ ಬೇಕಾದರೆ ಅವನು ಕಾರ್ಯಮಾತ್ರಕ್ಕೆ ಸಾಧಾರಣಕಾರಣವೆಂದು ಒಪ್ಪಬಹುದು ಎಂಬುದು ಅವರ ಮತವು. ಈ ಮತದಲ್ಲಿಯೂ ಈಶ್ವರನಿಗೆ ಸರ್ವಶಕ್ತಿತ್ವವಿಲ್ಲ; ಜಗತ್ತಿನ ಜನ್ಮಾದಿಗಳಿಗೆ ಈಶ್ವರನು ಸ್ವತಂತ್ರವಾಗಿ ಕಾರಣನೆಂದು ಹೇಳಲಾಗುವದಿಲ್ಲ.

ಇಲ್ಲಿ ನಾವು ವರ್ಣಿಸಿರುವ ವಾದಿಗಳಲ್ಲದೆ ಬೇರೆಯ ತಾರ್ಕಿಕರೂ ಉಂಟು. ಕೆಲವರು ನಿತ್ಯಾನಿತ್ಯವಾದಿಗಳೂ ಉಂಟು. ಅವರಲ್ಲಿ ಕೆಲವರು ಜಗತ್ತು ಸಮಸ್ತವ್ಯಸ್ತರೂಪವಾಗಿರುತ್ತದೆ. ವ್ಯಸ್ತವು ಮಾರ್ಪಡುತ್ತಿರುವದರಿಂದ ಅನಿತ್ಯವು, ಸಮಸ್ತಾಂಶವು ನಿತ್ಯವು ಎನ್ನುವರು. ಜಗತ್ತು ಅಸತ್ಯವೇ, ಅದು ಇಲ್ಲವೇ ಇಲ್ಲ; ಸರ್ವವೂ ಶೂನ್ಯವೇ ಎಂದು ತರ್ಕಿಸುವ ವಾದಿಗಳೂ ಉಂಟು. ಜಗತ್ತು ಕಾರ್ಯವೇ ಅಲ್ಲ; ಹೀಗೆ ಇರುವದೇ ಅದರ ಸ್ವಭಾವವು– ಎಂಬ ನಿತ್ಯವಾದಿಗಳೂ ಉಂಟು. ಹೀಗೆ ಜಗತ್ತು ನಿತ್ಯವೊ, ಅನಿತ್ಯವೊ ? ಎಂಬ ವಿಷಯಕ್ಕೆ ಬಗೆಬಗೆಯ ಮತಭೇದಗಳಿರುವದರಿಂದ ಈಶ್ವರನು ಸರ್ವಶಕ್ತನೆಂಬ ಬಗ್ಗೆ ಭಿನ್ನಭಿನ್ನಸಂಶಯಗಳುಂಟಾಗುವದು ಸಹಜವು.

ಹೀಗಿದ್ದರೂ ಈ ವಾದಿಗಳನ್ನು ಲೆಕ್ಕಿಸದೆ ನೀನು ಈಶ್ವರನನ್ನು ಸ್ತುತಿಸುವದೇಕೆ ?—ಎಂದು ಯಾರಾದರೂ ಕೇಳಬಹುದು. ಅದಕ್ಕೆ ಪುಷ್ಪದಂತನು ಹೇಳುತ್ತಾನೇನೆಂದರೆ : ನಾನು ಈಶ್ವರನನ್ನು ಹೊಗಳುವದರಲ್ಲಿ

ನಾಚಿಕೆಪಡುತ್ತಿಲ್ಲ; ಏಕೆಂದರೆ ಈ ವಾದಿಗಳನ್ನು ಕೇಳಿ ನನಗೆ ವಿಸ್ಮಯ ವಾಗಿದೆ. ಯಾವದಾದರೊಂದು ಅದ್ಭುತದೃಶ್ಯವನ್ನು ಕಂಡು ಬೆರಗಾದವನು ಹೇಗೆ ಜನರು ತನ್ನನ್ನು ಪರಿಹಾಸಮಾಡುವರೆಂಬುದನ್ನು ಲೆಕ್ಕಿಸದೆ ವ್ಯವಹರಿಸು ತ್ತಾನೋ ಹಾಗೆಯೇ ನಾನೂ ಈ ವಾದಿಗಳ ಗಡಿಬಿಡಿಯಿಂದ ಬೆರಗಾಗಿರು ತ್ತೇನೆ ; ಆದ್ದರಿಂದ ನಾಚಿಕೆಯಿಲ್ಲದೆ ಸ್ತೋತ್ರಮಾಡುತ್ತಿದೇನೆ. ಇದು ನನ್ನ ಬಾಯಿಬಡುಕತನವನ್ನು ಸೂಚಿಸುತ್ತದೆ, ಅಷ್ಟೆ.

ಇಲ್ಲಿ ಸ್ತೋತ್ರಕಾರನ ಹೃದಯದಲ್ಲಿರುವ ಅಭಿಪ್ರಾಯವೇನೆಂದರೆ: ವಾದಿಗಳು ಹೀಗೆ ಒಬ್ಬರಿಗೊಬ್ಬರು ವಿರುದ್ಧವಾಗಿ ತರ್ಕಿಸುತ್ತಿರುವದರಿಂದಲೇ ಅವರಿಗೆ ಯಾರಿಗೂ ನಿಶ್ಚಯವು ಸಿಕ್ಕಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಸರ್ವಜ್ಞನೂ ಸರ್ವಶಕ್ತನೂ ಆದ, ವಾಙ್ಮನೋಽಗೋಚರನಾದ, ಪರಮೇಶ್ವರನು ಈ ತಾರ್ಕಿಕರ ಸಂಕುಚಿತಬುದ್ಧಿಗೆ ಹೇಗೆತಾನೆ ಎಟುಕಿಯಾನು ? ಪರಮಾತ್ಮನ ತತ್ತ್ವವನ್ನು ಆತನೇ ಬಲ್ಲನು. ಜಗತ್ತು ನಿತ್ಯವೆಂದೂ ಅನಿತ್ಯವೆಂದೂ ನಿತ್ಯಾನಿತ್ಯವೆಂದೂ ಹೇಳುವ ಈ ವಾದಿಗಳನ್ನು ಮರುಳು ಮಾಡುವ ಈ ವಿಕಲ್ಪಗಳು ಯಾವವೂ ಪರಮಾರ್ಥವಲ್ಲದೆ ಇರಬಹುದು. ಆ ಸರ್ವಜ್ಞನನ್ನು ನನ್ನ ಅಲ್ಪಮತಿಗೆ ತಿಳಿದಂತೆ ಸ್ತೋತ್ರಮಾಡುವದಕ್ಕೆ ನಾನೇಕೆ ಲಜ್ಜೆ ಪಡಬೇಕು? ಆತನ ಅನುಗ್ರಹದಿಂದ ಪರಮಾರ್ಥವೂ, ನನಗೆ ತಾನೇ ಹೊಳೆಯುತ್ತದೆ; ಈ ಕುತರ್ಕಗಳನ್ನೇಕೆ ಲೆಕ್ಕಿಸಲಿ? ಪರಮೇಶ್ವರನೆ, ನೀನು ಹೇಗೆ ಇರುವೆಯೋ, ಈ ಜಗತ್ತಿಗೆ ಹೇಗೆ ಸೃಷ್ಟಿಕರ್ತನೋ, ಅದು ನಿನಗೊಬ್ಬನಿಗೇ ಗೊತ್ತು ನನಗೆ ನಿನ್ನನ್ನು ಸ್ತೋತ್ರಮಾಡುವದೊಂದೇ ಗುರಿ. ಅಷ್ಟೇ ನನಗೆ ಸಾಕಾಗಿದೆ– ಎಂದು ಭಾವ.

**ತವೈಶ್ವರ್ಯಂ ಯತ್ನಾದ್ಯದುಪರಿ ವಿರಂಚಿರ್ಹರಿರಧಃ**
**ಪರಿಚ್ಛೇತ್ತುಂ ಯಾತಾವನಲಮನಲಸ್ಕನ್ಧವಪುಷಃ ॥**
**ತತೋ ಭಕ್ತಿಶ್ರದ್ಧಾಭರಗುರುಗೃಣದ್ಭ್ಯಾಂ ಗಿರಿಶ ಯತ್**
**ಸ್ವಯಂ ತಸ್ಥೇ ತಾಭ್ಯಾಂ ತವ ಕಿಮನುವೃತ್ತಿರ್ನ ಫಲತಿ ॥ ೧೦ ॥**

[ಪ್ರತಿಪದಾರ್ಥಃ– ಗಿರಿಶ- ಪರ್ವತದಲ್ಲಿ ವಾಸಮಾಡಿಕೊಂಡಿರುವ ದೇವನೆ, ಅನಲಸ್ಕನ್ಧವಪುಷಃ– ಬೆಂಕಿಯ ಕಂಬದಂತೆ ಹೊಳೆಯುತ್ತಿರುವ ಶರೀರವುಳ್ಳ ತವ– ನಿನ್ನ

ಐಶ್ವರ್ಯಮ್— ಐಶ್ವರ್ಯವನ್ನು ಯತ್ನಾತ್- ಪ್ರಯತ್ನಪೂರ್ವಕವಾಗಿ ಪರಿಚ್ಛೇತ್ತುಮ್- ಗೊತ್ತುಪಡಿಸುವವಕ್ಕೆಂದು ವಿರಿಞ್ಚಿಃ- ಬ್ರಹ್ಮನು ಉಪರಿ- ಮೇಲಕ್ಕೂ ಹರಿಃ— ವಿಷ್ಣುವು ಅಧಃ- ಕೆಳಕ್ಕೂ ಯಾತೌ- ಹೊರಟವರು ಯತ್- ಯಾವ ಕಾರಣದಿಂದ ಅನಲಮ್-ಅಸಮರ್ಥರಾದರೋ, ತತಃ-ಆಮೇಲೆ ಭಕ್ತಿಶ್ರದ್ಧಾಭರಗುರು- ಭಕ್ತಿಶ್ರದ್ಧೆಗಳ ಭಾರದಿಂದ ತೂಕವಾಗಿರುವಂತೆ ಗೃಣದ್ಭ್ಯಾಮ್- ಸ್ತೋತ್ರಮಾಡುವ ತಾಭ್ಯಾಮ್- ಅವರಿಬ್ಬರಿಗೆ ತತ್- ಅದು ಯತ್- ಯಾವ ಕಾರಣದಿಂದ ಸ್ವಯಮ್- ತಾನೇ ತಸ್ಥೇ- ನಿಂತುಕೊಂಡಿತೋ (ತತಃ- ಆ ಕಾರಣದಿಂದ), ತವ- ನಿನ್ನ ಅನುವೃತ್ತಿಃ- ಸೇವೆಯು ನ ಫಲತಿ ಕಿಮ್- ಫಲಿಸುವದಿಲ್ಲವೇನು ? ]

೧೦. ಎಲೈ ಗಿರಿಶನೆ, ಬೆಂಕಿಯ ಕಂಬದಂತೆ ಹೊಳೆಯುತ್ತಿರುವ ಶರೀರವುಳ್ಳ ನಿನ್ನ ಐಶ್ವರ್ಯವನ್ನು ಪ್ರಯತ್ನಪೂರ್ವಕವಾಗಿ ಗೊತ್ತುಪಡಿಸುವದಕ್ಕೆ ಮೇಲಕ್ಕೆ ಬ್ರಹ್ಮನೂ ಕೆಳಕ್ಕೆ ವಿಷ್ಣುವೂ ಹೋದವರು (ಅದನ್ನು ನಿರ್ಣಯಿಸಲು) ಅಸಮರ್ಥರಾದರಲ್ಲ ! ಆಮೇಲೆ ಭಕ್ತಿಶ್ರದ್ಧಾತಿಶಯದಿಂದ ಸ್ತೋತ್ರಮಾಡುವ ಅವರಿಗೆ (ಅದು) ತಾನೇ ಎದುರಿಗೆ ನಿಂತಿತಲ್ಲ ! ನಿನ್ನ ಸೇವೆಯು ಫಲಿಸುವದಿಲ್ಲವೇನು ?

## ವಿವರಣೆ

ಪರಮೇಶ್ವರನ ಸಗುಣವಾದ ಐಶ್ವರ್ಯವು ಅಪಾರವಾದದ್ದು; ನಿರ್ಗುಣೈಶ್ವರ್ಯವು ವಾಙ್ಮನಸ್ಸುಗಳಿಗೆ ಅಗೋಚರವಾದದ್ದು. ಅದು ತರ್ಕಪ್ರಧಾನರಾದವರಿಗೆ ಎಂದಿಗೂ ಸಿಕ್ಕತಕ್ಕದ್ದಲ್ಲ-ಎಂದು ಹೇಳಿದ್ದರಿಂದ 'ಅಂಥ ಪರಮೇಶ್ವರನ ಸ್ತೋತ್ರದಿಂದ ಯಾವ ಫಲವಾದೀತು? ನಮ್ಮ ಸ್ತೋತ್ರವು, ಗಗನಕ್ಕೆ ಮುಟ್ಟಲೆಂದು ಅರಚುವ ನರಿಯ ಕೂಗಾಗದೆಹೋದೀತೆ ?'- ಎಂದು ಯಾರೂ ನಿರಾಶರಾಗಬಾರದು, ಪರಮೇಶ್ವರನ ಪ್ರಸಾದವು ಭಕ್ತರಿಗೆ ಅವಶ್ಯವಾಗಿ ಆಗುತ್ತದೆ ಎಂಬುದನ್ನು ಇಲ್ಲಿ ದೃಷ್ಟಾಂತಪೂರ್ವಕವಾಗಿ ಪ್ರತಿಪಾದಿಸಿರುತ್ತದೆ.

ಒಂದಾನೊಂದು ಕಾಲದಲ್ಲಿ ಶಿವನು ಅರ್ಧರಾತ್ರಿಯ ವೇಳೆಯಲ್ಲಿ ಜ್ಯೋತಿರ್ಮಯನಾದ ಒಂದು ಲಿಂಗವಾಗಿ ಉದ್ಭವಿಸಿ ಭೂವ್ಯಾಕಾಶಗಳ

ನ್ನೆಲ್ಲ ವ್ಯಾಪಿಸಿಕೊಂಡು ದೇವತೆಗಳಿಗೆಲ್ಲ ಪ್ರಕಟವಾದನು. ಆಗ ಆ ಲಿಂಗದ ವ್ಯಾಪ್ತಿಯು ಎಲ್ಲಿಯವರೆಗೆ? ಅದರ ಸ್ವರೂಪವೇನು? ಅದು ಯಾವ ಮಹಾ ಮಹಿಮನ ಲಿಂಗವು?– ಎಂದು ಮುಂತಾಗಿ ವಿಚಾರಮಾಡಲು ಅಸಮರ್ಥ ರಾಗಿ ಎಲ್ಲರೂ ಬೆರಗಾಗಿ ನೋಡುತ್ತಿರುವಲ್ಲಿ ಬ್ರಹ್ಮನೂ ವಿಷ್ಣುವೂ ಅದನ್ನು ನಿಶ್ಚಯಿಸಬೇಕೆಂದು ಪ್ರಯತ್ನಿಸಿ ಬ್ರಹ್ಮನು ಮೇಲಕ್ಕೂ ವಿಷ್ಣುವು ಕೆಳಕ್ಕೂ ಹೋದರು. ಆದರೆ ಅವರು ಎಷ್ಟು ದೂರಕ್ಕೆ ಹೋದರೂ ಆ ಲಿಂಗವು ಇನ್ನೂ ಮುಂದುಮುಂದಕ್ಕೆ ಕಾಣಿಸುತ್ತಲೇಇದ್ದಿತು. ಆಗ ಅವರಿಬ್ಬರೂ ಮುಂದಕ್ಕೆ ಹೋಗಿಹೋಗಿ ಸಾಕಾಗಿ ಆ ಲಿಂಗದ ಆದ್ಯಂತಗಳನ್ನು ಅರಿಯಲಾರದೆ ಹಿಂತಿರುಗಿ ಬಂದು ಭಕ್ತಿಶ್ರದ್ಧೆಗಳಿಂದ "ಎಲೈ ದೇವದೇವನೆ, ನಾವು ನಿನ್ನ ನಿಜವನ್ನು ನಿಶ್ಚಯಿಸಲು ಅಸಮರ್ಥರು ; ನೀನೇ ಪರಮಾರ್ಥವನ್ನು ಅರುಹಿ ನಮ್ಮನ್ನು ಕಾಪಾಡಬೇಕು" ಎಂದು ಸ್ತೋತ್ರಮಾಡುವದಕ್ಕೆ ಉಪಕ್ರಮಿ ಸಿದರು. ಅವರು ಬಹುಕಾಲ ಹೀಗೆ ಸ್ತೋತ್ರಮಾಡಿದಬಳಿಕ ಪರಮೇಶ್ವರನು ಪ್ರಸನ್ನನಾಗಿ ತಾನೇ ಕನಿಕರದಿಂದ ತನ್ನ ಸರ್ವವ್ಯಾಪಕವಾದ ಐಶ್ವರ್ಯದ ಮಹಿಮೆಯನ್ನು ಅವರಿಗೆ ತಿಳಿಸಿಕೊಟ್ಟು ಅನುಗ್ರಹಿಸಿದನು– ಎಂದು ಪುರಾಣ ದಲ್ಲಿ ವರ್ಣಿತವಾಗಿರುತ್ತದೆ.

ಪರಮೇಶ್ವರನ ಅಪರಿಮಿತೈಶ್ವರ್ಯವನ್ನು ವರ್ಣಿಸುವ ಸಂದರ್ಭದಲ್ಲಿ ಅಥರ್ವವೇದದ ಹತ್ತನೆಯ ಕಾಂಡದಲ್ಲಿ ಸ್ಕಂಭವೆಂಬ ಹೆಸರಿನಿಂದ ಈತನನ್ನು ಕರೆದಿರುವದು ಕಂಡುಬರುತ್ತದೆ. ಸರ್ವವ್ಯಾಪಿಯಾದ ಸ್ಕಂಭನೆಂಬ ಪರ ಮಾತ್ಮನೇ ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡಿರುವ, ಜಗತ್ತೆಲ್ಲವನ್ನೂ ಪೋಷಿ ಸುವ, ಸರ್ವವೇದಾತ್ಮಕನಾದ ಸರ್ವಜ್ಞನೂ ಸರ್ವಶಕ್ತನೂ ಆಗಿರುತ್ತಾನೆ– ಎಂಬುದು ಸ್ಕಂಭಸೂಕ್ತದ ಸಾರವು. ಆ ಸೂಕ್ತದ ಆಧಾರದಮೇಲೆಯೇ ಈ ಪೌರಾಣಿಕಕಥೆಯು ಹುಟ್ಟಿರುವದೆಂಬುದನ್ನು 'ಅನಲಸ್ಕನ್ಧವಪುಷಃ' (ಬೆಂಕಿಯ ರಾಶಿಯ ಶರೀರವುಳ್ಳ) ಎಂಬ ವಿಶೇಷಣವು ಸೂಚಿಸುತ್ತದೆ. ಇದು 'ಅನಲಸ್ತಮ್ಭವಪುಷಃ' ಎಂಬ ಪಾಠಾಂತರರೂಪದಲ್ಲಿಯೇ ಮೊದಲು ಇದ್ದರೂ ಇದ್ದಿರಬಹುದು.

ಇದು ಹೇಗಾದರೂ ಇರಲಿ, ಈ ಕಥೆಯಿಂದ ತಿಳಿಯಬೇಕಾದದ್ದೇನೆಂದರೆ: ವಿಷ್ಣುವೂ ಬ್ರಹ್ಮನೂ ಅತ್ಯಂತಪ್ರಖ್ಯಾತಮಹಿಮರಾದರೂ ಶಿವತತ್ತ್ವವನ್ನು ಸ್ವಪ್ರಯತ್ನದಿಂದ ಅರಿತುಕೊಳ್ಳಲಾರದೆಹೋದರು ; ಆದರೆ ಅವರು ಅಹಂಭಾವವನ್ನು ಬಿಟ್ಟು ಆ ಪರಮೇಶ್ವರನನ್ನು ಭಕ್ತಿಶ್ರದ್ಧಾತಿಶಯದಿಂದ ಸ್ತುತಿಸಿದಾಗ ಆ ಪರಮೇಶ್ವರನು ತಾನೇ ಪ್ರಸನ್ನನಾಗಿ ಆ ತತ್ತ್ವವು ಅವರ ಮನಸ್ಸಿಗೆ ನಿಲುಕುವಂತೆ ಮಾಡಿದನು. ಆದ್ದರಿಂದ ನಾನು ಸಾಧನದಿಂದ ಪರಮೇಶ್ವರನನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವೆನೆಂಬ ಹೆಮ್ಮೆಯನ್ನು ಬಿಟ್ಟು ಶ್ರದ್ಧೆಯಿಂದಲೂ ಭಕ್ತಿಯಿಂದಲೂ ಕೂಡಿ ಆತನನ್ನೇ ಮರೆಹೊಗಬೇಕು, ಶ್ರದ್ಧೆಯೆಂದರೆ ಪರಮೇಶ್ವರನು ಪ್ರಸನ್ನನಾದರೆ ವಾಙ್ಮನಸ್ಸುಗಳಿಗೆ ಅಗೋಚರವಾಗಿರುವ ತತ್ತ್ವವನ್ನುಕೂಡ ದಯೆಯಿಂದ ಅವಶ್ಯವಾಗಿ ನಮ್ಮ ಅನುಭವಕ್ಕೆ ನಿಲುಕುವಂತೆ ಮಾಡುವನೆಂಬ ಆಸ್ತಿಕ್ಯಬುದ್ಧಿ. ಭಕ್ತಿ ಎಂದರೆ ಇತರ ವಿಷಯಗಳಲ್ಲಿರುವ ನೈಮಿತ್ತಿಕಪ್ರೇಮವನ್ನು ಬಿಟ್ಟು ಆ ಪರಮೇಶ್ವರನೇ ಎಲ್ಲಕ್ಕಿಂತಲೂ ಪ್ರಿಯತಮನೆಂದು ಭಾವಿಸುವದು. ಇವೆರಡೇ ಪರಮೇಶ್ವರನ ಅನುಗ್ರಹಕ್ಕೆ ಕಾರಣವು ಎಂಬುದು ಶ್ಲೋಕದ ಅಭಿಪ್ರಾಯವು.

**ಅಯತ್ನಾದಾಪಾದ್ಯ ತ್ರಿಭುವನಮವೈರವ್ಯತಿಕರಂ**
**ದಶಾಸ್ಯೋ ಯದ್ಬಾಹೂನಭೃತ ರಣಕಣ್ಡೂಪರವಶಾನ್ ।**
**ಶಿರಃ ಪದ್ಮಶ್ರೇಣೀರಚಿತಚರಣಾಮ್ಭೋರುಹಬಲೇಃ**
**ಸ್ಥಿರಾಯಾಸ್ತ್ವದ್ಭಕ್ತೇಸ್ತ್ರಿಪುರಹರ ವಿಸ್ಫೂರ್ಜಿತಮಿದಮ್ ॥ ೧೧ ॥**

[ ಪ್ರತಿಪದಾರ್ಥ : ತ್ರಿಪುರಹರ– ತ್ರಿಪುರಗಳನ್ನು ಸಂಹರಿಸಿದಾತನೆ, ದಶಾಸ್ಯಃ– ರಾವಣನು ಅಯತ್ನಾತ್– (ಯಾವ ಹೆಚ್ಚಿನ) ಪ್ರಯತ್ನವೂ ಇಲ್ಲದೆ ತ್ರಿಭುವನಮ್– ಮೂರು ಲೋಕವನ್ನೂ ಅವೈರವ್ಯತಿಕರಮ್– ಶತ್ರುತ್ವದ ಸಂಬಂಧವಿಲ್ಲದಂತೆ ಆಪಾದ್ಯ –ಮಾಡಿ ರಣಕಣ್ಡೂಪರವಶಾನ್- ಯುದ್ಧದ ತಿನಿಸಿಗೇ ಅಧೀನವಾಗಿದ್ದ ಬಾಹೂನ್- ಭುಜಗಳನ್ನು ಯತ್ ಅಭೃತ– ಧರಿಸಿದ್ದನೆಂಬುದಿದೆಯಲ್ಲ, ಇದಮ್– ಇದು ಶಿರಃಪದ್ಮಶ್ರೇಣೀರಚಿತಚರಣಾಂಭೋರುಹಬಲೇಃ– ಶಿರಸ್ಸುಗಳೆಂಬ ಕಮಲಗಳ ಪಙ್ಕ್ತಿಯಿಂದ ಮಾಡಲ್ಪಟ್ಟ ಪಾದಕಮಲಗಳ ಪೂಜೆಯುಳ್ಳ (ತನ್ನ ಶಿರಸ್ಸುಗಳಿಂದ ನಿನ್ನ ಪಾದಕಮಲಗಳಿಗೆ ಪೂಜೆಯನ್ನು ಮಾಡಿದ) ಸ್ಥಿರಾಯಾಃ– ನಿಶ್ಚಲವಾದ ತ್ವದ್ಭಕ್ತೇಃ– ನಿನ್ನಲ್ಲಿರುವ ಭಕ್ತಿಯ ವಿಸ್ಫೂರ್ಜಿತಮ್– ಪ್ರಭಾವವು.]

೧೧. ಎಲೈ ತ್ರಿಪುರಸಂಹಾರಕನೆ, ದಶಮುಖರಾವಣನು ಯಾವ ಆಯಾಸವೂ ಇಲ್ಲದೆಯೇ ತ್ರೈಲೋಕವನ್ನು ನಿರ್ವೈರವಾಗಿ ಮಾಡಿ, ಯುದ್ಧದ ತಿನಿಸಿಗೇ ವಶವಾಗಿದ್ದ ಭುಜಗಳನ್ನು ಧರಿಸಿದ್ದನಲ್ಲ, ಇದು ತನ್ನ ತಲೆಗಳೆಂಬ ಕಮಲಗಳಿಂದ ನಿನ್ನ ಚರಣಕಮಲಗಳನ್ನು ಪೂಜೆಮಾಡಿದ ಅಚಂಚಲಭಕ್ತಿಯ ಫಲವು.

## ವಿವರಣೆ

ರಾವಣನು ಶಿವನನ್ನು ಕುರಿತು ತಪಸ್ಸುಮಾಡಿ ತನ್ನ ಒಂಬತ್ತು ತಲೆಗಳನ್ನೂ ಒಂದೊಂದಾಗಿ ತಾನೇ ಕಡಿದು ಆ ಮಹಾದೇವನಿಗೆ ಬಲಿಯಾಗಿ ಅರ್ಪಿಸಿದನೆಂದು ಪುರಾಣಪ್ರಸಿದ್ಧಿ. ಈಶ್ವರನಿಗೆ ಶಿರಸ್ಸನ್ನಾದರೂ ಅರ್ಪಿಸುವೆನು ಎಂಬ ಅವನ ನಿಶ್ಚಲಭಕ್ತಿಗೆ ಮೆಚ್ಚಿದ ಆ ಶಂಭುವಿನ ಅನುಗ್ರಹದಿಂದಲೇ ನಿರುಪಮಾನವಾದ ಭುಜಬಲವು ದೊರೆಯಿತು. ಆ ಭುಜಬಲದಿಂದ ಅವನು ಮೂರು ಲೋಕಗಳನ್ನೂ ಗೆದ್ದು ಎಲ್ಲಿಯೂ ತನಗೆ ಶತ್ರುಗಳಿಲ್ಲದಂತೆಯೇ ಮಾಡಿದನು. ಇಂದ್ರಾದಿಗಳೂ ಅವನಿಗೆ ದಾಸರಾದರು. ಅವನು ಎಲ್ಲರನ್ನೂ ಯುದ್ಧದಲ್ಲಿ ಸೋಲಿಸಿಯೇ ಹೀಗೆ ವಶಪಡಿಸಿಕೊಳ್ಳಲಿಲ್ಲ. ಅನೇಕರು ಅವನ ಪರಾಕ್ರಮವನ್ನು ಕೇಳಿದಮಾತ್ರದಿಂದ ಶಾಂತದರ್ಪರಾಗಿ ಅವನಿಗೆ ಶರಣಾಗತರಾದರು. ಹೀಗೆ ಅನಾಯಾಸವಾಗಿ ಎಲ್ಲರೂ ಅಡಿಯಾಳುಗಳಾದ್ದರಿಂದ ಅವನಿಗೆ ಯುದ್ಧದಲ್ಲಿ ಎದುರಾಳಿಗಳಾಗುವ ವೀರರೇ ಇಲ್ಲವಾಯಿತು. ಇದರಿಂದ ಯುದ್ಧಮಾಡಬೇಕೆಂಬ ಕುತೂಹಲದಿಂದಿದ್ದ ಅವನ ತೋಳ ತೀಟೆಯು ಶತ್ರುಗಳೇ ಇಲ್ಲದ್ದರಿಂದ ಹಾಗೆಯೇ ಉಳಿದುಕೊಂಡಿತ್ತು. ಈ ಯುದ್ಧದ ತೀಟೆಯಿಂದ ಇಪ್ಪತ್ತು ತೋಳುಗಳೂ ನಮಗೆ ಯಾರೂ ಎದುರಾಗಿಲ್ಲವಲ್ಲ! –ಎನ್ನುತ್ತಾ ರಾವಣನನ್ನು ಯತ್ನವಿಲ್ಲದೆ ಸುಮ್ಮನಿರುವಂತೆ ಮಾಡಿದ್ದವು! ಇಷ್ಟೆಲ್ಲ ಏತರಿಂದ? ಆ ಶಿವನಲ್ಲಿ ರಾವಣನು ತೋರಿಸಿದ ದೃಢಭಕ್ತಿಯಿಂದಲ್ಲವೆ?

ಹೀಗಿರುವದರಿಂದ ಅಸುರರಿಗೂ ಒಲಿದ ಆ ಶಿವನು ಭಕ್ತರಿಗೆ ಒಲಿದಾನೊ ಇಲ್ಲವೊ -ಎಂಬ ಸಂಶಯವು ಒಂದಿಷ್ಟೂ ಉಳಿಯುವಂತಿಲ್ಲ— ಎಂದು ಭಾವ.

**ಅಮುಷ್ಯ ತ್ವತ್ಸೇವಾಸಮಧಿಗತಸಾರಂ ಭುಜವನಂ**
**ಬಲಾತ್ ಕೈಲಾಸೇಽಪಿ ತ್ವದಧಿವಸತೌ ವಿಕ್ರಮಯತಃ ।**
**ಅಲಭ್ಯಾ ಪಾತಾಲೇಽಪ್ಯಲಸಚಲಿತಾಙ್ಗುಷ್ಠಶಿರಸಿ**
**ಪ್ರತಿಷ್ಠಾ ತ್ವಯ್ಯಾಸೀದ್ಧ್ರುವಮುಪಚಿತೋ ಮುಹ್ಯತಿ ಖಲಃ ॥ ೧೨ ॥**

[ಪ್ರತಿಪದಾರ್ಥ :— ತ್ವತ್ಸೇವಾಸಮಧಿಗತಸಾರಮ್— ನಿನ್ನ ಸೇವೆಯಿಂದ ಪ್ರಾಪ್ತವಾದ ಬಲವುಳ್ಳ ಭುಜವನಮ್– ಭುಜಗಳ ವನವನ್ನು ಬಲಾತ್– ಬಲಾತ್ಕಾರದಿಂದ ತ್ವದಧಿವಸತೌ– ನಿನಗೆ ವಾಸಸ್ಥಾನವಾದ ಕೈಲಾಸೇಽಪಿ– ಕೈಲಾಸ (ಪರ್ವತ) ದಲ್ಲಿಯೂ ವಿಕ್ರಮಯತಃ- ವ್ಯಾಪಾರಗೊಳಿಸಿದ ಅಮುಷ್ಯ- ಇವನಿಗೆ ತ್ವಯಿ- ನೀನು ಅಲಸಚಲಿತಾಙ್ಗುಷ್ಠಶಿರಸಿ (ಸತಿ)— ಮೆಲ್ಲಗೆ ಅಲುಗಾಡಿಸಲ್ಪಟ್ಟ ಹೆಬ್ಬೆಟ್ಟಿನ ತುದಿಯುಳ್ಳವನಾಗಲು ಪಾತಾಲೇಽಪಿ— ಪಾತಾಲದಲ್ಲಿಯೂ ಪ್ರತಿಷ್ಠಾ– ನಿಲುಗಡೆಯು ಅಲಭ್ಯಾ ಆಸೀತ್– ದುರ್ಲಭವಾಯಿತು. ಉಪಚಿತಃ– ಸಮೃದ್ಧನಾದ ಖಲಃ– ದುರ್ಜನನು ಧ್ರುವಮ್- ನಿಶ್ಚಯವಾಗಿ ಮುಹ್ಯತಿ- ಮೋಹಗೊಳ್ಳುವನು.]

೧೨. ನಿನ್ನ ಸೇವೆಯಿಂದ ಬಲವನ್ನು ಹೊಂದಿದ ಭುಜಗಳ ಗುಂಪನ್ನು ಬಲಾತ್ಕಾರದಿಂದ ನಿನ್ನ ವಾಸಸ್ಥಾನವಾದ ಕೈಲಾಸದ ಮೇಲೆಯೂ ಮುನ್ನುಗ್ಗಿಸಿದ ಆ (ರಾವಣ)ನಿಗೆ, ನೀನು ಮೆಲ್ಲಗೆ ಕಾಲಿನ ಹೆಬ್ಬೆರಳನ್ನು ಒತ್ತಲಾಗಿ ಪಾತಾಲದಲ್ಲಿಯೂ ನಿಲುಗಡೆಯು ಸಿಕ್ಕದಂತೆ ಆಯಿತು. ದುರ್ಜನನು ಹೆಚ್ಚಿಕೊಂಡಾಗ ನಿಜವಾಗಿಯೂ ಮೋಹಗೊಳ್ಳುತ್ತಾನೆ.

## ವಿವರಣೆ

ಭಕ್ತಿಯಿಂದ ಪರಮೇಶ್ವರನು ಮೆಚ್ಚಿ ಕೊಟ್ಟ ವರವು ನಮಗೆ ಅಮಿತವಾದ ಬಲವನ್ನು ಕೊಡುತ್ತದೆ ಎಂದು ಹೇಳಿದ್ದಾಯಿತು. ಆದರೆ ಈ ಬಲವನ್ನು ಈಶ್ವರನ ತಿರಸ್ಕಾರಕ್ಕೂ ಉಪಯೋಗಿಸುವ ಕೃತಘ್ನತೆಯನ್ನು

ತೋರುವದಕ್ಕೆ ಹೊರಡುವದು ನಮ್ಮ ಹಾನಿಗೇ ಕಾರಣವಾಗುತ್ತದೆ– ಎಂಬುದು ಈ ಶ್ಲೋಕದಲ್ಲಿ ಉಪದಿಷ್ಟವಾಗಿರುತ್ತದೆ.

ರಾವಣನು ಶಿವನ ಅನುಗ್ರಹದಿಂದ ಪಡೆದುಕೊಂಡ ತೋಳಬಲವು ಅವನಿಗೆ ತ್ರೈಲೋಕ್ಯದಲ್ಲಿ ಯಾರೊಬ್ಬರೂ ಎದುರಿಲ್ಲವೆನ್ನುವಷ್ಟು ಬಲವನ್ನು ಕೊಟ್ಟಿತು. ಎಲ್ಲರೂ ಅವನಿಗೆ ದಾಸರಾದರು, ಅವನ ಸಂಪತ್ತು ದಿನದಿನಕ್ಕೂ ಹೆಚ್ಚುತ್ತಾಬಂತು. ಅವನ ಪರಾಕ್ರಮದ ಯಶಸ್ಸು ಎಲ್ಲೆಲ್ಲಿಯೂ ಹಬ್ಬಿಕೊಂಡಿತು.

ಆದರೆ ಅದೇ ರಾವಣನನ್ನು ಸಂಪತ್ತಿನ ಸಮೃದ್ಧಿಯ ಮೋಹವು ಕವಿದುಕೊಂಡಿತು. ಅವನು ತನಗೆ ಅನುಪಮವಾದ ಬಲವನ್ನು ಅನುಗ್ರಹಿಸಿದ ಪರಮೇಶ್ವರನ ನಿವಾಸಸ್ಥಾನವಾದ ಕೈಲಾಸದ ಮೇಲೆಯೇ ತನ್ನ ತೋಳುಗಳ ಪರಾಕ್ರಮಶಕ್ತಿಯನ್ನು ತೋರ್ಪಡಿಸುವದಕ್ಕೆ ಯತ್ನಿಸಿದನು. ಒಮ್ಮೆ ಅವನು ಕೈಲಾಸಪರ್ವತವನ್ನು ಕಿತ್ತು ತನ್ನ ರಾಜಧಾನಿಯಾದ ಲಂಕೆಗೆ ಒಯ್ಯಬೇಕೆಂದು ಹವಣಿಸಿದನು. ಹೀಗೆ ತನ್ನ ಭುಜಬಲವನ್ನು ಪರೀಕ್ಷಿಸುವದಕ್ಕೆಂದು ಅವನು ಕೀಳುವದಕ್ಕೆ ಹೊರಟ ಕೈಲಾಸವು ಅಲುಗಾಡುವದಕ್ಕೆ ಮೊದಲಾಯಿತು. ಪಾರ್ವತೀದೇವಿಯು ಅಂಜಿಕೆಯಿಂದ ಶಿವನನ್ನು ತಬ್ಬಿಕೊಳ್ಳುವದಕ್ಕೆ ಬಂದಳು. ಆಗ ಆ ಪರಮೇಶ್ವರನು ಮುಗುಳುನಗೆಯಿಂದ ತನ್ನ ಕಾಲಿನ ಹೆಬ್ಬೆರಳಿನ ತುದಿಯಿಂದ ಕೈಲಾಸವನ್ನು ಒಂದಿಷ್ಟು ಒತ್ತಿದನು. ಅಷ್ಟುಮಾತ್ರದಿಂದಲೇ ರಾವಣನು ತನ್ನ ಬಲವನ್ನೆಲ್ಲ ಕಳೆದುಕೊಂಡು ಪಾತಾಳಕ್ಕೆ ಹೋದರೂ ಅಲ್ಲಿಯೂ ಅವನಿಗೆ ನಿಲುಗಡೆಯಿಲ್ಲದೆ ವ್ಯಥೆಪಡುವದಕ್ಕೆ ಮೊದಲುಮಾಡಿದನು! ಆಗ ಕರುಣಾಳುವಾದ ಮಹೇಶ್ವರನು ಅವನನ್ನು ಮೇಲಕ್ಕೆತ್ತಿ ಸಂತೈಸಿ ಊರಿಗೆ ಕಳುಹಿಸಿದನು –ಎಂದು ಪುರಾಣದ ಕಥೆ.

ನಮಗೆ ಪರಮೇಶ್ವರನ ಅನುಗ್ರಹದಿಂದ ಎಷ್ಟೇ ಹೆಚ್ಚುಗಾರಿಕೆಯು ಬಂದರೂ ಅದನ್ನು ಈಶ್ವರನಿಯಮಕ್ಕೆ ವಿರುದ್ಧವಾಗಿ ಉಪಯೋಗಿಸುವ ಶಕ್ತಿಯು ಮಾತ್ರ ಎಂದಿಗೂ ಇರುವದಿಲ್ಲ. ಹೆಮ್ಮೆಯಿಂದ ಮೈಮರೆತು ಒಂದುವೇಳೆ ನಾವು ಈಶ್ವರನಿಗೆ ಪ್ರತಿಕೂಲವಾಗಿ ನಡೆಯುವದಕ್ಕೆ ಹೋದರೆ

ಅಧೋಗತಿಯು ನಿಶ್ಚಿತವಾಗಿ ಆಗುತ್ತದೆ. ಆದ್ದರಿಂದ ನಮಗೆ ಸಿಕ್ಕುವ ಸೌಕರ್ಯಗಳೆಲ್ಲ ಆ ಪರಮೇಶ್ವರನ ಪ್ರಸಾದವೇ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟಿರಬೇಕು.

**ಯದೃದ್ಧಿಂ ಸುತ್ರಾಮ್ಣೋ ವರದ ಪರಮೋಚ್ಚೈರಪಿ ಸತೀ-**
**ಮಧಶ್ಚಕ್ರೇ ಬಾಣಃ ಪರಿಜನವಿಧೇಯತ್ರಿಭುವನಃ ।**
**ನ ತಚ್ಚಿತ್ರಂ ತಸ್ಮಿನ್ ವರಿವಸಿತರಿ ತ್ವಚ್ಚರಣಯೋ-**
**ರ್ನ ಕಸ್ಯಾ ಉನ್ನತ್ಯೈ ಭವತಿ ಶಿರಸಸ್ತ್ವಯ್ಯವನತಿಃ ॥ ೧೩ ॥**

[ ಪ್ರತಿಪದಾರ್ಥ:- ವರದ- ಇಷ್ಟಾರ್ಥಪ್ರದನೆ, ಬಾಣಃ- ಬಾಣಾಸುರನು ಪರಿಜನವಿಧೇಯತ್ರಿಭುವನಃ- ದಾಸನಂತೆ ವಿಧೇಯವಾದ ತ್ರೈಲೋಕ್ಯವುಳ್ಳವನಾಗಿ ಪರಮೋಚ್ಚೈಃ- ಅತ್ಯಂತ ಉನ್ನತವಾಗಿ ಸತೀಮಪಿ- ಇರುವದಾದರೂ ಸುತ್ರಾಮ್ಣಃ- ಇಂದ್ರನ ಋದ್ಧಿಮ್- ಏಳಿಗೆಯನ್ನು ಯತ್ ಅಧಶ್ಚಕ್ರೇ- ಕೀಳುಮಾಡಿದನಲ್ಲ, ತತ್- ಅದು ತ್ವಚ್ಚರಣಯೋಃ- ನಿನ್ನ ಪಾದಗಳಲ್ಲಿ ವರಿವಸಿತರಿ- ಸೇವಕನಾದ ತಸ್ಮಿನ್- ಅವನಲ್ಲಿ ನ ಚಿತ್ರಮ್- ಆಶ್ಚರ್ಯಕರವಲ್ಲ. ತ್ವಯಿ- ನಿನ್ನ (ವಿಷಯ)ದಲ್ಲಿ ಶಿರಸಃ- ತಲೆಯ ಅವನತಿಃ- ಬಾಗಿಸುವಿಕೆಯು ಕಸ್ಯೈ ಉನ್ನತ್ಯೈ- ಯಾವ ಮೇಲ್ಮೆಗೆತಾನೆ ನ ಭವತಿ- ಆಗುವದಿಲ್ಲ? ]

೧೩. ಎಲೈ ಇಷ್ಟಾರ್ಥದಾಯಕನೆ, ಬಾಣಾಸುರನು ಮೂರು ಲೋಕವನ್ನೂ ತನ್ನ ದಾಸ್ಯಕ್ಕೆ ಇಟ್ಟುಕೊಂಡು ಇಂದ್ರನ ಅತ್ಯಂತೋನ್ನತವಾದ ಸಂಪತ್ಸಮೃದ್ಧಿಯನ್ನು ಕೀಳೆನಿಸಿದನಲ್ಲ, ಅದೇನೂ ನಿನ್ನ ಚರಣಸೇವಕನಾದ ಅವನಲ್ಲಿ ಆಶ್ಚರ್ಯಕರವೆನಿಸಲಾರದು; ನಿನ್ನಲ್ಲಿ ತಲೆಬಾಗಿಸಿದ್ದರಿಂದ ಯಾವ ಉನ್ನತಿಯು ತಾನೆ ಲಭಿಸದೆ ಇದ್ದೀತು?

## ವಿವರಣೆ

ಪರಮೇಶ್ವರನ ಅನುಗ್ರಹವು ಮಹಾಫಲಪ್ರದವೆಂದು ತಿಳಿಸುವದರ ಮೂಲಕವಾಗಿ ಇಲ್ಲಿ ಗಂಧರ್ವರಾಜನು ಪರಮೇಶ್ವರನ ಅಚಿಂತ್ಯಮಹಿಮೆಯನ್ನು ಕೊಂಡಾಡಿರುತ್ತಾನೆ.

ಬಾಣಾಸುರನೆಂಬವನು ಈಶ್ವರನನ್ನು ತಪಸ್ಸಿನಿಂದ ಒಲಿಸಿಕೊಂಡದ್ದರ ಫಲವಾಗಿ ಸ್ವರ್ಗಮರ್ತ್ಯಪಾತಾಲಗಳೆಂಬ ಮೂರು ಲೋಕಗಳನ್ನೂ ಗೆದ್ದು ಎಲ್ಲರನ್ನೂ ತನ್ನ ಪರಿಜನರನ್ನಾಗಿ ಮಾಡಿಕೊಂಡನು. ದೇವೇಂದ್ರನು ಭೋಗದಲ್ಲಿ ಎಲ್ಲರಿಗೂ ಮೇಲು ಎಂಬ ಪ್ರಸಿದ್ಧಿಯನ್ನು ತಪ್ಪಿಸಿ ಅವನ ಪದವಿಯನ್ನು ತನ್ನ ಸ್ಥಿತಿಗಿಂತ ಕೀಳು ಎನಿಸಿದನು. ಪರಮೇಶ್ವರನ ಚರಣದಲ್ಲಿ ತಲೆಯನ್ನು ಬಾಗಿಸಿದವನಿಗೆ ಸರ್ವೋನ್ನತಿಯು ಬರುವದೆಂಬ- ಅವನತಿಯಿಂದಲೂ ಉನ್ನತಿಯುಂಟಾಗುವದೆಂಬ- ಅದ್ಭುತವನ್ನು ಲೋಕಕ್ಕೆಲ್ಲ ತೋರಿಸಿಕೊಟ್ಟನು. ಈಶ್ವರನ ಅನುಗ್ರಹದಿಂದ ಉನ್ನತಪದವಿಯುವರನ್ನೂ ಕೆಳಕ್ಕಿಳಿಸಬಹುದೆಂಬುದನ್ನೂ ತೋರಿಸಿಕೊಟ್ಟನು. ರಾವಣನು ಈಶ್ವರನ ತಿರಸ್ಕಾರದಿಂದ ಮೇಲಿನಿಂದ ಕೆಳಕ್ಕೆ ಬಿದ್ದದ್ದು, ಬಾಣನು ಈಶ್ವರ ಸೇವೆಯಿಂದ ಕೆಳಗಿನಿಂದ ಮೇಲಕ್ಕೇರಿದ್ದು- ಇದೆಲ್ಲವೂ ಈಶ್ವರನ ಅಚಿಂತ್ಯಾದ್ಭುತಮಹಿಮೆಯ ಪ್ರದರ್ಶಕವೇ ಎಂದು ಅಭಿಪ್ರಾಯ.

**ಅಕಾಣ್ಡಬ್ರಹ್ಮಾಣ್ಡಕ್ಷಯಚಕಿತದೇವಾಸುರಕೃಪಾ-**
**ವಿಧೇಯಸ್ಯಾಸೀದ್ ಯಸ್ತ್ರಿಣಯನ ವಿಷಂ ಸಂಹೃತವತಃ ।**
**ಸ ಕಲ್ಮಾಷಃ ಕಣ್ಠೇ ತವ ನ ಕುರುತೇ ನ ಶ್ರಿಯಮಹೋ**
**ವಿಕಾರೋಽಪಿ ಶ್ಲಾಘ್ಯೋ ಭುವನಭಯಭಙ್ಗವ್ಯಸನಿನಃ ॥೧೪॥**

[ಪ್ರತಿಪದಾರ್ಥ :- ತ್ರಿಣಯನ- ಮುಕ್ಕಣ್ಣನೆ, ಅಕಾಣ್ಡಬ್ರಹ್ಮಾಣ್ಡಕ್ಷಯಚಕಿತದೇವಾಸುರಕೃಪಾವಿಧೇಯಸ್ಯ— ಅಕಾಲದಲ್ಲಿ (ಆಗಬಹುದಾದ) ಬ್ರಹ್ಮಾಂಡದ ಕ್ಷಯದಿಂದ ಭೀತರಾದ ದೇವಾಸುರರ ಮೇಲಿನ ಕೃಪೆಗೆ ಪರವಶನಾದ ವಿಷಮ್— ವಿಷವನ್ನು ಸಂಹೃತವತಃ- ಸಂಹರಿಸಿದ ಯಃ- ಯಾವ ಕಲ್ಮಾಷಃ- ಕಲಂಕವು ಆಸೀತ್- ಉಂಟಾಯಿತೋ ಸಃ- ಅದು ತವ- ನಿನ್ನ ಕಂಠೇ- ಕಂಠದಲ್ಲಿ ಶ್ರಿಯಮ್- ಶೋಭೆಯನ್ನು ನ ನ ಕುರುತೇ- ಮಾಡುವದಿಲ್ಲವೆಂಬುದೇ ಇಲ್ಲ. ಅಹೋ- ಆಶ್ಚರ್ಯವು, ಭುವನಭಯಭಙ್ಗವ್ಯಸನಿನಃ- ಲೋಕಗಳ ಅಂಜಿಕೆಯನ್ನು ನಾಶಗೊಳಿಸುವದರಲ್ಲಿಯೇ ಆಸಕ್ತಿಯುಳ್ಳವನಿಗೆ ವಿಕಾರೋಽಪಿ- ವಿಕಾರವು ಕೂಡ ಶ್ಲಾಘ್ಯಃ- ಹೊಗಳತಕ್ಕದ್ದಾಗಿರುವದು.]

೧೪. ಎಲೈ ತ್ರಿಲೋಚನನೆ, ಅಕಾಲದಲ್ಲಿ ಬ್ರಹ್ಮಾಂಡವೇ ನಾಶವಾಗುವದೆಂದು ಬೆದರಿದ್ದ ದೇವಾಸುರರಲ್ಲಿ ದಯಾಪರವಶ

ನಾಗಿ ವಿಷವನ್ನು ನುಂಗಿದ ನಿನ್ನ ಕುತ್ತಿಗೆಯಲ್ಲಿ ಆದ ಆ ಕಲಂಕವು ಕಂಠಶೋಭೆಯನ್ನುಂಟುಮಾಡುತ್ತಿದೆಯಲ್ಲ ! ಆಹಾ ! (ಏನು ಹೇಳುವದು !) ಲೋಕದ ಜನರ ಭಯವನ್ನು ಕಳೆಯುವದೇ ಹವ್ಯಾಸವಾಗಿರುವವನಿಗೆ (ಆಗುವ ಶರೀರ) ವಿಕಾರವೂ ಶ್ಲಾಘ್ಯವೇ ಆಗಿರುತ್ತ ದೆ.

## ವಿವರಣೆ

ಪೂರ್ವದಲ್ಲಿ ಮಹಾವಿಷ್ಣುವಿನ ಅಪ್ಪಣೆಯಂತೆ ದೇವಾಸುರರು ಒಂದು ಗೂಡಿ ಅಮೃತದ ಉತ್ಪತ್ತಿಗೋಸ್ಕರವಾಗಿ ಕ್ಷೀರಸಮುದ್ರವನ್ನು ಕಡೆಯಲಾಗಿ ಕೆಲಕೆಲವು ಉತ್ತಮವಾದ ದಿವ್ಯಪದಾರ್ಥಗಳು ಮೊದಲು ಉತ್ಪನ್ನವಾದವು. ಅವುಗಳನ್ನು ದೇವತೆಗಳು ಒಬ್ಬೊಬ್ಬರು ಒಂದೊಂದನ್ನು ಸ್ವೀಕರಿಸಿದರು. ಆದರೆ ಇಷ್ಟರಲ್ಲಿ ಕಾಲಕೂಟವೆಂಬ ಒಂದು ಘೋರವಾದ ವಿಷವು ಸಮುದ್ರದ ಮೇಲುಗಡೆಯಲ್ಲಿ ಕಾಣಿಸಿಕೊಂಡದ್ದರಿಂದ ಉಂಟಾದ ಉಬ್ಬಸದಿಂದ ದೇವಾ ಸುರರೆಲ್ಲರೂ ತಡೆಯಲಾರದ ವ್ಯಥೆಯಿಂದ ಸಂಕಟಪಡುತ್ತಾ ಇದೇನೋ ಅಕಾಲದಲ್ಲಿ ಮಹಾಪ್ರಲಯವುಂಟಾಗುವಹಾಗಿದೆ ಎಂದು ಅತ್ಯಂತಭೀತರಾಗಿ ನೋಡುತ್ತಿದ್ದರು. ಆಗ ಬ್ರಹ್ಮಾದಿಗಳಿಂದ ಪ್ರಾರ್ಥಿತನಾದ ಮಹಾದೇವನು ಇವರನ್ನೆಲ್ಲ ಹೇಗಾದರೂ ಬದುಕಿಸಬೇಕೆಂದು ಕೃಪಾಪೂರ್ಣನಾಗಿ ಆ ವಿಷವನ್ನು ನುಂಗಿಬಿಟ್ಟನು. ಆ ಹಾಲಾಹಲವಿಷವು ಶಿವನ ಕಂಠದವರೆಗೂ ಹೋಗಿ ಅಲ್ಲಿಯೇ ನಿಂತುಬಿಟ್ಟಿತು. ಶುದ್ಧಸ್ಫಟಿಕದಂತೆ ಸ್ವಚ್ಛವಾಗಿದ್ದ ಆತನ ಶರೀರಕ್ಕೆ ಆ ವಿಷದ ಲಾಂಛನವೂ ಒಂದು ಭೂಷಣವಾಗಿ ಪರಿಣಮಿ ಸಿತು. ಅಂದಿನಿಂದ ಈಶ್ವರನಿಗೆ ವಿಷಕಂಠನೆಂದೂ ಶ್ರೀಕಂಠನೆಂದೂ ಅನ್ವರ್ಥವಾದ ನಾಮಗಳು ಬಂದವು. ಲೋಕೋಪಕಾರದಲ್ಲಿಯೇ ನಿರತ ನಾದವನಿಗೆ ಜನರ ಭಯವನ್ನು ನಿವಾರಣೆಮಾಡುವದರಿಂದ ಶರೀರದಲ್ಲಿ ಯಾವದಾದರೊಂದು ವಿಕಾರವಾದರೂ ಅದನ್ನು ಎಲ್ಲರೂ ಕೊಂಡಾಡುವ ರೆಂಬುದಕ್ಕೆ ಅದೊಂದು ಉತ್ತಮನಿದರ್ಶನವಾಯಿತು.-ಎಂದು ಪುರಾಣದ ಕಥೆ.

ಭಕ್ತರಿಗೆ ಅಭಯವನ್ನುಂಟುಮಾಡುವದಕ್ಕೆ ಪರಮೇಶ್ವರನು ಹೇಗೆ ಯಾವಾಗಲೂ ಕುತೂಹಲಿಯಾಗಿರುವನೆಂಬುದನ್ನು ಇಲ್ಲಿ ಕವಿ ತಿಳಿಸಿರುತ್ತಾನೆ :

**ಅಸಿದ್ಧಾರ್ಥಾ ನೈವ ಕ್ವಚಿದಪಿ ಸದೇವಾಸುರನರೇ**
**ನಿವರ್ತನ್ತೇ ನಿತ್ಯಂ ಜಗತಿ ಜಯಿನೋ ಯಸ್ಯ ವಿಶಿಖಾಃ ।**
**ಸ ಪಶ್ಯನ್ನೀಶ ತ್ವಾಮಿತರಸುರಸಾಧಾರಣಮಭೂತ್**
**ಸ್ಮರಃ ಸ್ಮರ್ತವ್ಯಾತ್ಮಾ ನ ಹಿ ವಶಿಷು ಪಥ್ಯಃ ಪರಿಭವಃ ।೧೫॥**

[ಪ್ರತಿಪದಾರ್ಥ:- ಈಶ- (ಎಲ್ಲವನ್ನೂ) ಆಳುವಾತನೆ ಜಯಿನಃ- ಜಯಶೀಲನಾದ ಯಸ್ಯ- ಯಾವನ ವಿಶಿಖಾಃ- ಬಾಣಗಳು ಸದೇವಾಸುರನರೇ- ದೇವತೆಗಳು, ಅಸುರರು, ಮನುಷ್ಯರು ಇವರಿಂದೊಡಗೂಡಿದ ಜಗತಿ- ಜಗತ್ತಿನಲ್ಲಿ ನಿತ್ಯಮ್- ಯಾವಾಗಲೂ ಕ್ವಚಿದಪಿ- ಎಲ್ಲಿಯೂ ಅಸಿದ್ಧಾರ್ಥಾಃ- ಕೃತಾರ್ಥವಾಗದೆ ನೈವ ನಿವರ್ತನ್ತೇ- ಹಿಂತಿರುಗುವದೇ ಇಲ್ಲವೋ, ಸ ಸ್ಮರಃ- ಆ ಮನ್ಮಥನು ತ್ವಾಮ್– ನಿನ್ನನ್ನು ಇತರಸುರಸಾಧಾರಣಮ್– ಉಳಿದ ದೇವತೆಗಳಿಗೆ ಸಮನನ್ನಾಗಿ ಪಶ್ಯನ್- ಕಾಣುವವನಾಗಿ ಸ್ಮರ್ತವ್ಯಾತ್ಮಾ- ಸ್ಮರಣೆ ಮಾಡತಕ್ಕ ಶರೀರವುಳ್ಳವನಾಗಿ ಅಭೂತ್– ಆದನು. ವಶಿಷು– ಜಿತೇಂದ್ರಿಯರ (ವಿಷಯ)ದಲ್ಲಿ ಪರಿಭವಃ- ತಿರಸ್ಕಾರವು ಪಥ್ಯಃ– ಹಿತವಾದದ್ದು ನ ಹಿ– (ಆಗುವ)ದಿಲ್ಲವಷ್ಟೆ ?]

೧೫. ಎಲೈ ಸರ್ವೇಶನೆ, ಜಯಶೀಲನಾದ ಮನ್ಮಥನ ಬಾಣಗಳು ದೇವಾಸುರನರಾದಿಸಹಿತವಾಗಿರುವ ಈ ಜಗತ್ತಿನಲ್ಲಿ ಯಾರೊಬ್ಬರ ವಿಷಯದಲ್ಲಿಯೂ ಅಕೃತಾರ್ಥವಾಗಿ ಹಿಂತಿರುಗುವದಿಲ್ಲ(ವೆಂಬುದು ಪ್ರಸಿದ್ಧವು). ಆದರೆ ಅದೇ ಮನ್ಮಥನು ನಿನ್ನನ್ನು ಮಿಕ್ಕ ದೇವತೆಗಳಿಗೆ ಸಮಾನನೆಂದು ತಿಳಿದಮಾತ್ರದಿಂದ ಅನಂಗನಾದನು. ಜಿತೇಂದ್ರಿಯರಾದವರನ್ನು ತಿರಸ್ಕರಿಸಿದ್ದು ಎಂದಿಗೂ ಹಿತಕರವಾಗಲಾರದು.

## ವಿವರಣೆ

ಪರಮೇಶ್ವರನು ಎಲ್ಲವನ್ನೂ ಆಳುವವನಾದ್ದರಿಂದ ಅವನು ಕಾಮಕ್ಕೆ ಎಂದಿಗೂ ಪರವಶನಾಗುವಂತಿಲ್ಲ. ಅವನ ಇಂದ್ರಿಯಗಳು ಎಂದೆಂದಿಗೂ ಅವನ ವಶವಲ್ಲಿಯೇ ಇರುತ್ತವೆ– ಎಂಬುದನ್ನು ಈ ಶ್ಲೋಕದಲ್ಲಿ ತಿಳಿಸಿದೆ.

ಮನ್ಮಥನ ಬಾಣದ ಹೊಡೆತಕ್ಕೆ ಸಿಕ್ಕಿಬಿದ್ದು ಕಾಮಪರವಶರಾಗದೆ ಇರುವವರು ದೇವತೆಗಳೊಳಗಾಗಲಿ ಅಸುರರೊಳಗಾಗಲಿ ಮನುಷ್ಯರೊಳಗಾಗಲಿ ಯಾವನೊಬ್ಬನೂ ಇಲ್ಲ. ಮನ್ಮಥನು ಪಂಚಬಾಣನೆಂದು ಪ್ರಸಿದ್ಧನಾಗಿರುತ್ತಾನೆ. ಅವನ ಬಾಣಗಳು ಯಾರ ಮೇಲೆ ಬಿದ್ದರೂ ತಮ್ಮ ವ್ಯಾಪಾರವನ್ನು ಮಾಡಲಾಗಲಿಲ್ಲವೆಂದು ಕೈಸಾರಿ ಹಿಂತಿರುಗಿದ್ದೇ ಇಲ್ಲ.

ಆದ್ದರಿಂದ ಅವನಿಗೆ ಒಮ್ಮೆ ತನ್ನನ್ನು ಸೋಲಿಸುವ ಎದುರಾಳಿಯು ಯಾವನೂ ಇಲ್ಲವೆಂಬ ಹೆಮ್ಮೆ ಬಂದಿತು. ಈಶ್ವರನು ಆಗ ಹಿಮವತ್ಪರ್ವತದ ಮೇಲೆ ತಪಸ್ಸುಮಾಡುತ್ತಾ ಕುಳಿತಿದ್ದನು. ಅವನು ಪಾರ್ವತಿಯನ್ನು ಮದುವೆಯಾದರೆ ತಾರಕಾಸುರನನ್ನು ಸಂಹಾರಮಾಡುವ ಪುತ್ರನು ಅವರಿಗೆ ಹುಟ್ಟುವನೆಂಬ ಆಶೆಯಿಂದ ದೇವತೆಗಳು ಮನ್ಮಥನನ್ನು ಆ ಈಶ್ವರನ ಮೇಲೂ ಬಾಣಪ್ರಯೋಗವನ್ನು ಮಾಡುವಂತೆ ಕೇಳಿಕೊಂಡರು. ಶಿವನೂ ಮಿಕ್ಕ ದೇವತೆಗಳಂತೆ ತಾನೆ? ಎಂಬ ಅಸಡ್ಡೆಯಿಂದ ಮನ್ಮಥನು ಈ ಕೆಲಸವನ್ನು ಮಾಡುವದಕ್ಕೆ ಒಪ್ಪಿದನು. ಆದರೆ ಅವನು ದೂರದಲ್ಲಿ ನಿಂತು ಧನುಸ್ಸಿಗೆ ಬಾಣವನ್ನು ಹೂಡುವಷ್ಟರಲ್ಲಿ ಶಿವನ ಹಣೆಗಣ್ಣಿನಿಂದ ಹೊರಟ ಅಗ್ನಿಯು ಮನ್ಮಥನನ್ನು ಸುಟ್ಟು ಬೂದಿಮಾಡಿತು. ಅಂದಿನಿಂದ ಮನ್ಮಥನು ಅನಂಗನು–ಶರೀರರಹಿತನು–ಎನಿಸಿಕೊಂಡನು. ಈಗ ಅವನ ಶರೀರವು ನೆನಪಿನಲ್ಲಿ ಮಾತ್ರ ಉಳಿದಿದೆ; ಅವನಿಗೆ ಶರೀರವೇ ಇಲ್ಲ— ಎಂದು ಪುರಾಣದಲ್ಲಿ ವರ್ಣಿಸಿದೆ.

ಸಾಮಾನ್ಯರಾದ ಜಿತೇಂದ್ರಿಯರನ್ನು ತಿರಸ್ಕಾರಮಾಡಿದರೂ ಕೇಡು ಉಂಟಾಗುವದು. ಹೀಗಿರುವಲ್ಲಿ ನಿತ್ಯವಶಿಯಾಗಿರುವ ಶಿವನನ್ನು ಅನಾದರ ಮಾಡಿದ ಮನ್ಮಥನಿಗೆ ಹೇಗೆತಾನೆ ಒಳ್ಳೆಯದಾದೀತು? ಆದ್ದರಿಂದ

ಯಾವನೂ ಪರಮೇಶ್ವರನನ್ನು ಅನಾದರದಿಂದ ಕಾಣಬಾರದು- ಎಂಬುದು ಶ್ಲೋಕದ ಅಭಿಪ್ರಾಯವು.

**ಮಹೀ ಪಾದಾಘಾತಾದ್ ವ್ರಜತಿ ಸಹಸಾ ಸಂಶಯಪದಂ**
**ಪದಂ ವಿಷ್ಣೋರ್ಭ್ರಾಮ್ಯದ್ಭುಜಪರಿಘರುಗ್ಣಗ್ರಹಗಣಮ್ ।**
**ಮುಹುರ್ದ್ಯೌರ್ದೌಸ್ಥ್ಯಂ ಯಾತ್ಯನಿಭೃತಜಟಾತಾಡಿತತಟಾ**
**ಜಗದ್ರಕ್ಷಾಯೈ ತ್ವಂ ನಟಸಿ ನನು ವಾಮೈವ ವಿಭುತಾ ॥೧೬॥**

[ಪ್ರತಿಪದಾರ್ಥ :- ಮಹೀ- ಭೂಮಿಯು ಪಾದಾಘಾತಾತ್- ಕಾಲಿನ ಒದೆತದಿಂದ ಸಹಸಾ- ತಟ್ಟನೆ ಸಂಶಯಪದಮ್- ಸಂಶಯಸ್ಥಾನವನ್ನು ವ್ರಜತಿ- ಹೊಂದುತ್ತದೆ. ವಿಷ್ಣೋಃ ಪದಮ್- ವಿಷ್ಣುಪದ(ವಾದ) ಆಕಾಶವು ಭ್ರಾಮ್ಯದ್ಭುಜಪರಿಘರುಗ್ಣಗ್ರಹ ಗಣಮ್- ಚಲಿಸುತ್ತಿರುವ ಬಾಹುಗಳೆಂಬ ಅಗಳಿಗಳಿಂದ ಸಂಕಟಪಟ್ಟ ಗ್ರಹಸಮೂಹ ವುಳ್ಳದ್ದಾಗಿ (ಆಗುತ್ತದೆ). ದ್ಯೌಃ- ಸ್ವರ್ಗಲೋಕವು ಅನಿಭೃತಜಟಾತಾಡಿತತಟಾ- ಬಿಚ್ಚಿದ ಜಟೆಗಳಿಂದ ಬಡಿಯಲ್ಪಟ್ಟ ಪ್ರಾಂತಪ್ರದೇಶವುಳ್ಳದ್ದಾಗಿ ಮುಹುಃ- ಮತ್ತೆಮತ್ತೆ ದೌಸ್ಥ್ಯಮ್- ದುಃಸ್ಥಿತಿಯನ್ನು ಯಾತಿ- ಹೊಂದುತ್ತದೆ; ತ್ವಮ್- ನೀನು ಜಗದ್ರಕ್ಷಾಯೈ- ಜಗತ್ತಿನ ರಕ್ಷಣೆಗಾಗಿ ನಟಸಿ- ನರ್ತಿಸುತ್ತಿರುವೆ. ವಿಭುತಾ- ಪ್ರಭುತ್ವವು ವಾಮೈವ ನನು- ಪ್ರತಿಕೂಲವೇ ಆಗಿರುವದಷ್ಟೆ ?]

೧೬. ಭೂಮಿಯು ಕಾಲಿನ ಹೊಡೆತದಿಂದ ಸಂಶಯಸ್ಥಾನವನ್ನು ಪಡೆಯುತ್ತಿರುವದು. ಎತ್ತಲೂ ಸುತ್ತುತ್ತಿರುವ ಬಲವಾದ ತೋಳುಗಳ ಹೊಡೆತದಿಂದ ಗ್ರಹಗಳಿಂದೊಡಗೂಡಿದ ಆಕಾಶವೂ ವ್ಯಥೆಪಡುತ್ತಿರುವದು. ಬಿಚ್ಚಿದ ಜಟೆಗಳು ತಗಲಿದ್ದರಿಂದ ಸ್ವರ್ಗ ಲೋಕವೂ ಮತ್ತೆಮತ್ತೆ ದುರವಸ್ಥೆಯನ್ನು ಹೊಂದುತ್ತಿರುವದು. ಹೀಗಿದ್ದರೂ ನೀನು ಜಗತ್ತಿನ ರಕ್ಷಣೆಗಾಗಿ ನರ್ತನಮಾಡುತ್ತಿರುವೆ! ನಿನ್ನ ಪ್ರಭುತ್ವವು ಪ್ರತಿಕೂಲವೇ ಆಗಿರುವದಲ್ಲವೆ?

## ವಿವರಣೆ

ಒಬ್ಬ ಮಹಾರಾಕ್ಷಸನು ತಪಸ್ಸಿನಿಂದ ಪಡೆದುಕೊಂಡ ವರದಿಂದ ಸಂಧ್ಯಾಕಾಲದಲ್ಲಿ ಬಹಳ ಬಲವುಳ್ಳವನಾಗಿದ್ದನು. ಅವನು ಸಂಜೆಯ

ವೇಳೆಯಲ್ಲಿ ಜಗತ್ತನ್ನೇ ನಾಶಗೊಳಿಸುವದಕ್ಕೆ ಪ್ರಯತ್ನಿಸಿದನು. ಆಗ ಅವನನ್ನು ಮರಳುಗೊಳಿಸಿ ಜಗತ್ತನ್ನು ರಕ್ಷಿಸಬೇಕೆಂದು ಶಿವನು ಮಹಾ ತಾಂಡವವನ್ನು ಆರಂಭಿಸಿದನು. ಆಗ ಅವನ ಘೋರವಾದ ನರ್ತನವನ್ನು ನೋಡುತ್ತಾ ರಾಕ್ಷಸನು ಬೆರಗಾಗಿ ನಿಂತನು.

ಆ ತಾಂಡವಕಾಲದಲ್ಲಿ ಶಿವನು ನೆಗೆನೆಗೆದು ಭೂಮಿಯಮೇಲೆ ಕಾಲನ್ನಿಡುತ್ತಿರಲು ಕಾಲತುಳಿತಕ್ಕೆ ಭೂಮಿಯೇ ಪುಡಿಪುಡಿಯಾಗುವದೋ ಎನ್ನುವಂತೆ ಕಾಣಿಸುತ್ತಿತ್ತು. ಪುಟನೆಗೆದು ಮೇಲಕ್ಕೆ ಹಾರಿದಾಗ ಆಕಾಶದ ಲ್ಲಿರುವ ಗ್ರಹನಕ್ಷತ್ರಾದಿಗಳು ಭುಜಗಳ ಹೊಡೆತಕ್ಕೆ ಸಿಕ್ಕಿ ಉದುರುಹೋಗು ವವೋ ಎನ್ನುವ ಭಯವನ್ನುಂಟುಮಾಡುತ್ತಿದ್ದವು. ಇನ್ನು ಅತ್ತಿತ್ತ ಸುತ್ತುತ್ತಲಿದ್ದ ಬಿಚ್ಚಿದ ಜಟೆಗಳ ಹೊಡೆತವು ಸ್ವರ್ಗಪ್ರಾಂತಕ್ಕೆ ತಗಲಿ ಸ್ವರ್ಗಲೋಕವು ಏನಾಗುವದೋ ಎಂಬ ಅಂಜಿಕೆಯನ್ನು ದೇವತೆಗಳಿಗೆ ಉಂಟುಮಾಡುತ್ತಿತ್ತು.

ಇಲ್ಲಿ ಈಶ್ವರನು ನರ್ತನಮಾಡಿದ್ದು ಮೂರು ಲೋಕಗಳ ರಕ್ಷಣೆಗೆ. ಆದರೆ ಆ ತಾಂಡವನರ್ತನದಿಂದ ಮೂರು ಲೋಕಕ್ಕೂ ತೊಂದರೆಯಾಗುವಂ ತೆಯೇ ಕಾಣುತ್ತಿತ್ತು. ಸ್ವದೇಶರಕ್ಷಣೆಗೆಂದೇ ರಾಜನು ಸೇನಾಸಮೇತನಾಗಿ ಸಂಚರಿಸುತ್ತಿರುವಲ್ಲಿ, ಆ ಸೇನೆಯಿಂದ ಪ್ರಜೆಗಳಿಗೆ ಒಂದಿಷ್ಟು ವ್ಯಥೆಯೂ ಆಗುತ್ತಿದ್ದರೂ ಒಟ್ಟಿನಲ್ಲಿ ಪ್ರಜಾರಕ್ಷಣೆಯೇ ಹೇಗೆ ರಾಜನ ಗುರಿಯೋ ಹಾಗೆ ತಾಂಡವಕಾಲದಲ್ಲಿ ತ್ರೈಲೋಕ್ಯಕ್ಕೂ ತೊಂದರೆಯಾಗುವಂತೆ ಕಂಡರೂ ನಿಜವಾಗಿ ಜಗತ್ತಿನ ರಕ್ಷಣೆಯೇ ಪರಮೇಶ್ವರನ ಗುರಿಯು ಎಂದು ಅಭಿ ಪ್ರಾಯ.

**ವಿಯದ್ವ್ಯಾಪೀ ತಾರಾಗಣಗುಣಿತಫೇನೋದ್ಗಮರುಚಿಃ**
**ಪ್ರವಾಹೋ ವಾರಾಂ ಯಃ ಪೃಷತಲಘುದೃಷ್ಟಃ ಶಿರಸಿ ತೇ ।**
**ಜಗದ್ದ್ವೀಪಾಕಾರಂ ಜಲಧಿವಲಯಂ ತೇನ ಕೃತಮಿ-**
**ತ್ಯನೇನೈವೋನ್ನೇಯಂ ಧೃತಮಹಿಮ ದಿವ್ಯಂ ತವ ವಪುಃ ॥ ೧೭ ॥**

[ಪ್ರತಿಪದಾರ್ಥ :- ವಿಯದ್ವ್ಯಾಪೀ- ಆಕಾಶವನ್ನು ವ್ಯಾಪಿಸಿಕೊಂಡಿರುವ ತಾರಾ ಗಣಗುಣಿತಫೇನೋದ್ಗಮರುಚಿಃ- ನಕ್ಷತ್ರಸಮೂಹಗಳಿಂದ ಹೆಚ್ಚಿಸಲ್ಪಟ್ಟ, ಫೇನೋ

ದ್ಗಮರುಚಿಃ- ನೊರೆಯ ಉತ್ಪತ್ತಿಯ ಕಾಂತಿಯುಳ್ಳ ವಾರಾಂ- ನೀರುಗಳ ಯಃಪ್ರವಾಹಃ- ಯಾವ ಪ್ರವಾಹವುಂಟೋ (ಸಃ- ಅದು) ತೇ- ನಿನ್ನ ಶಿರಸಿ- ತಲೆಯಲ್ಲಿ ಪೃಷತಲಘು- (ನೀರಿನ) ತುಂತುರಿನಷ್ಟು ಅಲ್ಪವಾಗಿ ದೃಷ್ಟಃ- ಕಾಣಿಸಿತು. ತೇನ- ಆ (ಗಂಗಾ ಪ್ರವಾಹ)ದಿಂದ ಜಗತ್- ಜಗತ್ತು ಜಲಧಿವಲಯಮ್- ಸಮುದ್ರದ ಸುತ್ತುಗಟ್ಟಿನ ದ್ವೀಪಾಕಾರಂ ಕೃತಮ್- ದ್ವೀಪದ ಆಕಾರವುಳ್ಳದ್ದಾಗಿ ಮಾಡಲ್ಪಟ್ಟಿತ್ತು. ಇತ್ಯನೇನೈವ- ಎಂಬಿವರಿಂದಲೇ ಧೃತಮಹಿಮ- ಮಹಿಮೆಯುಳ್ಳ ತವ ದಿವ್ಯಂ ವಪುಃ- ನಿನ್ನ ದಿವ್ಯ ಶರೀರವು ಉನ್ನೇಯಮ್- ಊಹಿಸಲ್ಪಡತಕ್ಕದ್ದಾಗಿರುವದು.]

೧೬. ಆಕಾಶವನ್ನೆಲ್ಲ ವ್ಯಾಪಿಸಿಕೊಂಡು ನಕ್ಷತ್ರಗಣಗಳಿಂದ ತನ್ನಲ್ಲೊಗೆದ ನೊರೆಯ ಕಾಂತಿಯು ಇಮ್ಮಡಿಸುತ್ತಿರುವ ಗಂಗಾ ಪ್ರವಾಹವಿದೆಯಲ್ಲ, ಅದು ನಿನ್ನ ತಲೆಯಲ್ಲಿ ಒಂದು ನೀರಿನ ತುಂತುರಿನಷ್ಟು ಅತ್ಯಲ್ಪವಾಗಿ ಕಾಣುತ್ತಿರುತ್ತದೆ. ಅದೇ ಜಗತ್ತನ್ನೆಲ್ಲ ಸಮುದ್ರವೆಂಬ ಆಗಳ್ತೆಯಿಂದ ಸುತ್ತಿಕೊಂಡು ದ್ವೀಪದ ಆಕಾರವುಳ್ಳದ್ದನ್ನಾಗಿ ಮಾಡಿರುತ್ತದೆಯಲ್ಲ, ಅಷ್ಟರಿಂದಲೇ ಮಹಾ ಮಹಿಮೆಯುಳ್ಳ ನಿನ್ನ ದಿವ್ಯಶರೀರವನ್ನು ಊಹಿಸಿ ತಿಳಿಯಬಹುದಾಗಿದೆ.

## ವಿವರಣೆ

ಅಗಸ್ತ್ಯಮುನಿಯು ಸಮುದ್ರವನ್ನೆಲ್ಲ ಕುಡಿದುಬಿಟ್ಟಮೇಲೆ ಭಗೀರಥನು ಪ್ರಯತ್ನದಿಂದ ತಂದ ಗಂಗಾಪ್ರವಾಹದಿಂದಲೇ ಎಲ್ಲಾ ಸಮುದ್ರಗಳೂ ತುಂಬಿಕೊಂಡವು ಎಂದು ಪುರಾಣಪ್ರಸಿದ್ಧಿ.

ಗಂಗಾಪ್ರವಾಹವೆಲ್ಲ ಈಶ್ವರನ ಜಟಾಮಂಡಲದಲ್ಲಿ ನಿಂತುಕೊಂಡಾಗ ಒಂದು ತುಂತುರುನೀರಿನಷ್ಟು ಅಲ್ಪವಾಗಿ ಕಾಣುತ್ತದೆ. ಆದರೆ ಅದೇ ನದಿಯು ಒಂದಿಷ್ಟು 'ಆಕಾಶಮಂದಾಕಿನೀ' ಎಂಬ ಹೆಸರಿನಿಂದ ಆಕಾಶವನ್ನೆಲ್ಲ ವ್ಯಾಪಿಸಿಕೊಂಡಿರುತ್ತದೆ; ಅದೇ ಗಂಗೆಯ ಸ್ವಲ್ಪಭಾಗವು 'ಭಾಗೀರಥೀ,' 'ಗಂಗಾ'- ಎಂಬ ಹೆಸರುಗಳಿಂದ ಪ್ರಸಿದ್ಧವಾಗಿ ಭೂಲೋಕದಲ್ಲಿ ಸಪ್ತಸಮುದ್ರಗಳನ್ನೂ ತುಂಬಿಕೊಂಡಿರುತ್ತದೆ ; ಅದೇ ಪ್ರವಾಹದ ಮತ್ತೊಂದು ಭಾಗವು

'ಭೋಗವತೀ' ಎಂಬ ಹೆಸರಿನಿಂದ ಪಾತಾಲವನ್ನೆಲ್ಲ ವ್ಯಾಪಿಸಿಕೊಂಡಿರುತ್ತದೆ ಎಂದು ಪೌರಾಣಿಕರು ವರ್ಣಿಸಿರುತ್ತಾರೆ. ಹೀಗೆ ಲೋಕತ್ರಯವನ್ನೆಲ್ಲ ವ್ಯಾಪಿಸಿಕೊಂಡಿರುವ ಪ್ರವಾಹವು ಶಿವನ ಶಿರಸ್ಸಿನಲ್ಲಿ ಅಷ್ಟು ಅಲ್ಪವಾಗಿ ಕಾಣಿಸುತ್ತಿದ್ದರೆ ಆ ಪರಮೇಶ್ವನ ದಿವ್ಯಶರೀರದ ಮಹತ್ತ್ವವು ಎಷ್ಟೆಂದಾಯಿತು! ಇಂಥ ಮಹಾಮಹಿಮನು ಸಾಕಾರಶಿವನು. ಅವನ ನಿಜತತ್ತ್ವವನ್ನಂತೂ ಸಾಮಾನ್ಯರು ಕಲ್ಪನೆಯಿಂದಲೂ ತಿಳಿದುಕೊಳ್ಳಲಾರರು- ಎಂದು ಭಾವ.

**ರಥಃ ಕ್ಷೋಣೀ ಯನ್ತಾ ಶತಧೃತಿರಗೇನ್ದ್ರೋ ಧನುರಥೋ**
**ರಥಾಙ್ಗೇ ಚನ್ದ್ರಾರ್ಕೌ ರಥಚರಣಪಾಣಿಃ ಶರ ಇತಿ।**
**ದಿಧಕ್ಷೋಸ್ತೇ ಕೋಽಯಂ ತ್ರಿಪುರತೃಣಮಾಡಮ್ಬರವಿಧಿ-**
**ರ್ವಿಧೇಯೈಃ ಕ್ರೀಡನ್ತ್ಯೋ ನ ಖಲು ಪರತನ್ತ್ರಾಃ ಪ್ರಭುಧಿಯಃ॥೧೮॥**

[ಪ್ರತಿಪದಾರ್ಥ :- ರಥಃ- ರಥವು ಕ್ಷೋಣೀ- ಭೂಮಿಯು. ಯನ್ತಾ- ಸಾರಥಿಯು ಶತಧೃತಿಃ- ಬ್ರಹ್ಮನು. ಧನುಃ- ಬಿಲ್ಲು ಅಗೇನ್ದ್ರಃ- ಪರ್ವತಶ್ರೇಷ್ಠ(ನಾದ ಮೇರುವು) ಅಥೋ- ಆಮೇಲೆ (ಮತ್ತು) ರಥಾಙ್ಗೇ- ಚಕ್ರಗಳು ಚನ್ದ್ರಾರ್ಕೌ- ಚಂದ್ರಸೂರ್ಯರು ಶರಃ- ಬಾಣವು ರಥಚರಣಪಾಣಿಃ- ಚಕ್ರಪಾಣಿ(ಯಾದ ವಿಷ್ಣುವು.) ಇತಿ- ಹೀಗೆಂದು ತ್ರಿಪುರತೃಣಮ್- ತ್ರಿಪುರವೆಂಬ ಹುಲ್ಲನ್ನು ದಿಧಕ್ಷೋಃ- ಸುಡಲಿಚ್ಛಿಸುವ ತೇ- ನಿನಗೆ ಆಡಮ್ಬರವಿಧಿಃ- ತೋರಿಕೆಯ ಪ್ರಕಾರವು ಕೋಽಯಮ್- ಯಾವದಿದು ? ಪ್ರಭುಧಿಯಃ- ಪ್ರಭುವಿನ ಬುದ್ಧಿ(ವಿಶೇಷ)ಗಳು ವಿಧೇಯೈಃ- ಸ್ವಾಧೀನವಾಗಿರುವ ವಸ್ತುಗಳೊಡನೆ ಕ್ರೀಡನ್ತ್ಯಃ- ಆಡುತ್ತಿರುವವು. ಪರತನ್ತ್ರಾಃ- ಪರಾಧೀನಗಳು ನ ಖಲು- ನಿಶ್ಚಯವಾಗಿಯೂ ಅಲ್ಲ.]

೧೮. ತ್ರಿಪುರವೆಂಬ ಹುಲ್ಲನ್ನು ಸುಡುವದಕ್ಕೆ ರಥವು ಭೂಮಿಯು, ಸಾರಥಿಯು ಬ್ರಹ್ಮನು, ಧನುಸ್ಸು ಮೇರುಪರ್ವತವು, ರಥದ ಚಕ್ರಗಳು ಚಂದ್ರಸೂರ್ಯರುಗಳು, ಬಾಣವು ಚಕ್ರಪಾಣಿಯಾದ ವಿಷ್ಣು ಎಂಬೀ ಪ್ರಕಾರದ ಆಡಂಬರವು ನಿನಗೆ ಏತಕ್ಕೆ ಬೇಕು ? ಪ್ರಭುಗಳ ಸಂಕಲ್ಪಗಳು ತಮ್ಮ ವಿಧೇಯ

ರೊಡನೆ ಆಟವಾಡುತ್ತವೆಯೇ ಹೊರತು ಪರಾಧೀನವಾಗಿರುವದಿಲ್ಲ ವಷ್ಟೆ ?

## ವಿವರಣೆ

ಪೂರ್ವದಲ್ಲಿ ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ– ಎಂಬ ಮೂವರು ಅಸುರರು ತಪೋಬಲದಿಂದ ಒಂದಾನೊಂದು ವರವನ್ನು ಪಡೆದು ಕೊಂಡರು. ಇವರು ಇಚ್ಛಾಮಾತ್ರದಿಂದ ಸಂಚರಿಸುವ ಮೂರು ಪುರಗಳನ್ನು ಅಂತರಿಕ್ಷದಲ್ಲಿ ಮಾಡಿಕೊಂಡು ಲೋಕವನ್ನೆಲ್ಲ ಬಾಧಿಸುತ್ತಿದ್ದರು. ಆ ಪುರಗಳು ದಿವ್ಯಸಹಸ್ರವರ್ಷಗಳಿಗೊಮ್ಮೆ ಒಂದು ಮುಹೂರ್ತಕಾಲ ಸೇರಬೇಕೆಂದೂ ಅವು ಸೇರಿದಾಗಲೇ ಒಂದೇ ಬಾಣದಿಂದ ಅವನ್ನು ಹೊಡೆಯುವ ವೀರನಿಂದ ಮಾತ್ರವೇ ಅವುಗಳ ನಾಶವಾಗಬೇಕೆಂದೂ ಅವರಿಗೆ ವರವಿದ್ದಿತು. ಆ ದುಷ್ಟರ ಬಾಧೆಯಿಂದ ಅಖಿಲಜಗತ್ತೂ ತಲ್ಲಣಿಸು ತ್ತಿತ್ತು. ಆಗ ದೇವತೆಗಳ ಪ್ರಾರ್ಥನೆಯಿಂದ ಪರಮೇಶ್ವರನು ಮಹಾವಿಷ್ಣು ವನ್ನೇ ಬಾಣವಾಗಿ ಮಾಡಿಕೊಂಡು ಮೇರುಪರ್ವತವೆಂಬ ಬಿಲ್ಲಿನ ಹೆದೆಯಲ್ಲಿ ಅದನ್ನು ಹೂಡಿ ಆ ಪುರಗಳನ್ನು ಸುಟ್ಟುಹಾಕಿದನು. ಆಗ ಭೂಮಿಯೇ ಅವನಿಗೆ ರಥವಾಗಿತ್ತು, ಚಂದ್ರಸೂರ್ಯರೇ ಆ ರಥದ ಗಾಲಿಗಳಾಗಿದ್ದರು, ಚತುರ್ಮುಖಬ್ರಹ್ಮನೇ ಸಾರಥಿಯಾಗಿದ್ದನು– ಎಂದು ಪುರಾಣಕಥೆ.

ಕವಿಯು ಈ ಕಥೆಯನ್ನು ಅವಲಂಬಿಸಿ ಪರಮೇಶ್ವರನನ್ನು ಹೀಗೆಂದು ಸ್ತುತಿಸಿರುತ್ತಾನೆ. ನಿತ್ಯಸಿದ್ಧಸಂಕಲ್ಪನಾದ ಮಹೇಶ್ವರನಿಗೆ ತ್ರಿಪುರವು ಒಂದು ಹುಲ್ಲುಕಡ್ಡಿಗಿಂತಲೂ ಕಡೆ; ಅದನ್ನು ಸುಟ್ಟುಹಾಕಬೇಕೆಂಬುದಕ್ಕೆ ಆತನಿಗೆ ಯಾವ ಸಾಮಗ್ರಿಯಾದರೂ ಏತಕ್ಕೆ ಬೇಕು ? ಪ್ರಲಯಕಾಲದಲ್ಲಿ ಇಡಿಯ ಜಗತ್ತನ್ನೇ ಸುಡುವಾಗ ಯಾವ ಸಾಮಗ್ರಿಯನ್ನೂ ಬಯಸದ ಆತನು ಏತಕ್ಕಾಗಿ ಈ ಸಾಮಗ್ರಿಗಳನ್ನು ಸೇರಿಸಿಕೊಳ್ಳುವ ಆಡಂಬರವನ್ನು ಅನುಸರಿಸಿದನು ?—ಎಂದು ಯಾರಾದರೂ ಶಂಕಿಸಬಹುದು. ಆದರೆ ಎಲ್ಲರಿಗೂ ಪ್ರಭುವಾದ ಈಶ್ವರನಿಗೆ ತ್ರಿಪುರನಾಶಕ್ಕೆ ಯಾವ ಸಾಮಗ್ರಿಯೂ ಬೇಡದಿದ್ದರೂ ಭೂಮಿ, ಚಂದ್ರಸೂರ್ಯರು, ಬ್ರಹ್ಮ, ವಿಷ್ಣು- ಇವರೆಲ್ಲರೂ

ತನಗೆ ವಿಧೇಯರಾದ್ದರಿಂದ ಅವರೊಡನೆ ಇದೊಂದು ಲೀಲೆಯನ್ನು ಮಾಡಿ ತೋರಿಸಿದನು. ಇಡಿಯ ಜಗತ್ತೇ ಆತನ ಸಂಕಲ್ಪಕ್ಕೆ ಅನುಸಾರವಾಗಿ ನಡೆಯುತ್ತದೆ ಎಂಬುದನ್ನು ಈ ಲೀಲೆಯು ತೋರಿಸಿತು– ಎಂಬುದು ಅಭಿಪ್ರಾಯ.

**ಹರಿಸ್ತೇ ಸಾಹಸ್ರಂ ಕಮಲಬಲಿಮಾಧಾಯ ಪದಯೋ–**
**ರ್ಯದೇಕೋನೇ ತಸ್ಮಿನ್ನಿಜಮುದಹರನ್ನೇತ್ರಕಮಲಮ್ ।**
**ಗತೋ ಭಕ್ತ್ಯುದ್ರೇಕಃ ಪರಿಣತಿಮಸೌ ಚಕ್ರವಪುಷಾ**
**ತ್ರಯಾಣಾಂ ರಕ್ಷಾಯೈ ತ್ರಿಪುರಹರ ಜಾಗರ್ತಿ ಜಗತಾಮ್ ॥ ೧೯ ॥**

[ಪ್ರತಿಪದಾರ್ಥಃ– ತ್ರಿಪುರಹರ– ತ್ರಿಪುರಸಂಹಾರಕನೆ, ಹರಿಃ– ವಿಷ್ಣುವು ತೇ–ನಿನ್ನ ಪದಯೋಃ– ಪಾದಗಳಲ್ಲಿ ಸಾಹಸ್ರಮ್– ಸಾವಿರದಷ್ಟು ಕಮಲಬಲಿಮ್– ಕಮಲಗಳ ಪೂಜೆಯನ್ನು ಆಧಾಯ– ಇಟ್ಟು (ಸಮರ್ಪಿಸಿ) ತಸ್ಮಿನ್– ಆ ಪೂಜೆಯಲ್ಲಿ ಏಕೋನೇ– ಒಂದು ಕಡಿಮೆಯಾದದ್ದಾಗಲು ನಿಜಮ್– ತನ್ನ ನೇತ್ರಕಮಲಮ್– ಕಣ್ಣೆಂಬ ಕಮಲವನ್ನು ಯತ್ ಉದಹರತ್– ಕಿತ್ತನಲ್ಲ ಅಸೌ– ಈ ಭಕ್ತ್ಯುದ್ರೇಕಃ– ಭಕ್ತಿಯ ಅತಿಶಯವು ಚಕ್ರವಪುಷಾ– ಚಕ್ರಾಯುಧದ ಶರೀರದಿಂದ ಪರಿಣತಿಮ್– ಪರಿಣಾಮವನ್ನು ಗತಃ– ಹೊಂದಿದ್ದಾಗಿ ತ್ರಯಾಣಾಂ ಜಗತಾಮ್– ಮೂರು ಲೋಕಗಳ ರಕ್ಷಾಯೈ– ರಕ್ಷಣೆಗಾಗಿ ಜಾಗರ್ತಿ– ಜಾಗರೂಕವಾಗಿರುತ್ತದೆ.]

೧೯. ಎಲೈ ತ್ರಿಪುರಸಂಹಾರಕನಾದ ಶಿವನೆ, ವಿಷ್ಣುವು ನಿನ್ನ ಪಾದಕ್ಕೆ ಸಾವಿರ ಕಮಲಗಳನ್ನು ಅರ್ಪಿಸುವ ನಿಯಮವನ್ನಿಟ್ಟು ಕೊಂಡು ಹೊರಡಲು, ಅವುಗಳಲ್ಲಿ ಒಂದು ಕಡಿಮೆಯಾಗಿರು ವದನ್ನು ಕಂಡು ತನ್ನ ನೇತ್ರಕಮಲವನ್ನೇ ಕಿತ್ತು ಅರ್ಪಿಸಿದನಲ್ಲ, ಆ ಭಕ್ತ್ಯತಿಶಯವೇ ಚಕ್ರಾಯುಧರೂಪವಾಗಿ ಪರಿಣಮಿಸಿ ಲೋಕ ತ್ರಯವನ್ನೂ ಸಂರಕ್ಷಣೆಮಾಡುವದರಲ್ಲಿ ಜಾಗರೂಕವಾಗಿರುತ್ತದೆ.

## ವಿವರಣೆ

ಒಂದಾನೊಂದು ಕಾಲದಲ್ಲಿ ವಿಷ್ಣುವು ಶಿವನನ್ನು ಶ್ರದ್ಧಾಭಕ್ತಿಗಳಿಂದ ಪೂಜಿಸುತ್ತಾ ದಿನದಿನವೂ ಸಾವಿರ ಕಮಲಗಳನ್ನು ಪಾದಕ್ಕೆ ಅರ್ಪಿಸುತ್ತಿ

ದ್ದನು. ಒಂದು ದಿನ ಶಿವನು ಅವನ ಭಕ್ತಿಯ ಮಟ್ಟವನ್ನು ಪ್ರಕಟಿಸುವದಕ್ಕಾಗಿ ಒಂದು ಕಮಲವು ಕಡಿಮೆಯಾಗುವಂತೆ ಮಾಡಿದನು. ವಿಷ್ಣುವು ಹುಡುಕಿನೋಡಿ ಅಲ್ಲಿಯೇ ಆಗಲೇ ಮತ್ತೊಂದು ಕಮಲವು ಸಿಕ್ಕದೆ ಇದ್ದದ್ದರಿಂದ ನಿಯಮಭಂಗವು ಆಗಬಾರದೆಂದು ಕಮಲನೇತ್ರನೆಂದು ಪ್ರಖ್ಯಾತನಾಗಿದ್ದ ತನ್ನ ನೇತ್ರವನ್ನೇ ಕಮಲಭಾವನೆಯಿಂದ ಕಿತ್ತು ಪೂಜಿಸಿಬಿಟ್ಟನು.

ಆಗ ಅತ್ಯಂತಪ್ರಸನ್ನನಾದ ಶಿವನು ದುಷ್ಟರನ್ನೆಲ್ಲ ಸಂಹರಿಸಿ ಮೂರು ಲೋಕಗಳನ್ನೂ ಕಾಪಾಡುವದಕ್ಕೆ ಸಮರ್ಥವಾದ ಚಕ್ರಾಯುಧವನ್ನೂ ದಿವ್ಯಕವಚಾದಿಗಳನ್ನೂ ಅನುಗ್ರಹಪೂರ್ವಕವಾಗಿ ಅವನಿಗೆ ಕೊಟ್ಟನು- ಎಂದು ಪುರಾಣದಲ್ಲಿ ಕಥೆ ಪ್ರಸಿದ್ಧವಾಗಿರುತ್ತದೆ.

ಇಂಥ ಅದ್ಭುತವಾದ ಅಚಿಂತ್ಯವಾದ ಮಹಿಮೆಯುಳ್ಳವನು ಶಿವನು, ಭಕ್ತಶ್ರೇಷ್ಠರಿಂದ ಪೂಜಿತನಾಗುವವನು- ಎಂಬುದನ್ನು ಇಲ್ಲಿ ತಿಳಿಸಿದಂತೆ ಆಗಿದೆ.

**ಕ್ರತೌ ಸುಪ್ತೇ ಜಾಗ್ರತ್ತ್ವಮಸಿ ಫಲಯೋಗೇ ಕ್ರತುಮತಾಂ**
**ಕ್ವ ಕರ್ಮ ಪ್ರಧ್ವಸ್ತಂ ಫಲತಿ ಪುರುಷಾರಾಧನಮೃತೇ ।**
**ಅತಸ್ತ್ವಾಂ ಸಂಪ್ರೇಕ್ಷ್ಯ ಕ್ರತುಷು ಫಲದಾನಪ್ರತಿಭುವಂ**
**ಶ್ರುತೌ ಶ್ರದ್ಧಾಂ ಬದ್ಧ್ವಾ ಕೃತಪರಿಕರಃ ಕರ್ಮಸು ಜನಃ ॥ ೨೦ ॥**

[ಪ್ರತಿಪದಾರ್ಥ:- ಕ್ರತೌ- ಯಾಗವು ಸುಪ್ತೇ- ಲಯವಾಗಲು ಕ್ರತುಮತಾಮ್- ಯಾಗವನ್ನು ಮಾಡಿದವರಿಗೆ ಫಲಯೋಗೇ- ಫಲದ ಸಂಬಂಧವಾಗುವಲ್ಲಿ ತ್ವಮ್-ನೀನು ಜಾಗ್ರತ್ ಅಸಿ- ಎಚ್ಚರವಾಗಿಯೇ ಇರುತ್ತೀಯೆ. ಪ್ರಧ್ವಸ್ತಮ್- ನಾಶವಾದ ಕರ್ಮ- ಕರ್ಮವು ಪುರುಷಾರಾಧನಮ್ ಋತೇ- ಪರಮಪುರುಷನಾದ (ನಿನ್ನ) ಆರಾಧನೆಯಿಲ್ಲದೆ ಕ್ವ- ಎಲ್ಲಿ ಫಲತಿ- ಫಲಿಸುತ್ತದೆ? ಅತಃ- ಆದ್ದರಿಂದ ಕ್ರತುಷು- ಯಾಗಗಳಲ್ಲಿ ಫಲದಾನ ಪ್ರತಿಭುವಮ್- ಫಲವನ್ನು ಕೊಡುವದರಲ್ಲಿ ಹೊಣೆಗಾರನಾಗಿರುವ ತ್ವಾಮ್- ನಿನ್ನನ್ನು ಸಂಪ್ರೇಕ್ಷ್ಯ- ಕಂಡು ಶ್ರುತೌ- ಶ್ರುತಿಯಲ್ಲಿ ಶ್ರದ್ಧಾಂ ಬದ್ಧ್ವಾ-ಶ್ರದ್ಧೆಯನ್ನು ಕಟ್ಟಿಕೊಂಡು (ಶ್ರದ್ಧೆಯುಳ್ಳವರಾಗಿ) ಕರ್ಮಸು- ಕರ್ಮಗಳಲ್ಲಿ ಜನಃ- ಜನವು ಕೃತಪರಿಕರಃ- ಮಾಡಲ್ಪಟ್ಟ ಯತ್ನವುಳ್ಳವರಾಗಿರುತ್ತಾರೆ.]

೨೦. ಯಾಗವು ನಿವೃತ್ತಿಸಿದಮೇಲೂ ಅದನ್ನು ಮಾಡಿದ ಜನರಿಗೆ ಫಲಸಂಬಂಧವನ್ನು ಮಾಡಿಕೊಡುವದಕ್ಕೆ ನೀನು ಎಚ್ಚರವಾಗಿಯೇ ಇರುತ್ತೀಯೆ. ಕರ್ಮವು ನಾಶವಾದ ಬಳಿಕ ಈಶ್ವರಾರಾಧನೆಯಿಲ್ಲದೆ ಎಲ್ಲಿತಾನೆ ಫಲಿಸುತ್ತದೆ? ಆದ್ದರಿಂದ ಕ್ರತುಗಳಲ್ಲಿ ಫಲವನ್ನು ಕೊಡುವದಕ್ಕೆ ನೀನೇ ಹೊಣೆ ಎಂಬುದನ್ನು ಕಂಡುಕೊಂಡು ಅಧಿಕಾರಿಗಳಾದ ಜನರು ಶ್ರುತಿಯಲ್ಲಿ ಶ್ರದ್ಧೆಯುಳ್ಳವರಾಗಿ ಕರ್ಮಗಳನ್ನು ಮಾಡುವದರಲ್ಲಿ ತೊಡಗುತ್ತಾರೆ.

## ವಿವರಣೆ

ಪರಮೇಶ್ವರನು ಅಚಿಂತ್ಯಮಹಿಮೆಯುಳ್ಳವನೆಂತಲೂ ಆತನನ್ನು ಶ್ರದ್ಧಾಭಕ್ತಿಗಳಿಂದ ಆರಾಧನೆಮಾಡುವವರಿಗೇ ಸಕಲಪುರುಷಾರ್ಥಗಳೂ ದೊರಕುವವೆಂತಲೂ ಪರಮೇಶ್ವರನಿಂದ ವಿಮುಖರಾದವರಿಗೆ ಅನರ್ಥಗಳಾಗುವವೆಂತಲೂ ಅನ್ವಯವ್ಯತಿರೇಕದೃಷ್ಟಾಂತಗಳಿಂದ ತಿಳಿಸಿದ್ದಾಗಿದೆ. ಆದರೆ ಕೆಲವರು "ಸ್ವತಃಪ್ರಮಾಣವಾಗಿರುವ ವೇದವು 'ಇಂಥ ಫಲವನ್ನು ಬಯಸುವವರು ಇಂಥ ಯಾಗವನ್ನು ಮಾಡಬೇಕು' ಎಂದು ಹೇಳುತ್ತಿದೆ. ಆದ್ದರಿಂದ ಕರ್ಮವೇ ಸಾಧನವು, ಸ್ವರ್ಗಾದಿಗಳು ಫಲಗಳು; ಕರ್ಮಕ್ಕೆ ಫಲವಾಗುವದಕ್ಕೆ ಈಶ್ವರನ ಹಂಗೇನೂ ಇಲ್ಲ" ಎಂದು ವಾದಿಸುತ್ತಿದ್ದಾರೆ. ಅವರ ಮತವು ಶ್ರುತಿಗೂ ಲೋಕನ್ಯಾಯಕ್ಕೂ ವಿರುದ್ಧವಾಗಿರುತ್ತದೆ ಎಂಬುದನ್ನು ತಿಳಿಸುವ ಮೂಲಕ ಈ ಶ್ಲೋಕದಲ್ಲಿ ಪರಮೇಶ್ವರನೇ ಫಲದಾತೃವೆಂಬುದನ್ನು ಸಿದ್ಧಾಂತಗೊಳಿಸಿ ಪುಷ್ಪದಂತನು ಸ್ತುತಿಸುತ್ತಿದ್ದಾನೆ.

ಕ್ರತುವು, ಎಂದರೆ ಯಾಗಾದಿಕರ್ಮವು, ಒಂದು ಕ್ರಿಯೆಯು. ಯಾವ ಕ್ರಿಯೆಯಾದರೂ ಆದ್ಯಂತಗಳುಳ್ಳದ್ದೆಂಬುದು ಪ್ರಸಿದ್ಧವಾಗಿರುತ್ತದೆ. ಯಾಗರೂಪವಾದ ವೈದಿಕಕ್ರಿಯೆಯನ್ನು ಇಂಥಿಂಥ ಕಾರಕಗಳ ಸಹಾಯದಿಂದ ಇಂಥಿಂಥ ಪ್ರಕಾರವಾಗಿ ಮಾಡಬೇಕು ಎಂದು ವೇದವೇ ಉಪದೇಶಿಸುತ್ತಿದೆ. ಆದ್ದರಿಂದ ವೈದಿಕಕರ್ಮವೂ ಕ್ರಿಯೆಯೇ ಆಗಿರುವದರಿಂದ ಅದು ಹುಟ್ಟಿಸಾಯುತ್ತದೆ. ಆದರೆ ಈ ಕರ್ಮಕ್ಕೆ ಫಲವೆಂದು ವೇದದಲ್ಲಿ

ಹೇಳಿರುವ ಸ್ವರ್ಗಾದಿಗಳು ಕಾಲಾಂತರದಲ್ಲಿ ದೇಶಾಂತರದಲ್ಲಿ ಆಗತಕ್ಕವುಗಳಾಗಿರುತ್ತವೆ. ಕರ್ಮವು ಮಾಡಿದ ಕೂಡಲೆ ನಾಶವಾಗುತ್ತದೆ ಎಂಬುದು ಪ್ರಸಿದ್ಧವಾಗಿರುವಲ್ಲಿ ಅದು ತನಗೆ ಕಾಲಾಂತರದಲ್ಲಿ ಫಲವನ್ನು ಕೊಡುವದು –ಎಂದು ಯಾವನು ತಾನೆ ನಂಬಿಯಾನು? ಆದರೆ ಪರಮೇಶ್ವರನು ನಿತ್ಯನಾಗಿರುತ್ತಾನೆ; ಚೇತನನಾಗಿರುತ್ತಾನೆ. ಆದ್ದರಿಂದ 'ಈಗ ಇವನು ಇಂಥ ಕರ್ಮವನ್ನು ಮಾಡಿರುತ್ತಾನೆ. ಈಗ ಇವನಿಗೆ ಇಂಥ ಫಲವನ್ನು ಕೊಡಬೇಕು' –ಎಂಬ ನಿತ್ಯಜ್ಞಾನವು ಅವನಿಗೆ ಇರುತ್ತದೆಯಾಗಿ ಈಶ್ವರನು ಫಲದಾತೃವೆಂಬುದು ಯುಕ್ತಿಯುಕ್ತವಾಗಿದೆ ಎಂದು ಭಾವ. ಕರ್ಮವು ಸುಪ್ತವಾಗಿದ್ದರೂ ಪರಮೇಶ್ವರನು ಎಚ್ಚರವಾಗಿರುತ್ತಾನೆ– ಎಂಬಲ್ಲಿ ಕರ್ಮವು ಅಚೇತನವೂ ಅನಿತ್ಯವೂ ಆಗಿರುವಲ್ಲಿ ಪರಮೇಶ್ವರನು ನಿತ್ಯಚೈತನ್ಯಸ್ವರೂಪನಾಗಿರುತ್ತಾನೆ ಎಂಬ ಅಭಿಪ್ರಾಯವು ಇಲ್ಲಿ ಅಡಗಿರುತ್ತದೆ.

ಕರ್ಮಮೀಮಾಂಸಕರು ಹೀಗೆಂದು ಇಲ್ಲಿ ವಾದಿಸುತ್ತಾರೆ: ಕರ್ಮವು ಅನಿತ್ಯವಾದರೇನು? ವೇದದಲ್ಲಿ ಇಂಥ ಕರ್ಮಕ್ಕೆ ಇಂಥ ಫಲವಾಗುವದೆಂದು ಫಲಕ್ಕಾಗಿ ಕರ್ಮವನ್ನು ವಿಧಿಸಿರುವದು ಹೊಂದುವದಕ್ಕಾಗಿಯೇ ಅದಕ್ಕೆ ಕಾಲಾಂತರದಲ್ಲಿ ಫಲವನ್ನು ಕೊಡುವ ಶಕ್ತಿಯನ್ನು ಕಲ್ಪಿಸಬೇಕು. ಅಥವಾ ಕರ್ಮವು ಅಪೂರ್ವವೆಂಬ ರೂಪಾಂತರವನ್ನು ಹೊಂದಿ ಸ್ವರ್ಗಾದಿಫಲವನ್ನು ಕೊಡುತ್ತದೆ ಎಂದು ಕಲ್ಪಿಸೋಣ. ಕರ್ಮವು ಹುಟ್ಟಿದಮಾತದಿಂದ ನಾಶವಾಗುತ್ತದೆಯಾದ್ದರಿಂದ ಸ್ವರ್ಗಾದಿಗಳನ್ನುಂಟುಮಾಡಲಾರದು ಎಂಬ ತರ್ಕವು ಶ್ರುತಿಗೆ ವಿರುದ್ಧವಾಗಿರುವದರಿಂದ ಅದನ್ನು ಆದರಿಸತಕ್ಕದ್ದಲ್ಲ. ಕರ್ಮವು ನಾಶವಾಗುವದು ಕಂಡಿರುವದರಿಂದಲೂ ಶ್ರುತಿಯಲ್ಲಿ ಕರ್ಮಕ್ಕೆ ಸ್ವರ್ಗಾದಿಫಲವನ್ನು ಹೇಳಿರುವದರಿಂದಲೂ ಕರ್ಮಕ್ಕೆ ಸೂಕ್ಷ್ಮವಾದ ಅಪೂರ್ವವೆಂಬ ಹೆಸರಿನ ಒಂದಾನೊಂದು ಮುಂದಿನ ಅವಸ್ಥೆಯಿದೆಯೆಂದೋ, ಅಥವಾ ಸ್ವರ್ಗವೇ ಮುಂತಾದ ಫಲದ ಪೂರ್ವಾವಸ್ಥೆಯಿದೆಯೆಂದೋ ತರ್ಕಿಸಬೇಕಾಗುತ್ತದೆ. ಈಶ್ವರನು ಫಲವನ್ನು ಕೊಡುತ್ತಾನೆಂಬುದು ಮಾತ್ರ ಒಪ್ಪತಕ್ಕದ್ದಲ್ಲ. ಏಕೆಂದರೆ ಒಂದೇ ರೂಪದಲ್ಲಿದ್ದು ಈಶ್ವರನು ವಿಚಿತ್ರಫಲಗಳನ್ನು ಕೊಡುತ್ತಾನೆಂಬುದು ಯುಕ್ತವಾಗುವದಿಲ್ಲ; ಹಾಗೆ ಕೊಡುತ್ತಾನೆಂದರೆ ಈಶ್ವರನು ಪಕ್ಷಪಾತಿಯೆಂದಾಗುವದು; ಈಶ್ವರನೇ ಫಲವನ್ನು

ಕೊಡುವದರಿಂದ ಕರ್ಮವನ್ನು ಮಾಡುವದು ವ್ಯರ್ಥವೆಂದೂ ಆಗುತ್ತದೆ. ಆದ್ದರಿಂದ ಕರ್ಮದಿಂದಲೇ ಫಲವು.

ಇದಕ್ಕೆ ಸಮಾಧಾನವೇನೆಂದರೆ, ಲೋಕದಲ್ಲಿ ಬರಿಯ ಕರ್ಮವು ಫಲವನ್ನು ಕೊಡುವದು ಕಂಡುಬಂದಿಲ್ಲ; ರಾಜನೇ ಮುಂತಾದ ದಣಿಯು ಸೇವೆಯಿಂದ ತುಷ್ಟನಾಗಿ ಫಲವನ್ನು ಕೊಡುವದು ಕಂಡುಬಂದಿದೆ. ಆದ್ದರಿಂದ ಲೋಕದಲ್ಲಿ ಕಂಡುಬಂದಿರುವ ದೃಷ್ಟಾಂತಕ್ಕೆ ಸರಿಯಾಗಿ ಇಲ್ಲಿಯೂ ಕರ್ಮದಿಂದ ಪರಿತುಷ್ಟನಾದ ಈಶ್ವರನೇ ಫಲವನ್ನು ಕೊಡುತ್ತಾನೆಂದು ಕಲ್ಪಿಸುವದು ಯುಕ್ತವಾಗಿರುತ್ತದೆ. ಅಪೂರ್ವವಾದರೂ ಲೋಕಸಿದ್ಧವಾದ ಕಾರಣಗಳ ಅಪೇಕ್ಷೆಯಿಂದಲೇ ಫಲವನ್ನು ಕೊಡಬೇಕಾಗಿರುವದರಿಂದ ಆಗಲೂ ಈಶ್ವರನ ಸಹಾಯವನ್ನು ಅದು ಕೋರಲೇಬೇಕಾಗುವದು. ನಿಜವಾಗಿ ನೋಡಿದರೆ ಈಶ್ವರನೇ ಫಲವನ್ನು ಕೊಡುತ್ತಾನೆಂದು ಶ್ರುತಿಸ್ಮೃತಿಗಳಲ್ಲಿರುವದರಿಂದ ಅಪೂರ್ವವನ್ನು ಕಲ್ಪಿಸಬೇಕಾದದ್ದೇ ಇಲ್ಲ. ಈಶ್ವರನು ಜೀವರುಗಳ ಕರ್ಮಾನುಗುಣವಾಗಿಯೇ ಆಯಾ ಫಲವನ್ನು ಕೊಡುವಂತೆ ಜಗತ್ತನ್ನೂ ನಿರ್ಮಿಸುತ್ತಾನಾದ್ದರಿಂದಲೂ ಅವನೇ ಕರ್ಮಫಲಕ್ಕೆ ಹೇತುವಾಗಿರುತ್ತಾನೆನ್ನುವದು ಯುಕ್ತವು.

ದಾನಯಾಗತಪಸ್ಸುಗಳನ್ನು ಆಚರಿಸುವವರನ್ನು ಜನರು ಸತ್ಕರ್ಮನಿರತರು, ಧನ್ಯರು ಎಂದು ಹೊಗಳುತ್ತಾರಲ್ಲವೆ? ಕರ್ಮಫಲವನ್ನು ಕೊಡುವ ಸರ್ವಜ್ಞನೂ ಸರ್ವಶಕ್ತನೂ ಆದ ಪರಮೇಶ್ವರನಿಲ್ಲದೆ ಇದ್ದರೆ ಇದು ಹೇಗೆ ಯುಕ್ತವಾದೀತು? ಈಗಲೇ ಇಲ್ಲಿಯೇ ನಾಶವಾಗುವ ಕರ್ಮದಿಂದ ಜನರಿಗೆ ಫಲವುಂಟಾಗುವದೆಂದು ಯಾರುತಾನೆ ನಂಬಬಹುದು? ಸೇವಾಕ್ರಿಯೆಯ ಫಲವು ಸೇವ್ಯನಿಂದ ದೊರೆಯುವದು ಲೋಕದಲ್ಲಿ ಕಂಡಿರುವದರಿಂದ ಕ್ರಿಯಾಸಾಮರ್ಥ್ಯವು ಲೋಕದಲ್ಲಿ ಹೇಗೆ ಕಂಡುಬಂದಿರುತ್ತದೆಯೋ ಹಾಗೆಯೇ ವೈದಿಕಕರ್ಮಕ್ಕೂ ಸಾಮರ್ಥ್ಯವನ್ನು ಕಲ್ಪಿಸುವದರಲ್ಲಿ ಉಪಪತ್ತಿಯಿದೆ. ಇದರಲ್ಲಿ ಲಾಘವವೂ ಇದೆ. ಏಕೆಂದರೆ ಅಪೂರ್ವವನ್ನು ಕಲ್ಪಿಸಿದಮೇಲೂ ಅದಕ್ಕೆ ಫಲವನ್ನು ಕೊಡುವ ಸಾಮರ್ಥ್ಯವನ್ನು ಕಲ್ಪಿಸಬೇಕು; ಸಾಮರ್ಥ್ಯವನ್ನು ಕಲ್ಪಿಸಿದಮೇಲೆ ಅದು ನಿಜವಾಗಿ ಫಲವನ್ನು ಕೊಡುವದೆಂದೂ

ಕಲ್ಪಿಸಬೇಕು. ಇಷ್ಟೆಲ್ಲ ಕಲ್ಪಿಸುವದಕ್ಕಿಂತ ಈಶ್ವರನಿದ್ದಾನೆಂಬುದೊಂದನ್ನು ಕಲ್ಪಿಸಿದರೆ ಆ ಮೇಲೆ ಕಲ್ಪಿಸಬೇಕಾದದ್ದು ಏನೂ ಇರುವದಿಲ್ಲ; ಏಕೆಂದರೆ ಸೇವ್ಯನಾದ ಈಶ್ವರನಿಗೆ ಸಾಮರ್ಥ್ಯವಿರುವದೂ ಅವನು ಫಲವನ್ನು ಕೊಡುತ್ತಾನೆಂಬುದೂ ಲೋಕಸಿದ್ಧವೇ ಆಗಿರುತ್ತದೆ. ಇಷ್ಟೇ ಅಲ್ಲ. ಈಶ್ವರನ ಅಸ್ತಿತ್ವವನ್ನು ಕಲ್ಪಿಸಬೇಕಾದದ್ದೇನೂ ಇಲ್ಲ; ಏಕೆಂದರೆ ಶ್ರುತಿಸ್ಮೃತಿ ಪ್ರಮಾಣಗಳಿಂದ ಅದು ಸಿದ್ಧವಾಗಿಯೇ ಇರುತ್ತದೆ. ಈಶ್ವರನು ನಮ್ಮೆಲ್ಲರ ಆತ್ಮನೇ ಆಗಿರುವದರಿಂದ ಸ್ವತಃಸಿದ್ಧನೂ ಆಗಿರುತ್ತಾನೆ.

ಹೀಗೆ ಪರಮೇಶ್ವರನು ನಿತ್ಯಸಿದ್ಧನಾಗಿ ಕರ್ಮಫಲವನ್ನು ಕೊಡುವನೆಂಬ ಭರವಸೆಯಿರುವದರಿಂದಲೇ ಶ್ರುತಿಯಲ್ಲಿ ಶ್ರದ್ಧೆಯಿಟ್ಟಿರುವ ಜನರು ಕರ್ಮಗಳಲ್ಲಿ ತೊಡಗುತ್ತಿದಾರೆ ಎಂಬುದು ಶ್ಲೋಕದ ಅಭಿಪ್ರಾಯವು.

**ಕ್ರಿಯಾದಕ್ಷೋ ದಕ್ಷಃ ಕ್ರತುಪತಿರಧೀಶಸ್ತನುಭೃತಾ-**
**ಮೃಷೀಣಾಮಾರ್ತ್ವಿಜ್ಯಂ ಶರಣದ ಸದಸ್ಯಾಃ ಸುರಗಣಾಃ ।**
**ಕ್ರತುಭ್ರೇಷಸ್ತ್ವತ್ತಃ ಕ್ರತುಫಲವಿಧಾನವ್ಯಸನಿನೋ**
**ಧ್ರುವಂ ಕರ್ತುಃ ಶ್ರದ್ಧಾವಿಧುರಮಭಿಚಾರಾಯ ಹಿ ಮಖಾಃ ॥ ೨೧ ॥**

[ಪ್ರತಿಪದಾರ್ಥ :- ಶರಣದ- ಶರಣದಾಯಕನೆ, ಕ್ರಿಯಾದಕ್ಷಃ- ಕರ್ಮದಲ್ಲಿ ಕುಶಲನೂ ತನುಭೃತಾಮ್- ಶರೀರಿಗಳಿಗೆ ಅಧೀಶಃ- ಒಡೆಯನೂ ಆದ ದಕ್ಷಃ- ದಕ್ಷನು ಕ್ರತುಪತಿಃ- ಯಜಮಾನನು. ಋಷೀಣಾಮ್- ಋಷಿಗಳದು ಆರ್ತ್ವಿಜ್ಯಮ್- ಋತ್ವಿಕ್ತ್ವವು. ಸುರಗಣಾಃ- ದೇವತೆಗಳ ಸಮೂಹವು ಸದಸ್ಯಾಃ- ಸಭ್ಯರು. ಕ್ರತುಫಲವಿಧಾನವ್ಯಸನಿನಃ- ಯಜ್ಞದ ಫಲವನ್ನು ಉಂಟುಮಾಡುವದರಲ್ಲಿಯೇ ತಾತ್ಪರ್ಯವುಳ್ಳ ತ್ವತ್ತಃ- ನಿನ್ನಿಂದ ಕ್ರತುಭ್ರೇಷಃ- ಯಜ್ಞದ ನಾಶವು! ಧ್ರುವಮ್- ನಿಶ್ಚಯವಾಗಿ ಶ್ರದ್ಧಾವಿಧುರಮ್- ಶ್ರದ್ಧಾರಹಿತವಾಗಿ (ಮಾಡಿದ) ಮಖಾಃ- ಯಜ್ಞಗಳು ಕರ್ತುಃ- ಮಾಡಿದವನಿಗೆ ಅಭಿಚಾರಾಯ ಹಿ- ಅನರ್ಥಕ್ಕೇ ಆಗುವವು.]

೨೧. ಕರ್ಮದಲ್ಲಿ ದಕ್ಷನಾಗಿಯೂ ಪ್ರಜೆಗಳಿಗೆಲ್ಲ ಅಧೀಶ್ವರನಾಗಿಯೂ ಇರುವ ದಕ್ಷನೇ ಯಜಮಾನನು; ಭೃಗ್ವಾದಿಋಷಿಗಳೇ ಯಜ್ಞದ ಋತ್ವಿಜರು ; ಬ್ರಹ್ಮಾದಿದೇವಗಣಗಳೇ ಸದಸ್ಯರು. ಹೀಗಿದ್ದರೂ ಯಾಗದ ಫಲವನ್ನು ಕೊಡುವದರಲ್ಲಿಯೇ ತಾತ್ಪರ್ಯ

ವುಳ್ಳ ನಿನ್ನಿಂದ ಯಜ್ಞದ ನಾಶವಾಯಿತಲ್ಲ! ಶ್ರದ್ಧಾರಹಿತವಾದ ಯಾಗಗಳು ಯಾಗಕರ್ತೃವಿಗೆ ಅನರ್ಥವನ್ನೇ ಉಂಟುಮಾಡುವ ವೆಂಬುದು ನಿಜವೆಂದು ಹೇಳಬೇಕು.

## ವಿವರಣೆ

ಪೂರ್ವದಲ್ಲಿ ದಕ್ಷಪ್ರಜಾಪತಿಯು, ರುದ್ರನು ತನ್ನ ಅಳಿಯನು ಮಾತ್ರ ಎಂದು ಅನಾದರದಿಂದ ರುದ್ರರಹಿತವಾಗಿಯೇ ಯಾಗವನ್ನು ಮಾಡುವ ಸಂಕಲ್ಪವನ್ನು ತೊಟ್ಟನು. ಸತೀದೇವಿಯು ತನಗಾದ ಅಪಮಾನವನ್ನು ಸಹಿಸಲಾರದೆ ಅಗ್ನಿಕುಂಡದಲ್ಲಿ ಬಿದ್ದು ದೇಹತ್ಯಾಗವನ್ನು ಮಾಡಿದಳು. ಈಶ್ವರನಿಗೆ ಈ ಸಮಾಚಾರವೆಲ್ಲ ತಿಳಿಯಲು ಕೋಪದಿಂದ ಜಟೆಯನ್ನು ಭೂಮಿಗೆ ಅಪ್ಪಳಿಸಿದನು. ಅಲ್ಲಿ ಆವಿರ್ಭವಿಸಿದ ವೀರಭದ್ರನು ಆತನ ಅಪ್ಪಣೆಯನ್ನು ಪಡೆದು ಬಂದು ದಕ್ಷನ ಯಜ್ಞವನ್ನು ಎಲ್ಲಾ ವಿಧದಿಂದಲೂ ನಾಶಗೊಳಿಸಿದನು– ಎಂದು ಪೌರಾಣಿಕಕಥೆ.

ಈ ಕಥೆಯನ್ನು ಅವಲಂಬಿಸಿ ಪುಷ್ಪದಂತನು ಹೇಳುತ್ತಾನೇನೆಂದರೆ, ಯಜ್ಞವನ್ನು ಮಾಡುವದಕ್ಕೆ ನಿಂತಿದ್ದ ದಕ್ಷನು ಯಜ್ಞವಿದ್ಯೆಯನ್ನು ಬಲ್ಲವನೂ ಸಮಸ್ತಪ್ರಜೆಗಳಿಗೂ ಒಡೆಯನೂ ಯಾಗಕರ್ಮದಲ್ಲಿ ಸಾಮರ್ಥ್ಯವುಳ್ಳವನೂ ಆಗಿದ್ದವನು. ಕರ್ಮವನ್ನು ಮಾಡಿಸುವದಕ್ಕೆ ಒಪ್ಪಿದ್ದ ಋತ್ವಿಜರೋ ಎಂದರೆ ತ್ರಿಕಾಲಜ್ಞರಾದ ಭೃಗ್ವಾದಿಗಳು. ಬ್ರಹ್ಮನೇ ಮುಂತಾದ ದೇವತೆಗಳು ಸದಸ್ಯರಾಗಿ ಉಪದ್ರಷ್ಟೃಗಳಾಗಿರುತ್ತಿದ್ದರು. ಹೀಗೆ ಯಜ್ಞವು ಪರಿಪೂರ್ಣವಾಗಿ ಫಲವನ್ನು ಕೊಡುವದಕ್ಕೇ ತಕ್ಕದ್ದಾಗಿದ್ದರೂ ಅದು ಮಧ್ಯದಲ್ಲಿಯೇ ಮುರಿದುಬಿತ್ತು. ಈ ಯಜ್ಞಭಂಗವಾದದ್ದಾದರೂ ಯಾರಿಂದ? ಯಾವನು ಯಾಗದ ಫಲವನ್ನು ಕೊಡುವದರಲ್ಲಿಯೇ ಅಭಿಪ್ರಾಯವುಳ್ಳವನೋ ಆ ಪರಮೇಶ್ವರನಿಂದ.

ಈ ಯಾಗದಲ್ಲಿ ಮಿಕ್ಕ ಸಾಮಗ್ರಿಗಳು ಎಲ್ಲವೂ ಇರುತ್ತಿದ್ದರೂ ಕರ್ಮಾಧ್ಯಕ್ಷನಾದ ಪರಮೇಶ್ವರನಲ್ಲಿ ದಕ್ಷನಿಗೆ ಶ್ರದ್ಧಾಭಕ್ತಿಗಳು ಮಾತ್ರ ಇರಲಿಲ್ಲ. ಇಂಥ ದಾಂಭಿಕವಾದ ಯಜ್ಞಗಳು ತಮ್ಮ ಫಲವನ್ನು ಕೊಡುವದಿಲ್ಲವೆಂ

ಬುದುಹಾಗಿರಲಿ, ಯಜಮಾನನಿಗೆ ಅನರ್ಥವನ್ನೂ ಉಂಟುಮಾಡುತ್ತವೆ ಎಂಬು ದಕ್ಕೆ ದಕ್ಷಪ್ರಜಾಪತಿಯೇ ಸಾಕ್ಷಿ. ಏಕೆಂದರೆ ಯಜ್ಞವೆಲ್ಲವೂ ಧ್ವಂಸವಾದ ಬಳಿಕ ದಕ್ಷನ ತಲೆಯನ್ನೂ ಕತ್ತರಿಸಲಾಯಿತು. ಆದರೆ ದೇವತೆಗಳೂ ಋಷಿಗಳೂ ಭಯಭಕ್ತಿಗಳಿಂದ ಸ್ತೋತ್ರಮಾಡಲಾಗಿ ಕರುಣಾಮಯನಾದ ಮಹೇಶ್ವರನು ಆ ದಕ್ಷನನ್ನು ಮತ್ತೂ ಅನುಗ್ರಹಿಸಿದನು. ಒಂದು ಟಗರಿನ ತಲೆಯನ್ನು ಅವನಿಗೆ ಹೊಸದಾಗಿ ಸೇರಿಸಿದರೆ ಅವನು ಬದುಕಿಕೊಳ್ಳುವನು ಎಂದು ವರವನ್ನು ಕೊಟ್ಟನು. ದಕ್ಷನ ಅಹಂಕಾರವು ಮಟ್ಟಾಯಿತೆಂಬುದರ ಸೂಚಕವಾಗಿ ಅವನು ಇನ್ನುಮೇಲೆ ಎಂದೆಂದಿಗೂ ಕತ್ತುಬಗ್ಗಿಸಿಕೊಂಡೇ ಇರಬೇಕಾಯಿತು!

ಹಿಂದಿನ ಶ್ಲೋಕದಲ್ಲಿ ಕರ್ಮದ ಫಲವನ್ನು ಈಶ್ವರನು ಕೊಡುವನೆಂದು ಶ್ರುತಿಸ್ಮೃತಿನ್ಯಾಯಗಳ ಆಧಾರದಿಂದ ಹೇಗೆ ತಿಳಿಸಲಾಗಿದೆಯೋ ಹಾಗೆಯೇ ಅಧರ್ಮದ ಫಲವೂ ಈಶ್ವರನಿಂದಲೇ ಆಗುತ್ತದೆ ಎಂಬುದನ್ನು ಈ ಶ್ಲೋಕ ದಲ್ಲಿ ತಿಳಿಸಿಕೊಟ್ಟಿರುತ್ತದೆ. ಹೀಗೆ ಶುಭಾಶುಭಕರ್ಮಗಳ ಫಲವನ್ನು ಕೊಡುವದರಿಂದ ಈಶ್ವರನು ಪಕ್ಷಪಾತಿಯೆಂದೂ ನಿರ್ದಯನೆಂದೂ ಆಗುವ ದಿಲ್ಲವೆ? –ಎಂದು ಶಂಕಿಸಬಾರದು. ಏಕೆಂದರೆ ಅವರವರ ಕರ್ಮಕ್ಕೆ ಅನುಗುಣವಾಗಿಯೇ ಆಯಾ ಫಲವನ್ನು ಈಶ್ವರನು ಕೊಡುತ್ತಾನೆ ಎಂದು ತಿಳಿಯಬೇಕು.

## ಕ್ಷೇ ಪ ಕ ಶ್ಲೋ ಕ

ಕೆಲವು ಮುದ್ರಿತಪುಸ್ತಕಗಳಲ್ಲಿ ಈ ಶ್ಲೋಕವು ಹೆಚ್ಚಾಗಿರುವದು ಕಂಡುಬರುತ್ತದೆ :

ಸತಾಂ ಪ್ರವರ್ತ್ಯ ತ್ಯಕ್ತ್ವಾ ಶ್ರುತಿಸಮಧಿಗಮ್ಯಂ ಸಹಭುವಂ
ಘೃಣಾಮುಪ್ಯನ್ಮೂಲ್ಯ ಸ್ವಜನವಿಷಯಸ್ನೇಹಗುಣಿತಾಮ್ ।
ದ್ವಿಜಃ ಕೃನ್ತನ್ ಪಾದೇ ಪಿತರಮಪರಾದ್ಧಂ ತ್ವಯಿ ವಿಭೋ
ಮನುಷ್ಯತ್ವಂ ಸದ್ಯಸ್ತ್ರಿದಶಪರಿಣಾಮೇನ ವಿಜಹೌ ॥ ೨೨ ॥

[ಪ್ರತಿಪದಾರ್ಥ: ವಿಭೋ- ವ್ಯಾಪಕನಾದ ಪರಮೇಶ್ವರನೆ, ದ್ವಿಜಃ- ಬ್ರಾಹ್ಮಣನು ಶ್ರುತಿಸಮಧಿಗಮ್ಯಾಮ್- ವೇದದಿಂದ ತಿಳಿಯಬೇಕಾಗಿರುವ ಸಹಭುವಮ್- ಸಹಜವಾದ ಸತಾಂ ವರ್ತ್ಮ- ಸತ್ಪುರುಷರ ಮಾರ್ಗವನ್ನು ತ್ಯಕ್ತ್ವಾ- ಬಿಟ್ಟು ಸ್ವಜನವಿಷಯಸ್ನೇಹ ಗುಣಿತಾಮ್- ಸ್ವಜನರ ಸಂಬಂಧವಾದ ಪ್ರೇಮದಿಂದ ಹೆಚ್ಚಿದ ಘೃಣಾಮಪಿ- ದಯೆಯನ್ನು ಕೂಡ ಉನ್ಮೂಲ್ಯ- ಕಿತ್ತುಹಾಕಿ ತ್ವಯಿ- ನಿನ್ನಲ್ಲಿ ಅಪರಾದ್ಧಮ್-ಅಪರಾಧ ವನ್ನು ಮಾಡಿದ ಪಿತರಮ್- ತಂದೆಯನ್ನು ಪಾದೇ- ಪಾದದಲ್ಲಿ ಕೃಂತನ್- ಕತ್ತರಿಸುವವ ನಾಗಿ ಸದ್ಯಃ- ಕೂಡಲೆ ತ್ರಿದಶಪರಿಣಾಮೇನ- ದೇವತೆಯಾಗಿ ಪರಿಣಮಿಸುವದರಿಂದ ಮನುಷ್ಯತ್ವಮ್- ಮಾನುಷಭಾವವನ್ನು ವಿಜಹೌ- ಬಿಟ್ಟುಬಿಟ್ಟನು.]

೨೧. (ಅ). ಬ್ರಾಹ್ಮಣನೊಬ್ಬನು ವೈದಿಕಮಾರ್ಗವನ್ನು ಬಿಟ್ಟು (ಅಸಹ್ಯವಸ್ತುವಿನಲ್ಲಿ ಈಶ್ವರನನ್ನು ಆವಾಹನೆಮಾಡುತ್ತಿರಲು ತಂದೆಯು ಕೋಪದಿಂದ ಆ ಲಿಂಗವನ್ನು ಕಾಲಿನಿಂದ ಒದೆದನು). ಮಗನು ತಂದೆಯೆಂಬ ಅಭಿಮಾನವನ್ನು ತೊರೆದು ಲಿಂಗವನ್ನು ಒದೆದ ಅಪರಾಧಕ್ಕಾಗಿ ತಂದೆಯ ಆ ಕಾಲನ್ನೇ ಕತ್ತರಿಸಿಬಿಟ್ಟನು. ಬ್ರಾಹ್ಮಣನ ಭಕ್ತಿಯ ಭರಕ್ಕೆ ಮೆಚ್ಚಿದ ಶಿವನು ಅವನಿಗೆ ಪ್ರಸನ್ನನಾಗಿ ಕೂಡಲೆ ಅವನಿಗೆ ದೇವತ್ವವನ್ನು ಅನುಗ್ರಹಿಸಿದನು, ಅವನಿಗೆ ಮನುಷ್ಯತ್ವವು ತಪ್ಪಿಹೋಯಿತು- ಎಂಬುದು ಶ್ಲೋಕದ ಅಭಿಪ್ರಾಯ.

ಈ ಶ್ಲೋಕವು ನಿಜವಾಗಿ ಈ ಸ್ತೋತ್ರಕ್ಕೆ ಸೇರಿದ್ದಲ್ಲ. ಪೀಠಿಕೆಯನ್ನು ನೋಡಿರಿ.

**ಪ್ರಜಾನಾಥಂ ನಾಥ ಪ್ರಸಭಮಭಿಕಂ ಸ್ವಾಂ ದುಹಿತರಂ**
**ಗತಂ ರೋಹಿದ್ಭೂತಾಂ ರಿರಮಯಿಷುಮೃಷ್ಯಸ್ಯ ವಪುಷಾ**
**ಧನುಃಪಾಣೇರ್ಯಾತಂ ದಿವಮಪಿ ಸಪತ್ರಾಕೃತಮಮುಂ**
**ತ್ರಸಂತಂ ತೇಽದ್ಯಾಪಿ ತ್ಯಜತಿ ನ ಮೃಗವ್ಯಾಧರಭಸಃ** ॥ ೨೩ ।

[ಪ್ರತಿಪದಾರ್ಥ:- ನಾಥ- ಜಗನ್ನಿಯಾಮಕನೆ, ಅಭಿಕಮ್- ಕಾಮುಕನಾದ (ಕಾರಣ) ರೋಹಿದ್ಭೂತಾಮ್- ಹೆಣ್ಣುಹುಲ್ಲೆಯಾದ ಸ್ವಾಮ್- ತನ್ನ ದುಹಿತರಮ್-

ಮಗಳನ್ನು ಋಷ್ಯಸ್ಯ- ಜಿಂಕೆಯು ವಪುಷಾ- ರೂಪದಿಂದ ಪ್ರಸಭಮ್- ಬಲಾತ್ಕಾರದಿಂದ ರಿರಮಯಿಷುಮ್– ರಮಿಸಬೇಕೆಂದು ಬಯಸಿದವನಾಗಿ ಗತಮ್– ಅವಳಲ್ಲಿಗೆ ಬಂದ ಪ್ರಜಾನಾಥಮ್– ಬ್ರಹ್ಮನನ್ನು ಧನುಃಪಾಣೇಃ– ಬಿಲ್ಲನ್ನು ಕೈಯಲ್ಲಿ ಹಿಡಿದ ತೇ– ನಿನ್ನ ಮೃಗವ್ಯಾಧರಭಸಃ– ಮೃಗದ ಬೇಟೆಗಾರನ ರಭಸವು ಸಪತ್ರಾಕೃತಮ್– ಬಾಣದಿಂದ ವ್ಯಥೆಗೊಂಡ ತ್ರಸನ್ತಮ್– ಹೆದರಿದ ಅಮುಮ್– ಅವನನ್ನು ದಿವಂ ಯಾತಮಪಿ– ಆಕಾಶವನ್ನು ಸೇರಿದವನಾದರೂ ಅದ್ಯಾಪಿ– ಈಗಲೂ ನ ತ್ಯಜತಿ– ಬಿಡುತ್ತಿಲ್ಲ.]

೨೨. ಎಲೈ ಜಗನ್ನಿಯಾಮಕನೆ, ಹೆಣ್ಣುಹುಲ್ಲೆಯ ರೂಪವನ್ನು ತಳೆದ ತನ್ನ ಮಗಳನ್ನೇ ರಮಿಸುವೆನೆಂದು ಹತ್ತಿರಕ್ಕೆ ಬಂದ ಮೃಗ ರೂಪಿಯಾದ ಪ್ರಜಾಪತಿಯನ್ನು ಬಿಲ್ಲುಹಿಡಿದು ಶರವನ್ನು ಬಿಟ್ಟು ವ್ಯಥೆಗೊಳಿಸಿದ ನಿನ್ನ ಬೇಟೆಯ ರಭಸವು, ಅವನು ಅಂಜಿಕೆಯಿಂದ ಮೇಲಿನ ಆಕಾಶವನ್ನು ಸೇರಿದರೂ, ಇನ್ನೂ ತಪ್ಪಿರುವದಿಲ್ಲ.

## ವಿವರಣೆ

ಪ್ರಜಾಪತಿಯು ಒಮ್ಮೆ ತನ್ನ ಮಗಳಾದ ಸಂಧ್ಯೆಯು ಸುರೂಪಿಣಿಯಾದ್ದರಿಂದ ಕಾಮವಶನಾಗಿ ಆಕೆಯನ್ನು ಕೂಡುವದಕ್ಕೆ ಹೊರಟನು. ಅವಳು ಲಜ್ಜೆಯಿಂದ ಹೆಣ್ಣುಹುಲ್ಲೆಯ ರೂಪವನ್ನು ಧರಿಸಿದಳು. ಆಗ ಬ್ರಹ್ಮನು ತಾನೂ ಮೃಗರೂಪಧರನಾಗಿ ಆಕೆಯನ್ನು ಕೂಡುವದಕ್ಕೆ ಉದ್ಯುಕ್ತನಾದನು. ಧರ್ಮಪ್ರವರ್ತಕನಾದ ಪ್ರಜಾಪತಿಯು ಈ ಕುಕರ್ಮವನ್ನು ಮಾಡುವದನ್ನು ಕಂಡು, ಜಗನ್ನಿಯಾಮಕನಾದ ಮಹಾದೇವನು ಇವನಿಗೆ ತಕ್ಕ ದಂಡನೆಯನ್ನು ಮಾಡಬೇಕೆಂದು ಪಿನಾಕಧನುಸ್ಸಿನಿಂದ ಒಂದು ಬಾಣವನ್ನು ಬಿಟ್ಟನು. ಆ ಬಾಣದ ಹೊಡೆತದಿಂದ ವ್ಯಥೆಗೊಂಡು ಲಜ್ಜಿತನಾದ ಬ್ರಹ್ಮನು ಮೃಗಶಿರಸ್ಸೆಂಬ ನಕ್ಷತ್ರದ ರೂಪವನ್ನು ಧರಿಸಿದನು. ಆಗ ಶ್ರೀರುದ್ರನ ಬಾಣವೂ ಆರ್ದ್ರಾನಕ್ಷತ್ರದ ರೂಪವನ್ನು ಧರಿಸಿ ಅವನ ಹಿಂದೆಯೇ ನಿಂತುಕೊಂಡಿತು. ಹೀಗೆ ಆರ್ದ್ರಾಮೃಗಶಿರಸ್ಸುಗಳು ಯಾವಾಗಲೂ ಒಂದರ ಹಿಂದೊಂದು ಇದ್ದುಕೊಂಡೇ ಇರುವದರಿಂದ ಈಗಲೂ ಮೃಗವ್ಯಾಧರಭಸವು ನಿಂತಿಲ್ಲ ಎಂದು ಸ್ತೋತ್ರದಲ್ಲಿ ಹೇಳಿರುತ್ತದೆ. ಈ ಕಥೆಗೆ ಮೂಲವಾದ ಅರ್ಥವಾದವು ಐತರೇಯಬ್ರಾಹ್ಮಣದಲ್ಲಿ (೧೩–೯)

ಬಂದಿರುತ್ತದೆ. ಅದರಲ್ಲಿ ಪ್ರಜಾಪತಿಯು ಮಾಡಬಾರದ ಕೆಲಸವನ್ನು ಮಾಡಿರುವವರಿಂವ ದೇವತೆಗಳು ಅವನನ್ನು ದಂಡಿಸುವದಕ್ಕೆ ಸಮರ್ಥವಾದ ಘೋರತಮವಾದ ತನುಗಳುಳ್ಳ ಭೂತಪತಿಯ ಶರೀರವನ್ನು ತಮ್ಮ ಘೋರ ತನುಗಳನ್ನೆಲ್ಲ ಸೇರಿಸಿ-ಏರ್ಪಡಿಸಿದರು ಎಂದು ಹೇಳಿರುತ್ತದೆ. ರುದ್ರನು ಹೊಡೆದ ಬಾಣದಿಂದ ಪೀಡಿತನಾದ ಪ್ರಜಾಪತಿಯು ಮೇಲಕ್ಕೆ ಹಾರಿ ಈಗಲೂ ಮೃಗಶಿರೋನಕ್ಷತ್ರದ ರೂಪದಿಂದ ತೋರಿಕೊಳ್ಳುತ್ತಿದಾನೆಂದೂ ಈಗಲೂ ಮೃಗವ್ಯಾಧರೂಪವಾದ ನಕ್ಷತ್ರವಾಗಿರುತ್ತಾನೆಂದೂ ಹೆಣ್ಣು ಹುಲ್ಲೆಯ ರೂಪದ ಬ್ರಹ್ಮಪುತ್ರಿಯು ರೋಹಿಣೀನಕ್ಷತ್ರರೂಪಳಾಗಿರುವಳೆಂದೂ ಅಲ್ಲಿ ತಿಳಿಸಿರುತ್ತದೆ.

ಅಂತೂ ಪರಮೇಶ್ವರನು ಧರ್ಮಕ್ಕೆ ತಕ್ಕ ಫಲವನ್ನು ಕೊಡುವದರಲ್ಲಿ ಎಷ್ಟು ಬದ್ಧಾದರನೋ ಅಧರ್ಮಿಗಳ ದಂಡನೆಯಲ್ಲಿಯೂ ಅಷ್ಟೇ ತತ್ಪರನಾಗಿರುವನೆಂಬುದು ಈ ಶ್ಲೋಕದಿಂದ ಹೊರಡುವ ಅಭಿಪ್ರಾಯವು.

ಸ್ವಲಾವಣ್ಯಾಶಂಸಾಧೃತಧನುಷಮಹ್ನಾಯ ತೃಣವತ್
ಪುರಃ ಪ್ಲುಷ್ಟಂ ದೃಷ್ಟ್ವಾ ಪುರಮಥನ ಪುಷ್ಪಾಯುಧಮಪಿ ।
ಯದಿ ಸ್ತ್ರೈಣಂ ದೇವೀ ಯಮನಿರತ ದೇಹಾರ್ಧಘಟನಾ-
ದವೈತಿ ತ್ವಾಮದ್ಧಾ ಬತ ವರದ ಮುಗ್ಧಾ ಯುವತಯಃ ॥ ೨೩ ॥

[ಪ್ರತಿಪದಾರ್ಥ: ಪುರಮಥನ- ತ್ರಿಪುರಗಳನ್ನು ನಾಶಪಡಿಸಿದವನೆ, ಯಮನಿರತ- ಮನೋನಿಗ್ರಹದಲ್ಲಿ ನಿರತನಾದವನೆ, ವರದ- ವರಪ್ರದನೆ, ಸ್ವಲಾವಣ್ಯಾಶಂಸಾಧೃತಧನುಷಮ್- ತನ್ನ ಸೌಂದರ್ಯಾತಿಶಯದಿಂದಾದ ಭರವಸೆಯಿಂದ ಬಿಲ್ಲನ್ನು ಹಿಡಿದುಕೊಂಡಿರುವ ಪುಷ್ಪಾಯುಧಮ್-ಹೂಬಾಣನಾದ ಮನ್ಮಥನನ್ನು ಅಹ್ನಾಯ-ಬೇಗನೆ ಪುರಃ-ಎದುರಿಗೆ ತೃಣವತ್- ಹುಲ್ಲುಕಡ್ಡಿಯಂತೆ ಪ್ಲುಷ್ಟಮ್- ಸುಡಲ್ಪಟ್ಟವನನ್ನಾಗಿ ದೃಷ್ಟ್ವಾಪಿ- ನೋಡಿಯೂ ದೇವೀ- ಪಾರ್ವತಿಯು ದೇಹಾರ್ಧಘಟನಾತ್- ಅರ್ಧಶರೀರವನ್ನು ಹೊಂದಿದ ಕಾರಣದಿಂದ ತ್ವಾಮ್- ನಿನ್ನನ್ನು ಸ್ತ್ರೈಣಮ್- ಸ್ತ್ರೀಸಕ್ತನನ್ನಾಗಿ ಅವೈತಿ ಯದಿ- ತಿಳಿಯುತ್ತಾಳಾದರೆ ಬತ- ಅಯ್ಯೋ ಯುವತಯಃ- ತರುಣಿಯರು ಅದ್ಧಾ- ಸ್ಪಷ್ಟವಾಗಿ ಮುಗ್ಧಾಃ- ಮೂಢೆಯರೇ.]

೨೩. ಎಲೈ ಪುರಮಥನನೆ, ಪಾರ್ವತೀದೇವಿಯ ಲಾವಣ್ಯದ ಭರವಸೆಯಿಂದ ಧನುಸ್ಸನ್ನು ಹಿಡಿದು ಯೋಗೀಶ್ವರನಾದ ನಿನ್ನ ಎದುರಿಗೆ ನಿಂತಿದ್ದ ಮನ್ಮಥನನ್ನು ಹುಲ್ಲುಕಡ್ಡಿಯಂತೆ ಕ್ಷಣ ಮಾತ್ರದಲ್ಲಿ ನೀನು ಸುಟ್ಟಿದ್ದನ್ನು ಕಂಡುಕಂಡೂ ತನಗೆ ನಿನ್ನ ದೇಹದ ಅರ್ಧಭಾಗವು ದೊರೆತಿರುವದರಿಂದ ನೀನು ಸ್ತ್ರೀಸಕ್ತ ನೆಂದು ಆಕೆಯು ಭ್ರಮಿಸಿದರೆ, ಆಹಾ ! ಸ್ತ್ರೀಯರು ಮುಗ್ಧೆಯ ರೆಂಬುದು ಸ್ಪಷ್ಟವಾಯಿತು.

## ವಿವರಣೆ

ಒಮ್ಮೆ ಪರಮೇಶ್ವರನು ಯೋಗಾರೂಢನಾಗಿ ಹಿಮಾಲಯದಲ್ಲಿ ವಾಸಿ ಸುತ್ತಿರಲು, ಹಿಮವಂತನು ತನ್ನ ಮಗಳಾದ ಪಾರ್ವತಿಯನ್ನು ಆ ಶಿವನ ಸೇವೆಗೆ ನಿಯಮಿಸಿದ್ದನು. ತಾರಕಾಸುರನ ಬಾಧೆಯನ್ನು ತಾಳಲಾರದೆ ದೇವತೆಗಳು ಅವನನ್ನು ಕೊಲ್ಲುವ ಸೇನಾಪತಿಯು ಶಿವನಿಂದಲೇ ಹುಟ್ಟ ಬೇಕಾಗಿದೆಯೆಂದು ತಿಳಿದುಬಂದದ್ದರಿಂದ ಶಿವನಿಗೆ ಕಾಮೋದ್ರೇಕವಾಗುವಂತೆ ಮಾಡೆಂದು ಮನ್ಮಥನನ್ನು ಬೇಡಿಕೊಂಡರು. ಲಾವಣ್ಯವತಿಯಾದ ಪಾರ್ವತಿ ಯು ಹತ್ತಿರದಲ್ಲಿಯೇ ಇರುವದರಿಂದ ಯಮನಿಯಮಾದಿಗಳಲ್ಲಿ ಅಗ್ರಗಣ್ಯ ನಾದ ಶಿವನನ್ನು ಕೂಡ ಈ ಮೂಲಕ ವಶಗೊಳಿಸಿಕೊಳ್ಳಬಹುದು ಎಂಬ ಭರವಸೆಯಿಂದ ಮನ್ಮಥನು ಹೂಬಾಣಗಳನ್ನು ಬಿಡಲು ಅನುವಾದನು. ಆ ಸಂದರ್ಭದಲ್ಲಿ ಈಶ್ವರನು ಬಳಿಯಲ್ಲಿದ್ದ ಪಾರ್ವತಿಯನ್ನು ಪ್ರೇಮಪೂರ್ವಕ ವಾಗಿ ನೋಡಿದನು. ಆದರೆ ತನ್ನ ತಪಸ್ಸಿಗೆ ವಿಘ್ನವನ್ನು ಮಾಡಿದವರು ಯಾರೆಂಬುದನ್ನು ಅರಿತ ಆ ಮಹಾದೇವನು ಕೂಡಲೆ ತನ್ನ ಹಣೆಗಣ್ಣಿನ ಉರಿಯಿಂದ ಆ ಮನ್ಮಥನನ್ನು ಸುಟ್ಟು ಉರುಹಿದನು. ಮುಂದೆ ಪಾರ್ವತೀ ದೇವಿಯನ್ನು ಮದುವೆಯಾದ ಶಿವನು ಆಕೆಯ ತಪಸ್ಸಿಗೆ ಮೆಚ್ಚಿ ತನ್ನ ಶರೀರಾರ್ಧವನ್ನೇ ಆಕ್ರಮಿಸಿಕೊಳ್ಳುವ ವರವನ್ನು ಆಕೆಗೆ ದಯಪಾಲಿಸಿದನು —ಎಂದು ಪುರಾಣದ ಕಥೆ.

ಇಲ್ಲಿ ಪರಮೇಶ್ವರನು ಹೀಗೆ ಉಮಾರ್ಧಶರೀರನಾದರೂ ಅವನ ವಿರಕ್ತಿಯು ಉತ್ಕಟವಾಗಿಯೇ ಇರುತ್ತದೆ ಎಂಬುದನ್ನು ಕವಿಯು ತಿಳಿಸಿರುತ್ತಾನೆ. ಪಾರ್ವತಿಗೆ ದೇಹಾರ್ಧಯೋಗವನ್ನು ಅನುಗ್ರಹಿಸಿದ್ದು ತಪಸ್ಸಿಗೆ ಮೆಚ್ಚಿಯೇ ಹೊರತು ಆಕೆಯ ಲಾವಣ್ಯಕ್ಕೆ ಸೋತು ಹಾಗೆ ಮಾಡಿದ್ದಲ್ಲ. ಏಕೆಂದರೆ ಸಾಮಾನ್ಯಜನರಂತೆ ಮನ್ಮಥನ ಬಾಣಕ್ಕೆ ವಶನಾಗದೆ ಆ ಮನ್ಮಥನನ್ನೇ ಸುಟ್ಟ ಮಹಾತಪಸ್ವಿಯು ಆತನು. ಯೋಗೀಶ್ವರನಾದ ಆತನು ಹೇಗೆತಾನೆ ಕಾಮಮೋಹಿತನಾದಾನು? –ಎಂದು ಭಾವ.

ಸ್ಮಶಾನೇಷ್ವಾಕ್ರೀಡಾ ಸ್ಮರಹರ ಪಿಶಾಚಾಃ ಸಹಚರಾ-
ಶ್ಚಿತಾಭಸ್ಮಾಲೇಪಃ ಸ್ರಗಪಿ ನೃಕರೋಟೀಪರಿಕರಃ ।
ಅಮಙ್ಗಲ್ಯಂ ಶೀಲಂ ತವ ಭವತು ನಾಮೈವಮಖಿಲಂ
ತಥಾಪಿ ಸ್ಮರ್ತೄಣಾಂ ವರದ ಪರಮಂ ಮಙ್ಗಲಮಸಿ ॥ ೨೪ ॥

[ಪ್ರತಿಪದಾರ್ಥ : ಸ್ಮರಹರ- ಮನ್ಮಥನಾಶಕನೆ, ವರದ- ಇಷ್ಟಾರ್ಥದಾಯಕನೆ, ಸ್ಮಶಾನೇಷು– ಸುಡುಗಾಡುಗಳಲ್ಲಿ ಆಕ್ರೀಡಾ- ವಿಹಾರವು. ಪಿಶಾಚಾಃ– ಪ್ರೇತಗಳು ಸಹಚರಾಃ-ಒಡನಾಡಿಗಳು. ಚಿತಾಭಸ್ಮಾಲೇಪಃ-ಚಿತೆಗಳ ಬೂದಿಯ ಬಳಿತವು. ನೃಕರೋಟೀಪರಿಕರಃ– ಮನುಷ್ಯರ ತಲೆಬುರುಡೆಗಳ ಸಮೂಹವೇ ಸ್ರಗಪಿ– ಮಾಲಿಕೆಯೂ (ಆಗಿದೆ). ತವ- ನಿನ್ನ ಶೀಲಮ್- ನಡವಳಿಕೆಯು ಅಖಿಲಮ್- ಎಲ್ಲವೂ ಏವಮ್- ಹೀಗೆ ಅಮಂಗಲ್ಯಮ್- ಮಂಗಲವಲ್ಲದ್ದೇ ಭವತು ನಾಮ- ಆಗಿದ್ದರೆ ಇರಲಿ. ತಥಾಪಿ- ಹೀಗಿದ್ದರೂ ಸ್ಮರ್ತೄಣಾಮ್- ಸ್ಮರಿಸಿದವರಿಗೆ ಪರಮಂ ಮಙ್ಗಲಮ್– ಹೆಚ್ಚಿನ ಮಂಗಲವು ಅಸಿ- ಆಗಿರುತ್ತೀಯೆ.]

೨೪. ಎಲೈ ಕಾಮವೈರಿಯೆ, ಸುಡುಗಾಡುಗಳಲ್ಲಿ ವಿಹರಿಸುವದು, ಭೂತಪ್ರೇತಾದಿಗಳನ್ನು ಪರಿವಾರವಾಗಿ ಮಾಡಿಕೊಂಡಿರುವದು, ಶವಗಳನ್ನು ಸುಟ್ಟ ಬೂದಿಯನ್ನು ಮೈಗೆ ಬಳಿದುಕೊಂಡಿರುವದು, ರುಂಡಮಾಲಿಕೆಯನ್ನು ಕೊರಳಲ್ಲಿ ಧರಿಸಿರುವದು- ಇವೇ ಮುಂತಾದ ನಡವಳಿಕೆಯು ಅಮಂಗಲವಾಗಿದ್ದರೇನು? ಯಾರು ನಿನ್ನನ್ನು ಸ್ಮರಿಸುವರೋ ಅವರಿಗೆ ಪರಮಮಂಗಲಸ್ವರೂಪನಾಗಿರುವ ವರದನಲ್ಲವೆ, ನೀನು?

## ವಿವರಣೆ

ಭಗವಂತನು ಅತ್ಯಂತ ಅಮಂಗಲವಾದ ವಸ್ತುಗಳನ್ನೂ ಮಂಗಲವೆನಿಸ ಬಲ್ಲ ಮಹಾಮಹಿಮನು. ಜನರು ಅತ್ಯಂತ ಅಮಂಗಲರಾಗಿದ್ದರೂ ಆತನನ್ನು ಸ್ಮರಿಸಿದಮಾತ್ರದಿಂದ ಕಲ್ಯಾಣವನ್ನು ಪಡೆಯುವರು. ಸರ್ವವ್ಯಾಪಕನೂ ಸರ್ವಮಂಗಲಸ್ವರೂಪನೂ ಆದ ಆತನ ಲೀಲೆಯನ್ನು ಅರಿಯದವರು ಅವನನ್ನು ಅಮಂಗಲವೆಂದು ಭಾವಿಸುತ್ತಾರೆ.

**ಮನಃ ಪ್ರತ್ಯಕ್ಚಿತ್ತೇ ಸವಿಧಮವಧಾಯಾತ್ತಮರುತಃ**
**ಪ್ರಹೃಷ್ಯದ್ರೋಮಾಣಃ ಪ್ರಮದಸಲಿಲೋತ್ಸಙ್ಗಿತದೃಶಃ ।**
**ಯದಾಲೋಕ್ಯಾಹ್ಲಾದಂ ಹ್ರದ ಇವ ನಿಮಜ್ಯಾಮೃತಮಯೇ**
**ದಧತ್ಯನ್ತಸ್ತತ್ತ್ವಂ ಕಿಮಪಿ ಯಮಿನಸ್ತತ್ಕಿಲ ಭವಾನ್ ॥ ೨೫ ॥**

[ಪ್ರತಿಪದಾರ್ಥ : ಯಮಿನಃ- ಧ್ಯಾನಯೋಗಿಗಳು ಆತ್ತಮರುತಃ- ತೆಗೆದುಕೊಂಡ ವಾಯುಗಳುಳ್ಳವರಾಗಿ ಮನಃ- ಮನಸ್ಸನ್ನು ಪ್ರತ್ಯಕ್ಚಿತ್ತೇ- ಪ್ರತ್ಯಗಾತ್ಮನಲ್ಲಿರುವ ಚಿತ್ತದಲ್ಲಿ ಸವಿಧಮ್- ಸಪ್ರಕಾರವಾಗಿ ಅಥವಾ ಸಮೀಪವಾಗುವಂತೆ ಅವಧಾಯ- ಇಟ್ಟು ಯತ್- ಯಾವ ಕಿಮಪಿ ತತ್ತ್ವಮ್- ಒಂದಾನೊಂದು (ಅನಿರ್ವಚನೀಯ) ತತ್ತ್ವವನ್ನು ಅನ್ತಃ- ಒಳಗೆ ಆಲೋಕ್ಯ- ಕಂಡು ಪ್ರಹೃಷ್ಯದ್ರೋಮಾಣಃ- ಹೆಚ್ಚಾಗಿ ಉಬ್ಬಿದ ಮೈಗೂದಲುಳ್ಳವರಾಗಿ ಪ್ರಮದಸಲಿಲೋತ್ಸಙ್ಗಿತದೃಶಃ- ಆನಂದಬಾಷ್ಪಗಳಿಗೆ ಆಶ್ರಯವಾಗಿರುವ ಕಣ್ಣುಗಳುಳ್ಳವರಾಗಿ ಅಮೃತಮಯೇ- ಅಮೃತಮಯವಾದ ಹ್ರದೇ- ಮಡುವಿನಲ್ಲಿ ನಿಮಜ್ಯ ಇವ- ಮುಳುಗಿದವರಂತೆ ಆಹ್ಲಾದಮ್- ಆನಂದವನ್ನು ದಧತಿ- ಹೊಂದುತ್ತಾರೋ ತತ್- ಅದು ಭವಾನ್ ಕಿಲ- ನೀನೇ ಅಷ್ಟೆ?]

೨೫. ಯೋಗಿಗಳು ಪ್ರಾಣಾಯಾಮವನ್ನು ಮಾಡಿ ಮನಸ್ಸನ್ನು ಪ್ರತ್ಯಗ್ರೂಪನಾದ ಆತ್ಮನ ಸಾಮೀಪ್ಯವನ್ನು ಹೊಂದಿಸಿ ಯಾವ ವರ್ಣನಾತೀತವಾದ ತತ್ತ್ವವನ್ನು ಕಂಡುಕೊಂಡದ್ದರಿಂದ ಅಮೃತಮಯವಾದ ಮಡುವಿನಲ್ಲಿ ಮುಳುಗಿದವರಂತೆ ಆನಂದವನ್ನು ಹೊಂದಿ ರೋಮಾಂಚವನ್ನೂ ಆನಂದಬಾಷ್ಪವನ್ನೂ ಪಡೆಯುತ್ತಿರುವರೋ ಆ ತತ್ತ್ವವೇ ನೀನಷ್ಟೆ?

## ವಿವರಣೆ

ಸರ್ವರ ಪ್ರತ್ಯಗಾತ್ಮನಾಗಿರುವ ಪರಮಾರ್ಥತತ್ತ್ವವೇ ಪರಮೇಶ್ವರನು. ಆತನು ಆ ರೂಪದಲ್ಲಿ ನಿರ್ಗುಣನಾಗಿದ್ದರೂ ಯೋಗಿಗಳಾದವರು ಆತ್ಮದರ್ಶನದಿಂದ ಪರಮಾನಂದವನ್ನು ಹೊಂದುತ್ತಾರೆ.

ಹೊರಗಿನ ವಿಷಯಗಳಿಂದ ಇಂದ್ರಿಯಗಳನ್ನು ಹಿಂದಕ್ಕೆ ಸೆಳೆದುಕೊಳ್ಳುವದಕ್ಕೆ ಮುಂಚೆ ಯೋಗಿಗಳು ಪ್ರಾಣಾಯಾಮದಿಂದ ಮನಸ್ಸು ಬಹಿರ್ಮುಖವಾಗದಂತೆ ಮಾಡಿಕೊಳ್ಳುವರು. ಇಂದ್ರಿಯಗಳನ್ನು ಹಿಂದಕ್ಕೆ ಸೆಳೆದುಕೊಂಡು ಅಂತಃಕರಣವನ್ನು ಪ್ರತ್ಯಗಾತ್ಮನಲ್ಲಿಯೇ ನಿಲ್ಲಿಸಿಕೊಂಡು ಮತ್ತೇನನ್ನೂ ಚಿಂತಿಸದೆ ಇರುವರು. ಅಮೃತಮಯವಾದ ಮಡುವಿನಲ್ಲಿ ಮುಳುಗಿದವನು ಹೊರಗಿನ ಅರಿವೇ ತನಗಿಲ್ಲದೆ ಹೆಚ್ಚಿನ ಸುಖವನ್ನು ಅನುಭವಿಸುವಂತೆ ಪ್ರತ್ಯಗಾತ್ಮನಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಂಡ ಮಹಾತ್ಮರು ಇಂಥದ್ದೆಂದು ಮಾತಿನಿಂದ ಹೇಳುವದಕ್ಕಾಗಲಿ ಪ್ರತ್ಯಯಗಳಿಂದ ನಿರೂಪಿಸುವದಕ್ಕಾಗಲಿ ಆಗದಂಥ ವಿಲಕ್ಷಣವಾದ ಆನಂದವನ್ನು ಅನುಭವಿಸುತ್ತಾರೆ. ಈ ಆನಂದವು ಯಾರಿಗೆ ಅಳವಟ್ಟಿರುವದೋ ಅವರು ವ್ಯವಹಾರದಲ್ಲಿಯೂ ರೋಮಾಂಚ, ಆನಂದಬಾಷ್ಪ- ಮುಂತಾದ ಚಿಹ್ನೆಗಳಿಂದ ತಮ್ಮ ಆತ್ಮಾನಂದವನ್ನು ಹೊರಸೂಸುತ್ತಿರುವರು.

ಪರಮೇಶ್ವರನು ತನ್ನ ನಿಜವಾದ ರೂಪದಿಂದ ಆ ಯೋಗಿಗಳ ಆತ್ಮನೇ ಆಗಿರುವದರಿಂದ ನಿರತಿಶಯಾನಂದಸ್ವರೂಪನಾಗಿರುತ್ತಾನೆ. ಆದ್ದರಿಂದಲೇ ಆತ್ಮದರ್ಶನವನ್ನು ಮಾಡಿಕೊಂಡವರಿಗೆ ಇಂಥ ಆನಂದದ ಅನುಭವವಾಗುತ್ತದೆ.

ತ್ವಮರ್ಕಸ್ತ್ವಂ ಸೋಮಸ್ತ್ವಮಸಿ ಪವನಸ್ತ್ವಂ ಹುತವಹ-
ಸ್ತ್ವಮಾಪಸ್ತ್ವಂ ವ್ಯೋಮ ತ್ವಮು ಧರಣಿರಾತ್ಮಾ ತ್ವಮಿತಿ ಚ ।
ಪರಿಚ್ಛಿನ್ನಾಮೇವಂ ತ್ವಯಿ ಪರಿಣತಾ ಬಿಭ್ರತು ಗಿರಂ
ನ ವಿದ್ಮಸ್ತತ್ತತ್ತ್ವಂ ವಯಮಿಹ ತು ಯತ್ತ್ವಂ ನ ಭವಸಿ ॥ ೨೬ ॥

[ಪ್ರತಿಪದಾರ್ಥ : ಪರಿಣತಾಃ- ಪಂಡಿತರು ತ್ವಮ್- ನೀನು ಅರ್ಕಃ- ಸೂರ್ಯನು ತ್ವಮ್- ನೀನು ಸೋಮಃ- ಚಂದ್ರನು, ತ್ವಮ್- ನೀನು ಪವನಃ- ವಾಯುವು ಅಸಿ- ಆಗಿರುತ್ತೀಯೆ. ತ್ವಮ್- ನೀನು ಹುತವಹಃ- ಅಗ್ನಿಯು. ತ್ವಮ್- ನೀನು ಆಪಃ- ಅಪ್ಪು ತ್ವಮ್- ನೀನು ವ್ಯೋಮ- ಆಕಾಶವು. ತ್ವಮು- ನೀನೇ ಧರಣಿಃ- ಭೂಮಿಯು, ತ್ವಮ್ ನೀನು ಚ- ಮತ್ತು ಆತ್ಮಾ- ಆತ್ಮನು ಇತಿ- ಹೀಗೆಂದು ಏವಂ- ಪರಿಚ್ಛಿನ್ನಾಮ್- ಇಂತು ಅಳತೆಗೆ ಸಿಕ್ಕಿರುವ ಗಿರಮ್- ಮಾತನ್ನು ತ್ವಯಿ- ನಿನ್ನಲ್ಲಿ ಬಿಭ್ರತು- ಧರಿಸಿರಲಿ. ವಯಂ ತು- ನಾವಾದರೋ ಇಹ- ಇಲ್ಲಿ ತ್ವಮ್- ನೀನು ಯತ್- ಯಾವದು ನ ಭವಸಿ- ಆಗಿರುವದಿಲ್ಲವೋ ತತ್ ತತ್ತ್ವಮ್- ಆ ತತ್ತ್ವವನ್ನು ನ ವಿದ್ಮಃ- ಅರಿಯೆವು.]

೨೬. ನೀನು ಸೂರ್ಯನು, ನೀನು ಚಂದ್ರನು, ನೀನು ವಾಯುವಾಗಿರುವೆ, ನೀನು ಅಗ್ನಿಯು, ನೀನು ಅಪ್ಪು, ನೀನು ಆಕಾಶವು, ನೀನೇ ಭೂಮಿ, ನೀನು ಆತ್ಮನೇ –ಎಂದು ಹೀಗೆ ಪರಿಚ್ಛಿನ್ನವಾದ ರೂಪವನ್ನು ವರ್ಣಿಸುವ ಮಾತನ್ನು ಪಂಡಿತರಾದವರು ಆಡುತ್ತಿರಲಿ. ನಾವಾದರೋ ಈ ಜಗತ್ತಿನಲ್ಲಿ ನೀನು ಯಾವ ತತ್ತ್ವವಾಗಿಲ್ಲವೋ ಅದನ್ನು ಅರಿಯೆವು.

## ವಿವರಣೆ

ಸೂರ್ಯ, ಚಂದ್ರ, ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಯಜ್ಞದ ಯಜಮಾನನು– ಹೀಗೆ ಈ ಎಂಟೂ ರುದ್ರನ ಎಂಟು ಮೂರ್ತಿಗಳೆಂದು ಆಗಮಗಳಲ್ಲಿ ವರ್ಣಿಸಿರುತ್ತದೆ. ಈ ಅಷ್ಟಮೂರ್ತಿಗಳ ಹೆಸರನ್ನೂ ಮುಂದೆ (೨೮ನೆಯ ಶ್ಲೋಕದಲ್ಲಿ ಹೇಳಿರುವ) ಭವಾದಿನಾಮಗಳನ್ನೂ ನಮೋಂತವಾಗಿ ಪ್ರಯೋಗಿಸಿದರೆ ಎಂಟು ಮಂತ್ರಗಳಾಗುವವೆಂದು ಬಲ್ಲವರು ಹೇಳುತ್ತಾರೆ.

ಇದಿರಲಿ. ಈ ಅಷ್ಟಮೂರ್ತಿಗಳನ್ನು ಹೇಳಿರುವದು ಪರಮಾತ್ಮನು ಇಷ್ಟಿಷ್ಟೇ ರೂಪದಿಂದ ಇರುತ್ತಾನೆಂದು ಅಳತೆಮಾಡಿ ಹೇಳುವದಕ್ಕಲ್ಲ. ಪರಮಾತ್ಮನು ಸರ್ವಾತ್ಮಕನೆಂಬುದನ್ನು ಹೇಳುವದೇ ಇದರ ಗುರಿ.

ಈ ರಹಸ್ಯವನ್ನರಿಯದೆ ಕೆಲವರು ಶಿವನು ಸೂರ್ಯಾತ್ಮಕನು, ಚಂದ್ರಾತ್ಮಕನು –ಎಂದು ಮುಂತಾಗಿ ಪರಿಚ್ಛಿನ್ನವರ್ಣನೆಯನ್ನೇ ಮಾಡುತ್ತಾರೆ. ಆದರೆ ನಿಜವೇನೆಂದರೆ: ಪರಮೇಶ್ವರನು ಈ ರೂಪಗಳಲ್ಲಿ ಮಾತ್ರವೇ ಅಲ್ಲ, ಇಡಿಯ ಜಗತ್ತಿನ ರೂಪವಾಗಿಯೇ ಕಾಣಿಸುತ್ತಿರುತ್ತಾನೆ, ಎಲ್ಲಾ ನಾಮರೂಪಗಳಿಗೂ ಅವನೇ ತತ್ತ್ವವಾಗಿರುತ್ತಾನೆ. ಪರಮೇಶ್ವರನಿಗಿಂತ ವ್ಯತಿರಿಕ್ತವಾದ ಯಾವ ನಾಮರೂಪವಿಶೇಷವೂ ಇರುವದೇ ಇಲ್ಲ. ನಾಮರೂಪವೆಂಬುದೆಲ್ಲವೂ ಪರಮಾತ್ಮನಲ್ಲಿ ಅವಿದ್ಯೆಯಿಂದ ಅಧ್ಯಾರೋಪಿತವಾಗಿರುತ್ತದೆ ಎಂಬುದೇ ಪರಮಾರ್ಥವು.

ತ್ರಯೀಂ ತಿಸ್ರೋ ವೃತ್ತೀಸ್ತ್ರಿಭುವನಮಥೋ ತ್ರೀನಪಿ ಸುರಾ
ನಕಾರಾದ್ಯೈರ್ವರ್ಣೈಸ್ತ್ರಿಭಿರಭಿದಧತ್ತೀರ್ಣವಿಕೃತಿ ।
ತುರೀಯಂ ತೇ ಧಾಮ ಧ್ವನಿಭಿರವರುನ್ಧಾನಮಣುಭಿಃ
ಸಮಸ್ತಂ ವ್ಯಸ್ತಂ ತ್ವಾಂ ಶರಣದ ಗೃಣಾತ್ಯೋಮಿತಿ ಪದಮ್॥ ೨೭ ॥

[ಪ್ರತಿಪದಾರ್ಥ : ಶರಣದ– ಅಭಯಪ್ರದನೆ, ಅಕಾರಾದ್ಯೈಃ– ಅಕಾರವೇ ಮುಂತಾದ ತ್ರಿಭಿಃ ವರ್ಣೈಃ- ಮೂರು ವರ್ಣಗಳಿಂದ ತ್ರಯೀಮ್- ವೇದತ್ರಯವನ್ನೂ ತಿಸ್ರೋ ವೃತ್ತೀಃ– ಮೂರು (ಅಂತಃಕರಣದ) ಅವಸ್ಥೆಗಳನ್ನೂ ತ್ರಿಭುವನಮ್– ಭೂರ್ಭುವಃ ಸ್ವಃ ಎಂಬ ಮೂರು ಲೋಕಗಳನ್ನೂ ಅಥೋ- ಮತ್ತು ತ್ರೀನ್- ಮೂರು ಸುರಾನಪಿ– ದೇವತೆಗಳನ್ನು ಅಭಿದಧತ್– ಹೇಳುತ್ತಿರುವದಾಗಿ ತೀರ್ಣವಿಕೃತಿ– ಸರ್ವ ವಿಕಾರಗಳನ್ನೂ ದಾಟಿರುವ ತೇ- ನಿನ್ನ ತುರೀಯಂ ಧಾಮ- ನಾಲ್ಕನೆಯ ಸ್ವರೂಪವನ್ನು ಅಣುಭಿಃ- ಅತಿ ಸೂಕ್ಷ್ಮಗಳಾದ ಧ್ವನಿಭಿಃ- ಧ್ವನಿಗಳಿಂದ ಅವರುನ್ಧಾನಮ್- ವ್ಯಾಪಿಸಿರುವ ಓಮಿತಿ ಪದಮ್– ಓಮೆಂಬ ಪದವು ಸಮಸ್ತಂ ವ್ಯಸ್ತಮ್– ಸಮಸ್ತನೂ ಭಿನ್ನನೂ ಆಗಿರುವ ತ್ವಾಮ್- ನಿನ್ನನ್ನು ಗೃಣಾತಿ- ಹೇಳುತ್ತದೆ.]

೨೭. ಓಮ್ ಎಂಬ ಪದವು ಅಕಾರಾದಿವರ್ಣಗಳಿಂದ ಮೂರು ವೇದಗಳು, ಮೂರು ಅವಸ್ಥೆಗಳು, ಮೂರು ಲೋಕಗಳು, ಮೂರು ದೇವತೆಗಳು –ಇವುಗಳನ್ನು ಹೇಳುವದಲ್ಲದೆ ಮಿಕ್ಕ ನಿನ್ನ ವ್ಯಸ್ತರೂಪಗಳನ್ನೂ ಹೇಳುತ್ತದೆ; ಆ ಮೂರೂ ಒಂದಾಗಿರುವ

ತನ್ನ ರೂಪದಿಂದ ನಿರ್ವಿಕಾರವಾದ ತುರೀಯವೆಂಬ ಸಮಸ್ತ ರೂಪವನ್ನು ತಿಳಿಸುತ್ತಿದೆ.

## ವಿವರಣೆ

ಓಮ್ ಎಂಬ ವೇದಪ್ರಸಿದ್ಧವಾದ ಪ್ರಣವವು ಪರಮೇಶ್ವರನ ವ್ಯಸ್ತ ರೂಪವನ್ನೂ ಸಮಸ್ತರೂಪವನ್ನೂ ತಿಳಿಸುತ್ತದೆ. ಆದರಿಂದ ತಿಳಿದುಬರುವ ದೆಲ್ಲವೂ ಪರಮೇಶ್ವರನ ರೂಪವೇ; ಆ ರೂಪಕ್ಕಿಂತ ಬೇರೆಯಾದದ್ದು ಮತ್ತೆ ಯಾವದೂ ಇರುವದಿಲ್ಲ.

ಹೇಗೆಂದರೆ ಓಂಕಾರದ ಮೊದಲನೆಯ ಮಾತ್ರೆಯು ಋಗ್ವೇದ, ಜಾಗ್ರದವಸ್ಥೆ, ಭೂರ್ಲೋಕ, ಬ್ರಹ್ಮ- ಇವುಗಳನ್ನು ಹೇಳುತ್ತದೆ; ಎರಡನೆಯ ಮಾತ್ರೆಯು ಯಜುರ್ವೇದ, ಸ್ವಪ್ನಾವಸ್ಥೆ, ಭುವರ್ಲೋಕ, ವಿಷ್ಣು- ಇವುಗಳನ್ನು ಹೇಳುತ್ತದೆ; ಮೂರನೆಯ ಮಾತ್ರೆಯು ಸಾಮವೇದ, ಸುಷುಪ್ತ್ಯವಸ್ಥೆ, ಸುವರ್ಲೋಕ, ಮಹೇಶ್ವರ- ಎಂಬುದನ್ನು ಹೇಳುತ್ತದೆ. ಹೀಗೆಯೇ ಅಕಾರಾದಿಗಳಿಗೆ ವ್ಯಸ್ತವಾದ ಮಿಕ್ಕ ಅರ್ಥಗಳನ್ನೂ ಕಲ್ಪಿಸಿಕೊಳ್ಳ ಬೇಕು. ಓಂಕಾರವೆಂಬ ತನ್ನ ರೂಪದಿಂದ ಈ ಪ್ರಣವವು ಸರ್ವವಿಕಾರರಹಿತ ವಾದ ನಿರ್ವಿಶೇಷವಾದ ಪರರೂಪವನ್ನು ತಿಳಿಸುವದಕ್ಕೆ ಹೊರಟು ಅದ ರಲ್ಲಿಯೇ ಒಂದಾಗುತ್ತದೆ.

ವಾಚ್ಯವಾಚಕಭಾವದಿಂದ ಅಕಾರಾದಿಗಳು ಶಿವನ ವ್ಯಸ್ತರೂಪಗಳನ್ನು ತಿಳಿಸುತ್ತವೆ. ಸಮಸ್ತವಾದ ಓಂಕಾರವು ಶಿವನ ಸಮಸ್ತರೂಪವನ್ನು ತಿಳಿಸುತ್ತದೆ; ಆಗ ಅದು ಶಿವನಿಗಿಂತ ಭಿನ್ನವಾಗಿರದೆ ಎಲ್ಲವೂ ಅಖಂಡ ಚೈತನ್ಯೈಕರಸವಾದ ತತ್ತ್ವವೇ ಆಗುತ್ತದೆ. ಈ ಪ್ರಕಾರವನ್ನು ಮಾಂಡೂಕ್ಯಪ್ರಶ್ನಾದ್ಯುಪನಿಷತ್ತುಗಳ ಅವಲೋಕನದಿಂದಲೂ ತತ್ತ್ವವೇತ್ತ ರಾದ ಸದ್ಗುರುಗಳ ಉಪದೇಶದಿಂದಲೂ ಮುಮುಕ್ಷುಗಳಾದವರು ತಿಳಿದು ಕೊಳ್ಳಬೇಕಾಗಿರುತ್ತದೆ. ನಾಮರೂಪಗಳೂ ನಾಮರೂಪಾತೀತವಾದ ಪರ ಮಾರ್ಥತತ್ತ್ವವೂ ಪರಮಶಿವನೇ ಎಂಬುದು ಶ್ಲೋಕದ ಒಟ್ಟರ್ಥವು.

**ಭವಃ ಶರ್ವೋ ರುದ್ರಃ ಪಶುಪತಿರಥೋಗ್ರಃ ಸಹಮಹಾಂ-**
**ಸ್ತಥಾ ಭೀಮೇಶಾನಾವಿತಿ ಯದಭಿಧಾನಾಷ್ಟಕಮಿದಮ್ ।**
**ಅಮುಷ್ಮಿನ್ ಪ್ರತ್ಯೇಕಂ ಪ್ರವಿಚರತಿ ದೇವ ಶ್ರುತಿರಪಿ**
**ಪ್ರಿಯಾಯಾಸ್ಮೈ ಧಾಮ್ನೇ ಪ್ರವಿಹಿತನಮಸ್ಯೋಽಸ್ಮಿ ಭವತೇ॥ ೨೮ ॥**

[ಪ್ರತಿಪದಾರ್ಥ : ದೇವ- ದೇವನೆ, ಭವಃ- ಭವನು ಶರ್ವಃ- ಶರ್ವನು ರುದ್ರಃ- ರುದ್ರನು ಪಶುಪತಿಃ- ಪಶುಪತಿಯು, ಅಥ- ಮತ್ತು ಉಗ್ರಃ- ಉಗ್ರನು ಸಹಮಹಾನ್- ಮಹಾದೇವನು ತಥಾ- ಹಾಗೆಯೇ ಭೀಮೇಶಾನೌ- ಭೀಮ, ಈಶಾನ ಇತಿ- ಈ ಪ್ರಕಾರ ವಾಗಿರುವ ಇದಮ್- ಈ ಯತ್ ಅಭಿಧಾನಾಷ್ಟಕಮ್- ಹೆಸರುಗಳ ಅಷ್ಟಕವಿದೆಯಲ್ಲ ಅಮು ಷ್ಮಿನ್- ಇದರಲ್ಲಿ ಪ್ರತ್ಯೇಕಮ್- ಒಂದೊಂದಾಗಿ (ಒಂದೊಂದು ನಾಮದಲ್ಲಿಯೂ) ಶ್ರುತಿ ರಪಿ- ಶ್ರುತಿಯೂ ಪ್ರವಿಚರತಿ- ತಿಳಿಸುತ್ತಾ ವರ್ತಿಸುತ್ತದೆ. ಅಸ್ಮೈ- ಈ ಪ್ರಿಯಾಯ- ಪ್ರಿಯವಾದ ಧಾಮ್ನೇ- ಸ್ವರೂಪದ ಭವತೇ- ನಿನಗೆ ಪ್ರವಿಹಿತನಮಸ್ಯೋಽಸ್ಮಿ- ಮಾಡಲ್ಪಟ್ಟ ನಮಸ್ಕಾರವುಳ್ಳವನಾಗಿರುತ್ತೇನೆ.]

೨೮. ಎಲೈ ದೇವನೆ, ಭವನು, ಶರ್ವನು, ರುದ್ರನು, ಪಶುಪತಿಯು, ಉಗ್ರನು, ಮಹಾದೇವನು, ಭೀಮನು, ಈಶಾನನು- ಎಂಬೀ ನಾಮಾಷ್ಟಕವಿದೆಯಲ್ಲ, ಇದರಲ್ಲಿ ಒಂದೊಂದರಲ್ಲಿಯೂ ಶ್ರುತಿಯು ಪ್ರವರ್ತಿಸುತ್ತಿದೆ. ಇಂಥ ಸರ್ವಪ್ರಿಯನಾದ ಚೈತನ್ಯಸ್ವರೂಪನಾದ ನಿನಗೆ ನಮಸ್ಕಾರಮಾಡುತ್ತೇನೆ.

## ವಿವರಣೆ

ಭವನೇ ಮುಂತಾದ ಪರಮೇಶ್ವರನ ಎಂಟು ನಾಮಗಳನ್ನು ಶ್ರುತಿಯು ಕೊಂಡಾಡುತ್ತಿರುವದು ; ಸ್ಮೃತಿಪುರಾಣಾಗಮಗಳೂ ಕೊಂಡಾಡುವವು. ಭವನು ಎಂದರೆ ಸರ್ವವೂ ತಾನೇ ಆಗಿರುವವನು, ಸೃಷ್ಟಿಕರ್ತನು. ಶರ್ವನು ಎಂದರೆ ಜಗತ್ತನ್ನು ಪ್ರಲಯಕಾಲದಲ್ಲಿ ಹಿಂಸಿಸುವವನು ಅಥವಾ ಸರ್ವರೂಪನಾಗಿರುವವನು. ರುದ್ರನು ಎಂದರೆ ಪ್ರಲಯಕಾಲದಲ್ಲಿ ಎಲ್ಲರೂ ಅಳುವಂತೆ ಮಾಡುವಾತನು. ಪಶುಪತಿಯು ಎಂದರೆ ಪಶುಗಳೆಂಬ ಜೀವರಿಗೆ ಒಡೆಯನು. ಉಗ್ರನು ಎಂದರೆ ಕ್ರೋಧಸಮನ್ವಿತನು. ಮಹಾಂತನು ಎಂದರೆ ಎಲ್ಲರಿಗೂ ಪೂಜ್ಯನು. ಭೀಮನು ಎಂದರೆ ಎಲ್ಲರಿಗೂ ಅಂಜಿಕೆಯನ್ನುಂಟು

ಮಾಡುವವನು. ಈಶಾನನು ಎಂದರೆ ಎಲ್ಲರನ್ನೂ ಆಳುವವನು. ಅಂತೂ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕರ್ತೃವೂ ಜಗತ್ತಿಗೆಲ್ಲ ಆಧಾರಸ್ವರೂಪನೂ ಆಗಿರುವವನೇ ಮಹೇಶ್ವರನೆಂದು ಈ ನಾಮಗಳು ತಿಳಿಸುತ್ತವೆ.

ಇದಲ್ಲದೆ ಮೂಲದಲ್ಲಿರುವ ದೇವಶಬ್ದವನ್ನು 'ದೇವಶ್ರುತಿರಪಿ' ಎಂಬಂತೆ ಸಮಾಸವಾಗಿ ಸೇರಿಸಿದರೆ ಭವದೇವನು, ಶರ್ವದೇವನು- ಎಂದು ಮುಂತಾಗಿಯೂ ಈಶ್ವರನ ನಾಮಗಳಾಗುವವು. ಭವಾಯ ದೇವಾಯ ನಮಃ, ಶರ್ವಾಯ ದೇವಾಯ ನಮಃ- ಎಂದುಮುಂತಾಗಿ ಈ ನಾಮಗಳನ್ನು ನಮಸ್ಕಾರಕ್ಕೆ ಉಪಯೋಗಿಸುವ ರೂಢಿಯೂ ಇದೆ; ಇದಕ್ಕೆ ಬೋಧಾಯನ ಮುಂತಾದ ಸ್ಮೃತಿವಚನದ ಆಧಾರವೂ ಇದೆ. ಶಿವನಿಗೆ 'ದೇವನು' ಎಂಬ ಅಸಾಧಾರಣವಾದ ಹೆಸರು ಇದ್ದುಕೊಂಡಿರುವದು ಆತನು ಮಹಾಕಾಂತಿಯುಕ್ತನಾದ ಚೈತನ್ಯರೂಪನೆಂದೂ ಜಗತ್ತಿನ ಸೃಷ್ಟಿಸ್ಥಿತಿಲಯಗಳು ಆತನ ಕ್ರೀಡಾವಿಶೇಷವೆಂದೂ ತಿಳಿಸುತ್ತದೆ. ಈ ಕಾರಣದಿಂದ ಆತನು ಮಹಾದೇವನು.

ನಮೋ ನೇದಿಷ್ಠಾಯ ಪ್ರಿಯದವ ದವಿಷ್ಠಾಯ ಚ ನಮೋ
ನಮಃ ಕ್ಷೋದಿಷ್ಠಾಯ ಸ್ಮರಹರ ಮಹಿಷ್ಠಾಯ ಚ ನಮಃ ।
ನಮೋ ವರ್ಷಿಷ್ಠಾಯ ತ್ರಿನಯನ ಯವಿಷ್ಠಾಯ ಚ ನಮೋ
ನಮಃ ಸರ್ವಸ್ಮೈ ತೇ ತದಿದಮಿತಿ ಸರ್ವಾಯ ಚ ನಮಃ ॥ ೨೯ ॥

[ಪ್ರತಿಪದಾರ್ಥ: ಪ್ರಿಯದವ- ಪ್ರಿಯವಾದ (ನಿರ್ಜನ)ವನದಲ್ಲಿ (ವಿಹರಿಸುತ್ತಿರುವವನೆ), ತೇ- ನಿನಗೆ ನಮಃ- ನಮಸ್ಕಾರವು ನೇದಿಷ್ಠಾಯ- ತೀರ ಹತ್ತಿರವಿರುವ ದವಿಷ್ಠಾಯ ಚ- ಮತ್ತು ಅತ್ಯಂತದೂರದಲ್ಲಿರುವ (ನಿನಗೆ) ನಮೋ ನಮಃ- ನಮಸ್ಕಾರವು, ನಮಸ್ಕಾರವು! ಸ್ಮರಹರ- ಕಾಮಾಂತಕನೆ, ಕ್ಷೋದಿಷ್ಠಾಯ- ಅತ್ಯಂತ ಸಣ್ಣವನಾದ ಮಹಿಷ್ಠಾಯ ಚ- ಮತ್ತು ತೀರ ದೊಡ್ಡವನಾದ (ನಿನಗೆ) ನಮಃ- ನಮಸ್ಕಾರವು, ತ್ರಿನಯನ- ಮುಕ್ಕಣ್ಣನೆ, ವರ್ಷಿಷ್ಠಾಯ- ಅತ್ಯಂತವೃದ್ಧನೂ ಯವಿಷ್ಠಾಯ ಚ- ಮತ್ತು ಅತ್ಯಂತ ಚಿಕ್ಕವನೂ ಆದ (ನಿನಗೆ) ನಮೋ ನಮಃ- ನಮಸ್ಕಾರ, ನಮಸ್ಕಾರ! ಸರ್ವಸ್ಮೈ- ಸರ್ವರೂಪನಾಗಿರುವ ತೇ- ನಿನಗೆ ನಮಸ್ಕಾರ! ತತ್ ಇದಮ್ ಇತಿ ಸರ್ವಾಯ- ಅದು, ಇದು ಎಂಬ ಸರ್ವವೂ ಆಗಿರುವ (ನಿನಗೆ) ನಮಸ್ಕಾರವು!]

೨೯. ಸ್ವೇಷ್ಟವಾದ ನಿರ್ಜನವನಗಳಲ್ಲಿ ಸಂಚರಿಸುತ್ತಿರುವವನೆ, ಅತ್ಯಂತ ಹತ್ತಿರವೂ ಅತ್ಯಂತದೂರವೂ ಇರುವ ನಿನಗೆ ನಮಸ್ಕಾರ ! ಮನ್ಮಥನಾಶಕನೆ, ಅತ್ಯಂತಸೂಕ್ಷ್ಮನೂ ಅತ್ಯಂತ ಮಹತ್ಪರಿಮಾಣದವನೂ ಆದ ನಿನಗೆ ನಮಸ್ಕಾರ! ಮುಕ್ಕಣ್ಣನೆ, ಅತ್ಯಂತ ವೃದ್ಧನೂ ಅತ್ಯಂತಯುವಕನೂ ಆದ ನಿನಗೆ ನಮಸ್ಕಾರ! ಸರ್ವವೂ ಆಗಿರುವ ನಿನಗೆ ನಮಸ್ಕಾರ ! ಪರೋಕ್ಷಪ್ರತ್ಯಕ್ಷವೆಲ್ಲವೂ ಆಗಿರುವ ನಿನಗೆ ನಮಸ್ಕಾರ !

## ವಿವರಣೆ

ಭಗವಂತನ ಮಹಿಮೆಯು ಪ್ರಾಕೃತಜನರಿಗೆ ಅತ್ಯಂತದುರೂಹವಾಗಿರುತ್ತದೆ. ಏಕೆಂದರೆ ಅದು ತನ್ನ ಪರಮಾರ್ಥಸ್ವರೂಪದಿಂದ ಯಾವ ಧರ್ಮವೂ ಇಲ್ಲದ್ದಾಗಿದ್ದರೂ ಉಪಾಧಿವಶದಿಂದ ಅತ್ಯಂತವಿರುದ್ಧವಾದ ಧರ್ಮಗಳುಳ್ಳದ್ದರಂತೆ ಕಾಣುತ್ತಿರುತ್ತದೆ. ಹೇಗೆಂದರೆ ಆ ಪರಮಶಿವನು ಎಲ್ಲರಿಗೂ ಆತ್ಮನಾಗಿರುವದರಿಂದ ಅತ್ಯಂತಸಮೀಪದಲ್ಲಿಯೇ ಇರುತ್ತಿದ್ದರೂ ವಿಷಯಾಪಹೃತ ಬುದ್ಧಿಗಳಾದವರಿಗೆ ಅತ್ಯಂತದೂರದಲ್ಲಿರುವಂತೆ ಕಾಣಿಸುತ್ತಿರುತ್ತಾನೆ. ತನ್ನ ಸ್ವರೂಪದಿಂದ ಯಾವ ಪರಿಮಾಣವೂ ಇಲ್ಲದವನಾದರೂ ಉಪಾಧಿವಶದಿಂದ ಅತ್ಯಂತ ಸೂಕ್ಷ್ಮವಾಗಿರುವದಕ್ಕಿಂತ ಸೂಕ್ಷ್ಮನಾಗಿರುತ್ತಾನೆ, ಅತ್ಯಂತ ಮಹತ್ತಾಗಿರುವದಕ್ಕಿಂತಲೂ ಮಹತ್ಪರಿಮಾಣವುಳ್ಳವನಾಗಿರುತ್ತಾನೆ. ನಿತ್ಯ ನಿರವಸ್ಥನಾಗಿರುತ್ತಿದ್ದರೂ ಅತ್ಯಂತ ವೃದ್ಧರಿಗೂ ಅತ್ಯಂತ ಯುವಕರಿಗೂ ಆತ್ಮನಾಗಿರುವದರಿಂದ ಆಯಾ ಅವಸ್ಥೆಯಲ್ಲಿರುವಂತೆ ತೋರುತ್ತಾನೆ. ಹೀಗೆ ಸರ್ವರೂಪದಿಂದಲೂ ತೋರುತ್ತಾ ಸರ್ವಕ್ಕೂ ಆಧಾರರೂಪನಾಗಿರುವ ಆತನು ಭಕ್ತಿಯಿಂದ ನಮಸ್ಕಾರಮಾಡುವವರಿಗೆ ಮಾತ್ರ ತನ್ನ ನಿಜವನ್ನು ತಿಳಿಯುವಂತೆ ಅನುಗ್ರಹಿಸುತ್ತಾನೆ.

**ಬಹಲರಜಸೇ ವಿಶ್ವೋತ್ಪತ್ತೌ ಭವಾಯ ನಮೋ ನಮಃ**
**ಪ್ರಬಲತಮಸೇ ತತ್ಸಂಹಾರೇ ಹರಾಯ ನಮೋ ನಮಃ ।**

**ಜನಸುಖಕೃತೇ ಸತ್ತ್ವೋದ್ರಿಕ್ತೌ ಮೃಡಾಯ ನಮೋ ನಮಃ**
**ಪ್ರಮಹಸಿಪದೇ ನಿಸ್ತ್ರೈಗುಣ್ಯೇ ಶಿವಾಯ ನಮೋ ನಮಃ ॥೩೦॥**

[ಪ್ರತಿಪದಾರ್ಥ: ವಿಶ್ವೋತ್ಪತ್ತೌ- ಜಗತ್ತಿನ ಉತ್ಪತ್ತಿಯಲ್ಲಿ ಬಹಲರಜಸೇ- ರಜಸ್ಸು ಹೆಚ್ಚಾಗಿರುವವನಾಗಿರುವ ಭವಾಯ- ಭವನಿಗೆ ನಮೋ ನಮಃ- ನಮಸ್ಕಾರ, ನಮಸ್ಕಾರ! ತತ್ಸಂಹಾರೇ- ಅದರ ಸಂಹಾರದಲ್ಲಿ ಪ್ರಬಲತಮಸೇ- ಹೆಚ್ಚು ಬಲವಾಗಿರುವ ತಮಸ್ಸುಳ್ಳ ಹರಾಯ- ಹರನಿಗೆ ನಮೋ ನಮಃ- ನಮಸ್ಕಾರ, ನಮಸ್ಕಾರ! ಜನಸುಖಕೃತೇ- ಜನರ ಸುಖವನ್ನುಂಟುಮಾಡುವದಕ್ಕಾಗಿ ಸತ್ತ್ವೋದ್ರಿಕ್ತೌ- ಸತ್ತ್ವಗುಣವು ಹೆಚ್ಚಾಗಿರುವಲ್ಲಿ ಮೃಡಾಯ- ಮೃಡನಿಗೆ ನಮೋ ನಮಃ- ನಮಸ್ಕಾರ, ನಮಸ್ಕಾರ! ನಿಸ್ತ್ರೈಗುಣ್ಯೇ- ಈ ಮೂರು ಗುಣಗಳೂ ಇಲ್ಲದ! ಪ್ರಮಹಸಿ- ಹೆಚ್ಚಿನ ಜ್ಯೋತಿಯುಳ್ಳ ಪದೇ- ಸ್ಥಾನದಲ್ಲಿ ಶಿವಾಯ- ಶಿವನಿಗೆ ನಮೋ ನಮಃ- ನಮಸ್ಕಾರ, ನಮಸ್ಕಾರ!]

೩೦. ಜಗತ್ತಿನ ಉತ್ಪತ್ತಿಯಲ್ಲಿ ರಜಃಪ್ರಧಾನನಾಗಿರುವ ಭವನಿಗೆ ನಮಸ್ಕಾರ, ನಮಸ್ಕಾರ! ಅದರ ಸಂಹಾರದಲ್ಲಿ ತಮಃ ಪ್ರಧಾನನಾಗಿರುವ ಹರನಿಗೆ ನಮಸ್ಕಾರ, ನಮಸ್ಕಾರ! ಜನರಿಗೆ ಸುಖವನ್ನುಂಟುಮಾಡುವದಕ್ಕೆ ಸತ್ತ್ವಪ್ರಧಾನನಾಗಿರುವ ಮೃಡನಿಗೆ ನಮಸ್ಕಾರ, ನಮಸ್ಕಾರ! ಅತ್ಯಂತಜ್ಯೋತಿರ್ಮಯವಾದ ಪರಮಪದದಲ್ಲಿ ಯಾವ ಗುಣವೂ ಇಲ್ಲದ ಶಿವನಾಗಿರುವವನಿಗೆ ನಮಸ್ಕಾರ!

## ವಿವರಣೆ

ಪರಮಾತ್ಮನು ನಿರ್ಗುಣನಾದ ಪರಮಮಂಗಲಸ್ವರೂಪನಾಗಿದ್ದರೂ ಉಪಾಧಿಗಳಿಂದ ಆಯಾ ಗುಣವನ್ನು ಪ್ರಧಾನವಾಗಿ ಮಾಡಿಕೊಂಡು ಜಗತ್ತಿನ ಜನ್ಮಾದಿಗಳನ್ನುಂಟುಮಾಡುತ್ತಿರುವನು. ಹೇಗೆಂದರೆ ರಜಃ ಪ್ರಧಾನವಾಗಿ ಸೃಷ್ಟಿಯನ್ನು ಮಾಡುವ ಭವನು ಎಂದರೆ ಬ್ರಹ್ಮಮೂರ್ತಿಯಾಗುವನು. ತಮಃಪ್ರಧಾನವಾಗಿ ಸಂಹಾರವನ್ನು ಮಾಡುವ ಹರನು ಎಂದರೆ ರುದ್ರಮೂರ್ತಿಯಾಗುವನು. ಇದರಂತೆ ಸತ್ತ್ವಪ್ರಧಾನನಾಗಿ ಜಗತ್ತಿನ ಸ್ಥಿತಿಯನ್ನುಂಟುಮಾಡುವ ಮೃಡನು ಎಂದರೆ ವಿಷ್ಣುಮೂರ್ತಿಯಾಗುವನು.

ಈ ಮೂರು ಮೂರ್ತಿಗಳೂ ತ್ರಿಗುಣಾತ್ಮಕವೇ ಆಗಿರುತ್ತಿದ್ದರೂ ಒಂದೊಂದು ಕಾರ್ಯಕ್ಕಾಗಿ ಒಂದೊಂದು ಮೂರ್ತಿಯಲ್ಲಿ ಒಂದೊಂದು ಗುಣವು ಮೇಲಕ್ಕೆ ಎದ್ದಿರುವದು.

ಹೀಗಿದ್ದರೂ ಮುಮುಕ್ಷುಗಳು ಪಡೆದುಕೊಳ್ಳಬೇಕಾದ ಪರಮಪದದಲ್ಲಿಯೇ ಯಾವಾಗಲೂ ಇರುವ ಈ ದೇವನು ತ್ರಿಗುಣರಹಿತನಾದ ಪರಮಶಿವನೇ ಆಗಿರುವನು.

ಕೃಶಪರಿಣತಿ ಚೇತಃ ಕ್ಲೇಶವಶ್ಯಂ ಕ್ವ ಚೇದಂ
ಕ್ವ ಚ ತವ ಗುಣಸೀಮೋಲ್ಲಙ್ಘಿನೀ ಶಶ್ವದೃದ್ಧಿಃ ।
ಇತಿ ಚಕಿತಮಮನ್ದೀಕೃತ್ಯ ಮಾಂ ಭಕ್ತಿರಾಧಾ-
ದ್ವರದ ಚರಣಯೋಸ್ತೇ ವಾಕ್ಯಪುಷ್ಪೋಪಹಾರಮ್ ॥ ೩೧ ॥

[ಪ್ರತಿಪದಾರ್ಥ :- ವರದ- ಅಭೀಷ್ಟಪ್ರದನೆ, ಕೃಶಪರಿಣತಿ- ಅಲ್ಪಪರಿಪಾಕವುಳ್ಳ ಕ್ಲೇಶವಶ್ಯಮ್- ಕ್ಲೇಶಗಳಿಗೆ ಅಧೀನವಾಗಿರುವ ಇದಮ್- ಈ ಚೇತಃ- ಚಿತ್ತವು ಕ್ವ ಚ ಎಲ್ಲಿ ? ಗುಣಸೀಮೋಲ್ಲಙ್ಘಿನೀ- ಗುಣಗಳ ಎಲ್ಲೆಕಟ್ಟನ್ನು ಮೀರಿದ ತವ- ನಿನ್ನ ಶಶ್ವದೃದ್ಧಿಃ- ನಿತ್ಯವಾದ ಐಶ್ವರ್ಯವು ಕ್ವ ಚ- ಎಲ್ಲಿ? ಇತಿ- ಹೀಗೆಂದು ಚಕಿತಮ್-ಬೆದರಿದ್ದ ಮಾಮ್- ನನ್ನನ್ನು ಭಕ್ತಿಃ- ಭಕ್ತಿಯು ಅಮನ್ದೀಕೃತ್ಯ- ಹಿಂತೆಗೆಯದಂತೆ ಮಾಡಿ ವಾಕ್ಯಪುಷ್ಪೋಪಹಾರಮ್- ವಾಕ್ಯಗಳೆಂಬ ಪುಷ್ಪಗಳ ಕಾಣಿಕೆಯನ್ನು ತೇ- ನಿನ್ನ ಚರಣಯೋಃ- ಚರಣಗಳಲ್ಲಿ- ಆಧಾತ್- ಅರ್ಪಿಸಿತು.]

೩೧. ಅಲ್ಪವಿಷಯದಲ್ಲಿ ಮಾತ್ರ ವರ್ತಿಸಬಲ್ಲದ್ದಾಗಿಯೂ ಅವಿದ್ಯಾದಿಕ್ಲೇಶಗಳಿಗೆ ವಶವಾಗಿಯೂ ಇರುವ ನನ್ನ ಬುದ್ಧಿಯೆಲ್ಲಿ, ಗುಣಗಳ ಎಲ್ಲೆಯನ್ನು ಮೀರಿರುವ ನಿನ್ನ ನಿತ್ಯೈಶ್ವರ್ಯವೆಲ್ಲಿ ! -ಎಂದು ಬೆದರಿದ್ದ ನನ್ನನ್ನು ಪ್ರೋತ್ಸಾಹಿಸಿ ಭಕ್ತಿಯು ಈ ವಾಕ್ಯಪುಷ್ಪಗಳ ಕಾಣಿಕೆಯನ್ನು ನಿನ್ನ ಪಾದಗಳಿಗೆ ಅರ್ಪಿಸುವಂತೆ ಮಾಡಿರುತ್ತದೆ.

## ವಿವರಣೆ

ಗಂಧರ್ವರಾಜನು ಹೀಗೆ ಶಿವನನ್ನು ಸ್ತೋತ್ರಮಾಡಿ ತನ್ನ ಔದ್ಧತ್ಯ ಪರಿಹಾರವನ್ನು ಮಾಡುವದಕ್ಕಾಗಿ ಈ ಉಪಸಂಹಾರವಾಕ್ಯವನ್ನು ಆಡಿರುತ್ತಾನೆ.

ನನ್ನ ಬುದ್ಧಿಯು ಅಲ್ಪವಾದ ಪರಿಚ್ಛಿನ್ನವಸ್ತುಗಳನ್ನು ತಿಳಿದುಕೊಳ್ಳ ಬಲ್ಲದೇ ಹೊರತು ಅನಂತವಾದ ನಿನ್ನ ಅಪರಿಮಿತಗುಣಗಳುಳ್ಳ ಸಗುಣರೂಪ ವನ್ನಾಗಲಿ ಗುಣಗಳ ಎಲ್ಲೆಯನ್ನು ಮೀರಿ ನಿರ್ಗುಣರೂಪದಿಂದಿರುವ ಪರಮಾರ್ಥರೂಪವನ್ನಾಗಲಿ ಅರಿತುಕೊಳ್ಳಲಾರದು. ಇದಲ್ಲದೆ ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ- ಎಂಬ ಪಂಚಕ್ಲೇಶಗಳಿಗೆ ವಶವಾಗಿ ರುವ ಈ ಬುದ್ಧಿಯು ಸರ್ವಕ್ಲೇಶರಹಿತನಾಗಿರುವ ನಿನ್ನ ಸ್ವರೂಪವನ್ನು ಹೇಗೆ ತಾನೆ ಅರಿತುಕೊಂಡೀತು? ಹೀಗಿರುವಲ್ಲಿ ನಾನು ನಿನ್ನನ್ನು ಹೇಗೆ ಸ್ತುತಿಸಲಿ? -ಎಂದು ಅಂಜಿಕೊಂಡಿದ್ದ ನನ್ನನ್ನು ನಿನ್ನ ಭಕ್ತಿಯೇ ಪ್ರೋತ್ಸಾಹಿಸಿ ಈ ಸ್ತೋತ್ರವನ್ನು ಮಾಡಿಸಿರುತ್ತದೆ. ನಾನು ಮಾಡಿರುವ ಸ್ತೋತ್ರವಿದು -ಎಂಬ ಅಭಿಮಾನವು ನನಗೆ ಎಳ್ಳಷ್ಟೂ ಇಲ್ಲ. ಇದೊಂದು ಪುಷ್ಪೋಪ ಹಾರವೆಂದು ನಿನ್ನ ಚರಣಗಳಿಗೆ ಅರ್ಪಿಸಿರುತ್ತೇನೆ. ಇದನ್ನು ಸ್ವೀಕರಿಸಿ ನನ್ನನ್ನು ರಕ್ಷಿಸಬೇಕು- ಎಂಬುದು ಸ್ತೋತ್ರಕಾರನ ಆಶಯವು.

**ಅಸಿತಗಿರಿಸಮಂ ಸ್ಯಾತ್ ಕಜ್ಜಲಂ ಸಿನ್ಧುಪಾತ್ರೇ**
**ಸುರತರುವರಶಾಖಾ ಲೇಖಿನೀ ಪತ್ರಮುರ್ವೀ ।**
**ಲಿಖತಿ ಯದಿ ಗೃಹೀತ್ವಾ ಶಾರದಾ ಸಾರ್ವಕಾಲಂ**
**ತದಪಿ ತವ ಗುಣಾನಾಮೀಶ ಪಾರಂ ನ ಯಾತಿ ॥ ೩೨ ॥**

[ಪ್ರತಿಪದಾರ್ಥ:- ಈಶ- ಈಶ್ವರನೆ, ಅಸಿತಗಿರಿಸಮಂ- ಅಂಜನಪರ್ವತಕ್ಕೆ ಸಮಾನ ವಾದ ಕಜ್ಜಲಮ್- ಕಾಡಿಗೆಯು ಸಿನ್ಧುಪಾತ್ರೇ- ಸಮುದ್ರವೆಂಬ ಮಸಿಯ ಕುಡಿಕೆಯಲ್ಲಿ ಯದಿ ಸ್ಯಾತ್- ಇರುವದಾದರೆ, ಸುರತರುವರಶಾಖಾ- ಶ್ರೇಷ್ಠವಾದ ಕಲ್ಪವೃಕ್ಷದ ಶಾಖೆಯು ಲೇಖಿನೀ- ಬರೆಯುವ ಕಡ್ಡಿಯು, ಉರ್ವೀ- ಭೂಮಿಯು ಪತ್ರಮ್- ಬರೆಯುವ ಕಾಗದವು (ಸ್ಯಾದ್ಯದಿ- ಆಗುವದಾದರೆ) ಶಾರದಾ- ಸರಸ್ವತಿಯು ಸಾರ್ವಕಾಲಮ್- ಎಲ್ಲಾ ಕಾಲವೂ ಗೃಹೀತ್ವಾ- (ಕಡ್ಡಿಯನ್ನು) ಹಿಡಿದು ಯದಿ ಲಿಖತಿ-

ಬರೆಯುವಳಾದರೆ ತದಪಿ– ಆಗಲೂ (ಸಾ– ಅವಳು) ತವ ಗುಣಾನಾಮ್– ನಿನ್ನ ಗುಣಗಳ ಪಾರಮ್- ಆಚೆಯ ಕಡೆಯನ್ನು ನ ಯಾತಿ– ಸೇರುವದಿಲ್ಲ.]

೩೨. ಮಹೇಶ್ವರನೆ, ಅಂಜನಪರ್ವತದಷ್ಟು ಮಷಿಯ ಪುಡಿ, ಸಮುದ್ರದ ಪರಿಮಾಣದ ಮಷಿಯ ಕುಡಿಕೆ, ಕಲ್ಪವೃಕ್ಷದ ಕೊಂಬೆಯಂಥ ಲೇಖಿನಿ, ಭೂಮಿಯಗಲದ ಕಾಗದ– ಇವುಗಳನ್ನುಪಯೋಗಿಸಿಕೊಂಡು ಶಾರದೆಯೇ ಯಾವಾಗಲೂ ಬರೆಯುತ್ತಿದ್ದರೂ ನಿನ್ನ ಗುಣಗಳು ಮುಗಿಯುವದಿಲ್ಲ![1]

ಅಸುರಸುರಮುನೀನ್ದ್ರೈರರ್ಚಿತಸ್ಯೇನ್ದುಮೌಳೇಃ
ಪ್ರಥಿತಗುಣಮಹಿಮ್ನೋ ನಿರ್ಗುಣಸ್ಯೇಶ್ವರಸ್ಯ ।
ಸಕಲಗಣವರಿಷ್ಠಃ ಪುಷ್ಪದನ್ತಾಭಿಧಾನೋ
ರುಚಿರಮಲಘುವೃತ್ತೈಃ ಸ್ತೋತ್ರಮೇತಚ್ಚಕಾರ ॥ ೩೩ ॥

[ಪ್ರತಿಪದಾರ್ಥ : ಅಸುರಸುರಮುನೀನ್ದ್ರೈಃ– ಅಸುರರು, ದೇವತೆಗಳು, ಮುನಿಗಳು ಇವರಲ್ಲಿ ಶ್ರೇಷ್ಠರಾದವರಿಂದ ಅರ್ಚಿತಸ್ಯ– ಪೂಜಿತನಾಗಿರುವ ಪ್ರಥಿತಗುಣಮಹಿಮ್ನಃ- ಪ್ರಸಿದ್ಧಗುಣಗಳ ಮಹಿಮೆಯುಳ್ಳ ನಿರ್ಗುಣಸ್ಯ– ಗುಣರಹಿತನಾದ ಇನ್ದುಮೌಳೇಃ– ಚಂದ್ರಶೇಖರನಾದ ಈಶ್ವರಸ್ಯ– ಈಶ್ವರನ ಸಕಲಗಣವರಿಷ್ಠಃ– ಗಣಗಳಲ್ಲೆಲ್ಲ ಶ್ರೇಷ್ಠನಾದ ಪುಷ್ಪದನ್ತಾಭಿಧಾನಃ– ಪುಷ್ಪದಂತನೆಂಬ ಹೆಸರಿನವನು ರುಚಿರಮ್–

1. ಇಲ್ಲಿಂದ ಮುಂದಿನ ಪದ್ಯಗಳು ಶಿವಮಹಿಮ್ನಕ್ಕೆ ಸೇರಿರುವವೆ, ಅಲ್ಲವೆ– ಎಂಬ ಬಗ್ಗೆ ವಿವಾದವುಂಟು ; ಪೀಠಿಕೆಯನ್ನು ನೋಡಿ. ಈ ಶ್ಲೋಕವಾದಮೇಲೆ ಕೆಲವು ಪಾಠಗಳಲ್ಲಿ :

ವಪುಃ ಪ್ರಾದುರ್ಭಾವಾದನುಮಿತಮಿದಂ ಜನ್ಮನಿ ಪುರಾ
ಪುರಾರೇ ನ ಕ್ವಾಪಿ ಕ್ವಚಿದಪಿ ಭವನ್ತಂ ಪ್ರಣತವಾನ್ ।
ನಮನ್ಮುಕ್ತಃ ಸಂಪ್ರತ್ಯತನುರಹಮಗ್ರೇಽಪ್ಯನತಿಮಾ–
ನಿತೀಶ ಕ್ಷನ್ತವ್ಯಂ ತದಿದಮಪರಾಧದ್ವಯಮಪಿ ॥

ಎಂಬುದೊಂದು ಪದ್ಯವಿದೆ. ಅಲ್ಲಿಂದ ಮುಂದಕ್ಕೆ ಸ್ತೋತ್ರವು ಸಮಾಪ್ತವಾಗಿದೆ.

ಮನೋಹರವಾದ ಏತತ್ ಸ್ತೋತ್ರಮ್– ಈ ಸ್ತೋತ್ರವನ್ನು ಅಲಘುವೃತ್ತೈಃ– ದೊಡ್ಡದೊಡ್ಡ ವೃತ್ತಗಳಿಂದ ಚಕಾರ– ಮಾಡಿದನು.]

೩೩. ಅಸುರಸುರಮುನಿಗಳಲ್ಲಿ ಶ್ರೇಷ್ಠರಾದವರಿಂದ ಪೂಜಿತನಾಗಿರುವ, ಅನೇಕಗುಣಗಳಿಂದ ಕೂಡಿದವನೂ ನಿರ್ಗುಣನೂ ಆಗಿರುವ ಚಂದ್ರಶೇಖರನಾದ, ಈಶ್ವರನ ಗಣಗಳಲ್ಲೆಲ್ಲ ಶ್ರೇಷ್ಠನೆನಿಸಿದ ಪುಷ್ಪದಂತನು ಉತ್ತಮವಾದ ವೃತ್ತಗಳಿಂದ ಈ ಸ್ತೋತ್ರವನ್ನು ಮಾಡಿದನು.

ಅಹರಹರನವದ್ಯಂ ಧೂರ್ಜಟೇಃ ಸ್ತೋತ್ರಮೇತತ್
ಪಠತಿ ಪರಮಭಕ್ತ್ಯಾ ಶುದ್ಧಚಿತ್ತಃ ಪುಮಾನ್ ಯಃ ।
ಸ ಭವತಿ ಶಿವಲೋಕೇ ರುದ್ರತುಲ್ಯಸ್ತಥಾತ್ರ
ಪ್ರಚುರತರಧನಾಯುಃಪುತ್ರವಾನ್ ಕೀರ್ತಿಮಾಂಶ್ಚ । ೩೪ ॥

[ಪ್ರತಿಪದಾರ್ಥ:- ಧೂರ್ಜಟೇಃ- ಈಶ್ವರನ ಅನವದ್ಯಮ್- ನಿರ್ದುಷ್ಟವಾದ ಏತತ್ ಸ್ತೋತ್ರಮ್- ಈ ಸ್ತೋತ್ರವನ್ನು ಅಹರಹಃ- ಪ್ರತಿದಿನವೂ ಯಃ ಪುಮಾನ್- ಯಾವ ಪುರುಷನು ಶುದ್ಧಚಿತ್ತಃ– ಚಿತ್ತಶುದ್ಧಿಯಿಂದೊಡಗೂಡಿ ಪರಮಭಕ್ತ್ಯಾ– ಹೆಚ್ಚಿನ ಭಕ್ತಿಯಿಂದ ಪಠತಿ– ಪಠಿಸುತ್ತಾನೋ ಸಃ– ಅವನು ಶಿವಲೋಕೇ– ಶಿವಲೋಕದಲ್ಲಿ ರುದ್ರತುಲ್ಯಃ- ರುದ್ರನಿಗೆ ಸಮಾನನಾದವನು ಭವತಿ- ಆಗುತ್ತಾನೆ. ತಥಾ- ಹಾಗೂ ಅತ್ರ- ಇಲ್ಲಿ ಪ್ರಚುರತರಧನಾಯುಃಪುತ್ರವಾನ್- ಹೆಚ್ಚಿನ ಧನ, ಆಯುಸ್ಸು, ಪುತ್ರರು ಇವರನ್ನುಳ್ಳವನೂ ಕೀರ್ತಿಮಾಂಶ್ಚ- ಯಶಸ್ಸುಳ್ಳವನೂ ಭವತಿ- ಆಗುತ್ತಾನೆ.]

ಮಹೇಶಾನ್ನಾಪರೋ ದೇವೋ ಮಹಿಮ್ನೋ ನಾಪರಾ ಸ್ತುತಿಃ ।
ಅಘೋರಾನ್ನಾಪರೋ ಮಂತ್ರೋ ನಾಸ್ತಿ ತತ್ತ್ವಂ ಗುರೋಃ
ಪರಮ್ ॥ ೩೪ ॥

[ಪ್ರತಿಪದಾರ್ಥ:- ಮಹೇಶಾತ್- ಮಹೇಶ್ವರನಿಗಿಂತ ಅಪರಃ- ಮತ್ತೊಬ್ಬ ದೇವಃ- ದೇವನು ನ- ಇಲ್ಲ. ಮಹಿಮ್ನಃ- ಮಹಿಮ್ನಸ್ತೋತ್ರಕ್ಕಿಂತ ಅಪರಾ– ಮತ್ತೊಂದು ಸ್ತುತಿಃ- ಸ್ತೋತ್ರವು ನ- ಇಲ್ಲ. ಅಘೋರಾತ್– ಅಘೋರಮಂತ್ರಕ್ಕಿಂತ ಅಪರಃ– ಮತ್ತೊಂದು ಮಂತ್ರಃ- ಮಂತ್ರವು ನಾಸ್ತಿ- ಇಲ್ಲ. ಗುರೋಃ- ಗುರುವಿಗಿಂತ ಪರಮ್- ಹೆಚ್ಚಿನ ತತ್ತ್ವಮ್- ತತ್ತ್ವವು ನಾಸ್ತಿ- ಇಲ್ಲ.]

೩೫. ಮಹೇಶ್ವರನಿಗಿಂತ ಹೆಚ್ಚಿನ ದೇವನಿಲ್ಲ, ಮಹಿಮ್ನಃ ಸ್ತೋತ್ರಕ್ಕಿಂತ ಹೆಚ್ಚಿನ ಸ್ತೋತ್ರವಿಲ್ಲ, ಅಘೋರಮಂತ್ರಕ್ಕಿಂತ ಹೆಚ್ಚಿನ ಮಂತ್ರವಿಲ್ಲ, ಗುರುವಿಗಿಂತ ಹೆಚ್ಚಿನ ತತ್ತ್ವವಿಲ್ಲ.

ದೀಕ್ಷಾ ದಾನಂ ತಪಸ್ತೀರ್ಥಂ ಜ್ಞಾನಂ ಯೋಗಾದಿಕಾಃ ಕ್ರಿಯಾಃ ।
ಮಹಿಮ್ನಸ್ತವಪಾಠಸ್ಯ ಕಲಾಂ ನಾರ್ಹನ್ತಿ ಷೋಡಶೀಮ್[1] ॥ ೩೬ ॥

೩೬. ದೀಕ್ಷೆ, ದಾನ, ತಪಸ್ಸು, ತೀರ್ಥ, ಜ್ಞಾನ-ಯಾಗವೇ ಮುಂತಾದ ಕರ್ಮಗಳು- ಇವು ಮಹಿಮ್ನಃಸ್ತೋತ್ರ ಪಾಠದ ಹದಿನಾರನೆಯ ಪಾಲಿನ ಬೆಲೆಗೂ ಅರ್ಹವಲ್ಲ.

ಕುಸುಮದಶನನಾಮಾ ಸರ್ವಗನ್ಧರ್ವರಾಜಃ
ಶಿಶುಶಶಿಧರಮೌಲೇರ್ದೇವದೇವಸ್ಯ ದಾಸಃ ।
ಸ ಖಲು ನಿಜಮಹಿಮ್ನೋ ಭ್ರಷ್ಟ ಏವಾಸ್ಯ ರೋಷಾತ್
ಸ್ತವನಮಿದಮಕಾರ್ಷೀದ್ದಿವ್ಯದಿವ್ಯಂ ಮಹಿಮ್ನಃ ॥ ೩೭ ॥

೩೭. ಪುಷ್ಪದಂತನೆಂಬವನು ಸಕಲಗಂಧರ್ವರಾಜನು; ಬಾಲೇಂದುಶೇಖರನೂ ದೇವದೇವನೂ ಆದ ಮಹಾದೇವನ ದಾಸನು. ಆತನು ಈ ರುದ್ರನ ರೋಷನಿಮಿತ್ತವಾಗಿ ತನ್ನ ಮಹಿಮೆಯಿಂದ ಭ್ರಷ್ಟನಾದಾಗ ಈ ಪರಮದಿವ್ಯವಾದ ಶಿವ ಮಹಿಮ್ನಃಸ್ತೋತ್ರವನ್ನು ಮಾಡಿದನು.

ಸುರವರಮುನಿಪೂಜ್ಯಂ ಸ್ವರ್ಗಮೋಕ್ಷೈಕಹೇತುಂ
ಪಠತಿ ಯದಿ ಮನುಷ್ಯಃ ಪ್ರಾಞ್ಜಲಿರ್ನಾನ್ಯಚೇತಾಃ ।

1. ಈ ಶ್ಲೋಕದವರೆಗಿನ ಐದೂ ಸ್ತೋತ್ರದೊಳಗೆ ಸೇರಿದವುಗಳೇ ಎಂದು ಕೆಲವರ ಅಭಿಪ್ರಾಯ. ಇನ್ನು ಮುಂದೆ ಇರುವ ಶ್ಲೋಕಗಳನ್ನು ಯಾರೋ ಈಚೆಗೆ ಸೇರಿಸಿರಬೇಕೆಂದು ತೋರುತ್ತದೆ. ಪೀಠಿಕೆಯನ್ನು ನೋಡಿ.

ವ್ರಜತಿ ಶಿವಸಮೀಪಂ ಕಿಂನರೈಃ ಸ್ತೂಯಮಾನಃ
ಸ್ತವನಮಿದಮಮೋಘಂ ಪುಷ್ಪದನ್ತಪ್ರಣೀತಮ್ ॥ ೩೮ ॥

೩೮. ಸುರಶ್ರೇಷ್ಠರಿಂದಲೂ ಮುನಿಗಳಿಂದಲೂ ಪೂಜ್ಯವಾಗಿರುವ, ಸ್ವರ್ಗಕ್ಕೂ ಮೋಕ್ಷಕ್ಕೂ ತಾನೊಂದೇ ಕಾರಣವಾಗಿರುವ ಈ ಅಮೋಘವಾದ ಪುಷ್ಪದಂತರಚಿತವಾದ ಸ್ತೋತ್ರವನ್ನು ಬದ್ಧಾಂಜಲಿಯಾಗಿ ಅನನ್ಯಚಿತ್ತನಾಗಿ ಪಠಿಸುತ್ತಾನಾದರೆ ಕಿಂನರರಿಂದ ಸ್ತೋತ್ರಮಾಡಿಸಿಕೊಳ್ಳುತ್ತಾ ಶಿವನ ಸಮೀಪಕ್ಕೆ ಹೋಗುತ್ತಾನೆ.

ಆಗಮಾಪ್ತಮಿದಂ ಸ್ತೋತ್ರಂ ಪುಣ್ಯಂ ಗನ್ಧರ್ವಭಾಷಿತಮ್ ।
ಅನೌಪಮ್ಯಂ ಮನೋಹಾರಿ ಶಿವಮೀಶ್ವರವರ್ಣನಮ್ ॥ ೩೯ ॥

೩೯. ಆಗಮರೂಪದಿಂದ ಬಂದಿರುವ ಈ ಗಂಧರ್ವಪ್ರೋಕ್ತವಾದ ಪುಣ್ಯಸ್ತೋತ್ರವು ಅಸಮಾನವೂ ಮನೋಹರವೂ ಆದ ಮಂಗಲಕರವಾದ ಶಿವವರ್ಣನಾರೂಪವಾದದ್ದು.

ಇತ್ಯೇಷಾ ವಾಙ್ಮಯೀ ಪೂಜಾ ಶ್ರೀಮಚ್ಛಂಕರಪಾದಯೋಃ ।
ಅರ್ಪಿತಾ ತೇನ ದೇವೇಶಃ ಪ್ರೀಯತಾಂ ಮೇ ಸದಾಶಿವಃ ॥ ೪೦ ॥

೪೦. ಹೀಗೆಂಬ ಈ ವಾಙ್ಮಯಪೂಜೆಯನ್ನು ಶ್ರೀಮಚ್ಛಂಕರನ ಪಾದಗಳಲ್ಲಿ ಅರ್ಪಿಸಿರುವೆನು. ಆದರಿಂದ ನನ್ನ ವಿಷಯಕ್ಕೆ ಶ್ರೀಸದಾಶಿವನು ಪ್ರೀತನಾಗಲಿ!

ತವ ತತ್ತ್ವಂ ನ ಜಾನಾಮಿ ಕೀದೃಶೋಽಸಿ ಮಹೇಶ್ವರ ।
ಯಾದೃಶೋಽಸಿ ಮಹಾದೇವ ತಾದೃಶಾಯ ನಮೋ ನಮಃ ॥ ೪೧ ॥

೪೧. ಮಹೇಶ್ವರನೆ, ನೀನು ಎಂಥವನೋ ಆ ನಿನ್ನ ತತ್ತ್ವವನ್ನು ಅರಿಯೆನು. ಮಹಾದೇವನೆ, ನೀನು ಎಂಥವನೋ ಅಂಥವನಿಗೆ ನಮಸ್ಕಾರ, ನಮಸ್ಕಾರ!

ಏಕಕಾಲಂ ದ್ವಿಕಾಲಂ ವಾ ತ್ರಿಕಾಲಂ ಯಃ ಪಠೇನ್ನರಃ ।
ಸರ್ವಪಾಪವಿನಿರ್ಮುಕ್ತಃ ಶಿವಲೋಕೇ ಮಹೀಯತೇ ॥ ೪೨ ॥

೪೨. ಒಪ್ಪೊತ್ತು, ಅಥವಾ ಎರಡುಹೊತ್ತು, ಅಥವಾ ಮೂರು ಹೊತ್ತು ಯಾವ ಮನುಷ್ಯನು ಇದನ್ನು ಪಠಿಸುವನೋ ಅವನು ಸರ್ವಪಾಪಗಳಿಂದಲೂ ಮುಕ್ತನಾಗಿ ಶಿವಲೋಕದಲ್ಲಿ ಪೂಜ್ಯನಾಗಿರುವನು.

ಶ್ರೀಪುಷ್ಪದನ್ತಮುಖಪಙ್ಕಜನಿರ್ಗತೇನ
ಸ್ತೋತ್ರೇಣ ಕಿಲ್ಬಿಷಹರೇಣ ಹರಪ್ರಿಯೇಣ ।
ಕಣ್ಠಸ್ಥಿತೇನ ಪಠಿತೇನ ಸಮಾಹಿತೇನ
ಸುಪ್ರೀಣಿತೋ ಭವತಿ ಭೂತಪತಿರ್ಮಹೇಶಃ ॥ ೪೩ ॥

೪೩. ಶ್ರೀ ಪುಷ್ಪದಂತನ ಮುಖಕಮಲದಿಂದ ಹೊರಬಿದ್ದಿರುವ ಶಿವಪ್ರಿಯವಾದ ಪಾಪಹರವಾದ ಈ ಸ್ತೋತ್ರವನ್ನು ಕಂಠಸ್ಥವಾಗಿ ಮಾಡಿಕೊಂಡು ಸಮಾಹಿತಚಿತ್ತನಾಗಿ ಪಠಿಸಿದರೆ ಆದರಿಂದ ಭೂತಪತಿಯಾದ ಮಹೇಶ್ವರನು ಸುಪ್ರೀತನಾಗುವನು.

ಇತಿ ಶ್ರೀ ಪುಷ್ಪದನ್ತವಿರಚಿತಂ ಶಿವಮಹಿಮ್ನಃಸ್ತೋತ್ರಂ ಸಂಪೂರ್ಣಮ್

10-7-74, 2000, ಅಧ್ಯಾತ್ಮಪ್ರಕಾಶಮುದ್ರಣಾಲಯ, ಹೊಳೆನರಸೀಪುರ.

# ಕೆಲವು ಉಪಯುಕ್ತಗ್ರಂಥಗಳು

## (ಶ್ರೀಶ್ರೀಗಳವರ ಕೃತಿಗಳು)

೧. ಶಾಂಕರವೇದಾಂತಪ್ರಕ್ರಿಯೆ :—ವೇದಾಂತಾಭ್ಯಾಸವನ್ನು ಮಾಡುವವರು ಅವಶ್ಯವಾಗಿ ತಿಳಿದಿರಬೇಕಾದ ಶುದ್ಧವೇದಾಂತಪ್ರಕ್ರಿಯೆಯ ರೂಪರೇಖೆಯನ್ನು ಇಲ್ಲಿ ವಿವರಿಸಿದೆ.

೨. ಪರಿಶುದ್ಧವೇದಾಂತಸಾರ :—ಶಾಸ್ತ್ರದೃಷ್ಟಿ, ಸಾಕ್ಷಿಸ್ವರೂಪ, ಅದ್ವಿತೀಯತತ್ತ್ವ—ಈ ಮೂರು ವಿಷಯಗಳನ್ನು ಜಿಜ್ಞಾಸುಗಳಿಗೆ ಮನದಟ್ಟಾಗುವಂತೆ ಸುಲಭಶೈಲಿಯಲ್ಲಿ ಬರೆದಿದೆ.

೩. ಶಾಂಕರವೇದಾಂತದ ಮೂಲತತ್ತ್ವಗಳು :—1966ನೆಯ ಇಸವಿಯಲ್ಲಿ ದಾವಣಗೆರೆಯಲ್ಲಿ ನಡೆದ ಶಂಕರಸಪ್ತಾಹದ ಸಂದರ್ಭದಲ್ಲಿ ಶ್ರೀಶ್ರೀಗಳವರು ಅನುಗ್ರಹಿಸಿದ ೨೧ ಉಪನ್ಯಾಸಗಳಿವೆ. ಶಂಕರರ ಪರಮಸಿದ್ಧಾಂತವನ್ನರಿಯಲು ಈ ಗ್ರಂಥದ ಅವಲೋಕನವು ಸಹಕಾರಿಯಾಗಿದೆ.

೪. ದಕ್ಷಿಣಾಮೂರ್ತಿಸ್ತೋತ್ರ :—ನಮ್ಮಗಳ ಆತ್ಮನು ಅದ್ವಿತೀಯಕೂಟಸ್ಥ ನಿರ್ವಿಶೇಷಚೈತನ್ಯಸ್ವರೂಪನು ಎಂಬುದನ್ನು ಹೃದಯಂಗಮವಾಗಿ ವಿವರಿಸಿರುತ್ತದೆ. ಮೂಲಶ್ಲೋಕ, ವಿವರಣೆಗಳಿವೆ.

೫. ಉಪನ್ಯಾಸಮಂಜರಿ :—'ಕೇನೋಪನ್ಯಾಸಮಂಜರಿ', 'ಮುಂಡಕೋಪನ್ಯಾಸಮಂಜರಿ', 'ಕಾಠಕೋಪನ್ಯಾಸಮಂಜರಿ', 'ಪ್ರಶ್ನೋಪನ್ಯಾಸಮಂಜರಿ'—ಎಂಬ ಹೆಸರಿನಿಂದ ಪ್ರಕಟಿತವಾಗಿರುವ ಈ ಗ್ರಂಥಗಳು ಆಯಾ ಉಪನಿಷತ್ತುಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಉಪಕಾರಕವಾಗಿರುತ್ತವೆ.

೬. ಜೀವಂತವೇದಾಂತ:-ವೇದಾಂತವು ಜೀವಂತದರ್ಶನವೆನ್ನುವುದಕ್ಕೆ ಗುರುತುಗಳೇನು? ಎಂಬ ವಿಷಯವನ್ನು ಕುರಿತು ಶ್ರೀಶ್ರೀಗಳವರು ಮನೋಹರರೀತಿಯಿಂದ ವರ್ಣಿಸಿರುತ್ತಾರೆ. ಸಾಮಾನ್ಯವಿದ್ಯಾಭ್ಯಾಸವುಳ್ಳ ಸ್ತ್ರೀಪುರುಷರೆಲ್ಲರಿಗೂ ಪ್ರಯೋಜನವಾಗುವಂಥ ಸರಳವಾದ ಶೈಲಿಯಿಂದ ವಿಷಯವನ್ನು ಪ್ರತಿಪಾದಿಸಿದೆ. ೫೫ ಉಪನ್ಯಾಸಗಳಿವೆ.

ಉಳಿದ ಪುಸ್ತಕಗಳ ಈಗಿನ ಬೆಲೆಪಟ್ಟಿಗೆ ಬರೆಯಿರಿ.

ಕಾರ್ಯದರ್ಶಿ,

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.